VOLUME: 16 | 13 MARCH 2026 | ಶುಕ್ರವಾರ | RS: 2 | PAGE: 06 ISSUE: 48 ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ದಂಪತಿ ಸದ್ಯ ಹನಿಮೂನ್ ಖುಷಿಯಲ್ಲಿದ್ದಾರೆ. ಆದರೆ ರಶ್ಮಿಕಾ ಮಂದಣ್ಣರ ತಾಯಿ ಮಾತನಾಡಿದ್ದು ಎನ್ನಲಾದ ಆಡಿಯೋ ಕುರಿತು ನಟಿ ಗರಂ ಆಗಿದ್ದಾರೆ. ಎಂಟು ವರ್ಷಗಳ ಹಳೆಯ ಆಡಿಯೋವನ್ನು ಹರಡುತ್ತಿರುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳುವುದಾಗಿ ರಶ್ಮಿಕಾ ಎಚ್ಚರಿಕೆ ನೀಡಿದ್ದಾರೆ.



BHARATHA SARATHI
KANNADA DAILY NEWS PAPER
CALL 9740160669
# ಭಾರತ ಸಾರಥಿ
RNI KARKAN2011/44806
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ



# ಸೈಬರ್ ವಂಚನೆ: ಈವರೆಗೆ ರಾಜ್ಯದಲ್ಲಿ 500ಕ್ಕೂ ಹೆಚ್ಚು ಬಂಧನ

ಬೆಂಗಳೂರು: ರಾಜ್ಯದಲ್ಲಿ ಸೈಬರ್ ಅಪರಾಧಗಳಿಗೆ ಅಮಾಯಕರ ಬ್ಯಾಂಕ್ ಖಾತೆ ಬಳಸಲಾಗುತ್ತಿದ್ದ ಸುಮಾರು 42 ಸಾವಿರ ಮ್ಯೂಲ್ ಬ್ಯಾಂಕ್ ಖಾತೆಗಳನ್ನು ಪತ್ತೆ ಹಚ್ಚಲಾಗಿದ್ದು, ಈವರೆಗೂ 500ಕ್ಕಿಂತ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಸೈಬರ್ ಅಪರಾಧಗಳ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ವಿಧಾನಪರಿಷತ್ ಸದಸ್ಯ ಗೋವಿಂದರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ್, ಕಳೆದ 15 ವರ್ಷಗಳಲ್ಲಿ ತಂತ್ರಜ್ಞಾನ ಬಳೆದಂತೆ ಸೈಬರ್ ಅಪರಾಧಗಳು ಹೆಚ್ಚಾಗುತ್ತಿದೆ, ಇಂದಿನ ಆಧುನಿಕ ಯುಗದಲ್ಲಿ ನನ್ನ ಬ್ಯಾಂಕ್ ಅಕೌಂಟ್ ಸಹ ಸೇಫ್ ಇಲ್ಲ. ಹೀಗಾಗಿ ಇದರ ನಿಯಂತ್ರಣಕ್ಕೆ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಪ್ರತ್ಯೇಕ ಸೈಬರ್ ಕಮಾಂಡ್ ಸೆಂಟರ್ ರಚಿಸಲಾಗಿದೆ.



ಈ ಮೂಲಕ ರಾಜ್ಯದಲ್ಲಿ 42 ಸಾವಿರ ಮ್ಯೂಲ್ ಬ್ಯಾಂಕ್ ಖಾತೆಗಳನ್ನ ಸೈಬರ್ ವಂಚನೆಗೆ ಬಳಸುತ್ತಿರುವುದನ್ನು ಪತ್ತೆ ಹಚ್ಚಿ 500ಕ್ಕಿಂತ ಹೆಚ್ಚು ವಂಚಕರನ್ನು ಸೆರೆಹಿಡಿಯಲಾಗಿದೆ ಎಂದರು.

ಸೈಬರ್ ಅಪರಾಧ ನಿಯಂತ್ರಣ ಹಾಗೂ ಪ್ರಕರಣ ಪತ್ತೆಗೆ ಬೇರೆ ರಾಜ್ಯಗಳಿಗಿಂತ ಕರ್ನಾಟಕ ಉತ್ತಮ ಸ್ಥಾನದಲ್ಲಿದೆ. ಪ್ರತ್ಯೇಕ ಸೈಬರ್ ಕಮಾಂಡ್ ಘಟಕ ಸ್ಥಾಪಿಸಿ ರಾಜ್ಯದಲ್ಲಿ 43 ಸೆನ್ ಪೊಲೀಸ್ ಠಾಣೆ ನಿರ್ಮಿಸಲಾಗಿದೆ. ಸಾಮಾಜಿಕ ಜಾಲತಾಣದ ಮೂಲಕ ನಿರಂತರ ಸೈಬರ್ ಅಪರಾಧದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಇದರ ಪರಿಣಾಮ ಈ ವರ್ಷ ಸೈಬರ್ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿದೆ ಎಂದು ತಿಳಿಸಿದರು.

2024ರಲ್ಲಿ 22,483 ಸೈಬರ್ ಪ್ರಕರಣ ದಾಖಲಾದರೆ 2025ರಲ್ಲಿ 14,899 ಪ್ರಕರಣಗಳಿಗೆ ಇಳಿಕೆಯಾಗಿದೆ. 2020–21ರಲ್ಲಿ446 ಕೋಟಿ ವಂಚನೆಯಾಗಿದ್ದು, ಈ ಪೈಕಿ 97 ಕೋಟಿ ರಿಕವರಿ ಮಾಡಲಾಗಿದೆ. 2024ರಲ್ಲಿ 2399 ಕೋಟಿ ಪೈಕಿ 390 ಕೋಟಿ ನಗದು ವಶಕ್ಕೆ ಪಡೆಯಲಾಗಿದೆ. ಅದೇ ರೀತಿ 2025ರಲ್ಲಿ 2200 ಕೋಟಿಯಲ್ಲಿ 231 ಕೋಟಿ ಜಪ್ತಿ ಮಾಡಲಾಗಿದೆ. ಡಿಜಿಟಲ್ ಅರೆಸ್ಟ್ ಪ್ರಕರಣಗಳು ಸಹ ಕಡಿಮೆಯಾಗಿದೆ.



ಇರಾಕ್ ಪ್ರಾದೇಶಿಕ ನೀರಿನೊಳಗೆ ಅಮೆರಿಕ ಒಡೆತನದ ತೈಲ ಟ್ಯಾಂಕರ್ ಮೇಲೆ ಇರಾನ್ ನಡೆಸಿದ ಆತ್ಮಾಹುತಿ ದೋಣಿ ದಾಳಿಯಲ್ಲಿ ಓರ್ವ ಭಾರತೀಯ ಪ್ರಜೆ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಇರಾಕ್‌ನ ಪ್ರಾದೇಶಿಕ ನೀರನ ಪ್ರದೇಶವಾದ ಖೋರ್ ಅಲ್ ಜುಬೈರ್ ಬಂದರಿನಲ್ಲಿ ಅಮೆರಿಕ ಒಡೆತನದ ಮತ್ತು ಮಾರ್ಷಲ್ ದ್ವೀಪ ಧ್ವಜವನ್ನು ಹೊಂದಿರುವ ತೈಲ ಟ್ಯಾಂಕರ್ 'ಸಫೆಸಿಯಾ ವಿಷ್ಣು' ಮೇಲೆ ಇರಾನ್ ಆತ್ಮಾಹುತಿ ದೋಣಿ ದಾಳಿ ಮಾಡಿದೆ ಎಂದು ಮೂಲಗಳು ತಿಳಿಸಿವೆ.

# ಯುದ್ಧ ಅಂತ್ಯಕ್ಕೆ ಮುಂದಾದ ಇರಾನ್

ಟೆಹರಾನ್: ಅಮೆರಿಕ ಮತ್ತು ಇಸ್ರೇಲ್ ಜೊತೆಗೆ ನಡೆಯುತ್ತಿರುವ ಸಂಘರ್ಷವನ್ನು ಕೊನೆಗೊಳಿಸಲು ಇರಾನ್ ಮೂರು ಷರತ್ತುಗಳನ್ನು ಹಾಕಿದೆ.

ಯಾವುದೇ ನಿರ್ಣಯವು ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸಬೇಕು ಮತ್ತು ದೇಶವು ಭವಿಷ್ಯದ ದಾಳಿಯನ್ನು ಎದುರಿಸುವುದಿಲ್ಲ ಎಂದು ಖಾತರಿಪಡಿಸಬೇಕು ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪೆಜೆಶ್ಕಿಯಾನ್ ಯುದ್ಧದ ಸಮಯದಲ್ಲಿ ಉಂಟಾದ ಹಾನಿಗಳಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ರಷ್ಯಾ ಮತ್ತು ಪಾಕಿಸ್ತಾನದ ನಾಯಕರೊಂದಿಗೆ ಮಾತನಾಡುತ್ತಾ, ಈ ಪ್ರದೇಶದಲ್ಲಿ ಶಾಂತಿಗಾಗಿ ಇರಾನ್‌ನ ಬದ್ಧತೆಯನ್ನು ಪುನರುಚ್ಚರಿಸಿದ್ದೇನೆ. ಯಹೋದಿಗಳ ಆಡಳಿತದ ಇಸ್ರೇಲ್ ಮತ್ತು ಅಮೆರಿಕ ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸುವುದು, ಪರಿಹಾರ ನೀಡುವುದು ಮತ್ತು ಭವಿಷ್ಯದ ಆಕ್ರಮಣದ ವಿರುದ್ಧ ದೃಢವಾದ ಅಂತಾರಾಷ್ಟ್ರೀಯ ಖಾತ್ರಿಯನ್ನು ಒದಗಿಸಬೇಕು ಎಂದು ಅವರು ಬರೆದುಕೊಂಡಿದ್ದಾರೆ.

ಅಮೆರಿಕ ಒಂದು ವೇಳೆ ಇರಾನ್‌ನ ಬಂದರು ಮೇಲೆ ದಾಳಿ ಮಾಡಿದರೆ ಪರ್ಷಿಯನ್ ಕೊಲ್ಲಿಯಲ್ಲಿ ಯಾವುದೇ ಬಂದರು, ಆರ್ಥಿಕ ಕೇಂದ್ರ ಅಥವಾ ಸ್ಥಳದ ಮೇಲೆ ಭಾರಿ ಪ್ರಮಾಣದಲ್ಲಿ ಕಾರ್ಯಾಚರಣೆ ನಡೆಸಲಾಗುವುದು ಎಂದು ಇರಾನ್‌ನ ಸಶಸ್ತ್ರ ಪಡೆಗಳ ವಕ್ತಾರ ಅಬೋಲ್‌ಫಜಲ್ ಶೆಕಾರ್ಚಿ, ಸರ್ಕಾರಿ ಸುದ್ದಿಸಂಸ್ಥೆ ಯೊಂದಕ್ಕೆ ನೀಡಿದ ಹೇಳಿಕೆ ನಂತರ ಪೆಜೆಶ್ಕಿಯಾನ್ ಈ ರೀತಿಯ ಹೇಳಿಕೆ ನೀಡಿದ್ದಾರೆ.

ನಮ್ಮ ಬಂದರುಗಳು ಮತ್ತು ಹಡಗುಕಟ್ಟೆಗಳಿಗೆ ದಾಳಿ ಮಾಡಿದರೆ, ಪರ್ಷಿಯಲ್ ಕೊಲ್ಲಿಯ ಎಲ್ಲಾ ಬಂದರುಗಳು ಮತ್ತು ಹಡಗುಕಟ್ಟೆಗಳು ನಮ್ಮ ಕಾನೂನುಬದ್ಧ ಗುರಿಗಳಾಗುತ್ತವೆ. ಇಲ್ಲಿಯವರೆಗೆ ಮಾಡಿದ್ದಕ್ಕಿಂತ ಭಾರಿ ಪ್ರಮಾಣದಲ್ಲಿ ಕಾರ್ಯಾಚರಣೆಯನ್ನು ನಡೆಸುತ್ತವೆ. ಅಮೆರಿಕನ್ನರನ್ನು ತಮ್ಮ ಭೂಮಿಯಿಂದ ಹೊರಹಾಕಲು ನಾವು ಪ್ರದೇಶದ ದೇಶಗಳಿಗೆ ಕರೆ ನೀಡುತ್ತೇವೆ ಎಂದು ಶೆಕರ್ಚಿ ಎಚ್ಚರಿಕೆ ನೀಡಿದ್ದಾರೆ.

# ಸಿಲಿಂಡರ್ ವದಂತಿಗೆ ಕಿವಿಗೊಡಬೇಡಿ

ಬೆಂಗಳೂರು: ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗಬಹುದು ಎಂಬ ಆತಂಕ ಕೆಲವು ದಿನಗಳಿಂದ ಸಾರ್ವಜನಿಕರಲ್ಲಿ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸ್ಪಷ್ಟನೆ ನೀಡಿದೆ. ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ ಎಂದು ಇಲಾಖೆ ತಿಳಿಸಿದೆ.



ರಾಜ್ಯ ಸರ್ಕಾರವು ಪ್ರಮುಖ ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದ್ದು, ರಾಜ್ಯದಾದ್ಯಂತ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದು ಕಂಪನಿಗಳು ಸ್ಪಷ್ಟಪಡಿಸಿವೆ. ಮುಂಬರುವ ದಿನಗಳಿಗೂ ಸರಿಹೊಂದುವಷ್ಟು ಸಾಕಷ್ಟು ದಾಸ್ತಾನು ಲಭ್ಯವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಲಿಂಡರ್ ಕೊರತೆಯ ಬಗ್ಗೆ ಹರಡುತ್ತಿರುವ ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು ಎಂದು ಇಲಾಖೆ ಮನವಿ ಮಾಡಿದೆ. ಸಿಲಿಂಡರ್‌ಗಳ ಕೊರತೆಯಾಗಬಹುದು ಎಂಬ ಆತಂಕದಿಂದ ಅನಗತ್ಯವಾಗಿ ಮುಂಗಡ ಬುಕ್ಕಿಂಗ್ ಮಾಡುವುದು ಅಥವಾ ಸಂಗ್ರಹಿಸಿಡುವುದನ್ನು ತಪ್ಪಿಸಬೇಕು. ಇಂತಹ ಕ್ರಮಗಳಿಂದ ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿಯಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಮನವಿ ಮಾಡಲಾಗಿದೆ.

ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ ಸೇವೆಗಳಾದ ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆರೋಗ್ಯ ಕೇಂದ್ರಗಳು, ವಿದ್ಯಾರ್ಥಿನಿಲಯಗಳು, ಅಂಗನವಾಡಿ ಕೇಂದ್ರಗಳು, ಶಾಲೆ ಮತ್ತು ಕಾಲೇಜುಗಳ ಬಿಸಿಯೂಟ ಯೋಜನೆಗಳು, ಕಾರಾಗೃಹಗಳು ಹಾಗೂ ಇತರ ಸರ್ಕಾರಿ ಸಂಸ್ಥೆಗಳಿಗೆ ಎಲ್‌ಪಿಜಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಕ್ರಮ ವಹಿಸಲು.

# ಚಿಕ್ಕಬಳ್ಳಾಪುರದಲ್ಲಿ ಅಂತರರಾಷ್ಟ್ರೀಯ ಹೂವು ಮಾರುಕಟ್ಟೆ

ಬೆಂಗಳೂರು: ಚಿಕ್ಕಬಳ್ಳಾಪುರದಲ್ಲಿ ಹೂವಿನ ಮಾರುಕಟ್ಟೆ ನಿರ್ಮಾಣಕ್ಕೆ 141 ಕೋಟಿ ರೂ ಅನುದಾನವನ್ನು ಕಳೆದ ಬಜೆಟ್‌ನಲ್ಲಿ ಮೀಸಲಿರಿಸಲಾಗಿಡಲಾಗಿದೆ.

ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ನಿರ್ಮಾಣ ಮಾಡುವ ಗುರಿಯಿದೆ. ಈ ಸಂಬಂಧ ನಬಾರ್ಡ್ ಯೋಜನೆ ಮುಖಾಂತರ ತೋಟಗಾರಿಕೆ ಇಲಾಖೆಯು 20 ಎಕರೆ ಜಾಗ ಹಸ್ತಾಂತರಿಸಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿಂದು ಉತ್ತರಿಸಿದ ಸಚಿವರು, ನೀಡಲಾಗಿರುವ 20 ಕೋಟಿ ವೆಚ್ಚದಲ್ಲಿ ಉದ್ದೇಶಿತ ಹೂವಿನ ಮಾರುಕಟ್ಟೆ ನಿರ್ಮಾಣಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಟೆಂಡರ್ ಕರೆಯಲು ಸಿದ್ದತೆ ನಡೆಸಲಾಗಿದೆ. ಅಲ್ಲದೆ ಹೊಸಕೋಟೆಯಲ್ಲಿ 36 ಎಕರೆ ಜಾಗದಲ್ಲಿ ಪ್ರತ್ಯೇಕ ಹೂವಿನ ಮಾರುಕಟ್ಟೆ ನಿರ್ಮಿಸಲಾಗುತ್ತಿದೆ ಎಂದರು.

ಯೋಜನೆಯ ಅನುಷ್ಠಾನ ಕುರಿತಂತೆ ಹಸ್ತಾಂತರಿಸಲಾಗಿರುವ 20 ಎಕರೆ ಜಾಗದಲ್ಲಿ ಶೈತ್ಯಾಗಾರ ಸ್ಥಾಪನೆಗೆ ಸ್ಥಳಾವಕಾಶ ಕಲ್ಪಿಸಲಾಗಿದೆ. ಮುಂದಿನ ಹಂತದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಶೈತ್ಯಾಗಾರ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ವಿಧಾನ ಪರಿಷತ್‌ನಲ್ಲಿಂದು ಉತ್ತರಿಸಿದ ಸಚಿವರು, ನೀಡಲಾಗಿರುವ 20 ಕೋಟಿ ವೆಚ್ಚದಲ್ಲಿ ಉದ್ದೇಶಿತ ಹೂವಿನ ಮಾರುಕಟ್ಟೆ ನಿರ್ಮಾಣಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಟೆಂಡರ್ ಕರೆಯಲು ಸಿದ್ದತೆ ನಡೆಸಲಾಗಿದೆ. ಅಲ್ಲದೆ ಹೊಸಕೋಟೆಯಲ್ಲಿ 36 ಎಕರೆ ಜಾಗದಲ್ಲಿ ಪ್ರತ್ಯೇಕ ಹೂವಿನ ಮಾರುಕಟ್ಟೆ ನಿರ್ಮಿಸಲಾಗುತ್ತಿದೆ ಎಂದರು.

ಇದನ್ನೂ ಮೊದಲು ಸದನದಲ್ಲಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಗೋವಿಂದರಾಜ್, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ರಾಜ್ಯದಲ್ಲಿ ಹೆಚ್ಚು ಹೂ ಬೆಳೆಯಲಾಗುತ್ತಿದ್ದು, ಪ್ರತ್ಯೇಕ ಅಂತಾರಾಷ್ಟ್ರೀಯ ಮಟ್ಟದ ಹೂವಿನ ಮಾರುಕಟ್ಟೆ ಹಾಗೂ ಶೈತ್ಯಾಗಾರ ಸ್ಥಾಪಿಸಬೇಕಿದೆ ಎಂದು ಒತ್ತಾಯಿಸಿದರು.

ಸಾವಿರಾರು ಕೋಟಿ ಕೆಜಿ ಹೂಗಳನ್ನು ಇಂದು ಮೂರು ಜಿಲ್ಲೆಗಳಿಂದ ವಿದೇಶಗಳಿಗೆ ರಫ್ತಾಗುತ್ತಿದೆ. ಈ ಬಗ್ಗೆ ಚಿಕ್ಕಬಳ್ಳಾಪುರ ನಂದಿಕ್ರಾಸ್ ಬಳಿ ಉದ್ದೇಶಿತ 46 ಎಕರೆಯಲ್ಲಿ ಅಂತರಾಷ್ಟ್ರೀಯ ಮಟ್ಟದ ಹೂವಿನ ಮಾರ್ಕೆಟ್ ಹಾಗೂ ಶೈತ್ಯಾಗಾರ ನಿರ್ಮಾಣ ಮಾಡುವುದಾಗಿ ಕಳೆದ ವರ್ಷದ ಬಜೆಟ್‌ನಲ್ಲಿ ತಿಳಿಸಿದ್ದರೂ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. 46 ಎಕರೆಯಿಂದ 20 ಎಕರೆ ಇಳಿದಿದೆ.

ಅಲ್ಲದೆ, ಕೋಲಾರ ರೈತರು ಹೂ ಮಾರಾಟಕ್ಕೆ ಪ್ರತ್ಯೇಕ ಜಾಗವಿಲ್ಲದೆ ತೊಂದರೆಗೆ ಒಳಗಾಗಿದ್ದಾರೆ. ಹೀಗಾಗಿ ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದರು.


# ಹೈನುಗಾರರಿಗೆ ಗುಡ್‌ನ್ಯೂಸ್ ಕೊಟ್ಟ ಬಮೂಲ್

ಬೆಂಗಳೂರು: ನಷ್ಟದಲ್ಲಿದ್ದ ಬಮೂಲ್‌ಗೆ ಬೂಸ್ಟ್ ನೀಡಿರುವ ಬೆಂಗಳೂರು ನಗರ, ಗ್ರಾಮಾಂತರ ಮತ್ತು ದಕ್ಷಿಣ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಡಿ.ಕೆ.ಸುರೇಶ್ ಅವರು ಒಕ್ಕೂಟದ ಇತಿಹಾಸ ಉಳಿಸಿ, ರೈತರನ್ನು ರಕ್ಷಿಸಿ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಜೀವನ ಒದಗಿಸಿ, ಕಾರ್ಮಿಕರು ಮತ್ತು ಸಮಸ್ತ ಸಿಬ್ಬಂದಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಬಂಪರ್ ಕೊಡುಗೆ ನೀಡಲು ಮುಂದಾಗಿದ್ದಾರೆ.

ಈ ಕುರಿತು ಬಮೂಲ್ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಒಕ್ಕೂಟದಲ್ಲಿ 2294 ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. 1,27,644 ಸಕ್ರಿಯ ಸದಸ್ಯರಿದ್ದು, ಪ್ರತಿದಿನ 16.84 ಲಕ್ಷ ಕೆ.ಜಿ. ಹಾಲು ಶೇಖರಣೆ ಆಗುತ್ತಿದೆ. 9.71 ಲಕ್ಷ ಲೀಟರ್ ಹಾಲು ಮತ್ತು 2.30 ಲಕ್ಷ ಕೆ.ಜಿ. ಮೊಸರು ಮಾರಾಟವಾಗುತ್ತಿದೆ. ಕಳೆದ 2025ರ ಏಪ್ರಿಲ್ 1 ರಿಂದ 2026ರ ಮಾರ್ಚ್ 31ರವರೆಗೆ 59,39,78,492 ಕೆ.ಜಿ. ಹಾಲು ಉತ್ಪಾದನೆ ಆಗುತ್ತಿದ್ದು ಈ ಸಾಧನೆಗೆ ಕಾರಣರಾದವರೆಲ್ಲರಿಗೂ ಪ್ರೋತ್ಸಾಹವಾಗಿ ಬೋನಸ್ ನೀಡಲು ಮುಂದಾಗಿರುವುದಾಗಿ ಹೇಳಿದರು.

ಪ್ರತಿ ಕೆ.ಜಿ.ಹಾಲಿಗೆ ರೂ.38.21 ದರದಂತೆ ಒಕ್ಕೂಟದಿಂದ ಸಂಘಗಳಿಗೆ ಸರಾಸರಿ ಪಾವತಿಸಲಾಗುತ್ತದೆ. ಸಂಘಗಳಿಂದ ಹಾಲು ಉತ್ಪಾದಕರಿಗೆ ಪಾವತಿಸುವ ದರ ಪ್ರತಿ ಲೀಟರ್ ಹಾಲಿಗೆ ರೂ.36.15 ಇದ್ದು ಸಂಘಗಳ ನಿರ್ವಹಣೆಗೆ ಪ್ರತಿ ಕೆ.ಜಿ.ಹಾಲಿಗೆ ರೂ.1. ಪಾವತಿಸಲಾಗುತ್ತದೆ. ಇದರಿಂದ ರೈತರಿಗೆ ಉತ್ತೇಜನ ನೀಡಿದಂತಾಗುತ್ತದೆ. 2024–25ನೇ ಸಾಲಿನ ವಹಿವಾಟು ರೂ.2906 ಕೋಟಿ ಇದ್ದು, ಪ್ರಸಕ್ತ 2025–26ನೇ ಸಾಲಿಗೆ ಅಂದಾಜು ರೂ.3400 ಕೋಟಿ ವಹಿವಾಟು ಮಾಡಲಾಗುತ್ತಿದೆ. ಒಕ್ಕೂಟದ ಸಿಬ್ಬಂದಿಗಳಿಗೆ ಜುಲೈ–24 ರಿಂದ ಬಾಕಿ ಇದ್ದ 3 ಕಂತುಗಳ ತುಟ್ಟಿ ಭತ್ಯೆ ಮೂಲ ವೇತನದ ಶೇ 5.75ರಷ್ಟು ಆಗುವ ಮೊತ್ತ ರೂ.4.68 ಕೋಟಿ ಪಾವತಿಸಲಾಗುತ್ತದೆ ಎಂದರು.

2025–26ನೇ ಸಾಲಿನಲ್ಲಿ ಅಂದಾಜು ರೂ.60 ಕೋಟಿಗೂ ಅಧಿಕ ಆದಾಯ ನಿರೀಕ್ಷಿಸಲಾಗಿದ್ದು, ಒಕ್ಕೂಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1800 ಗುತ್ತಿಗೆ ಸಿಬ್ಬಂದಿಗಳಿಗೆ ತಲಾ ರೂ. 5ಸಾವಿರ



ವೆಚ್ಚದ ಉಡುಗೊರೆಯಾಗಿ ರೂ.90 ಲಕ್ಷ ನೀಡಲಾಗುತ್ತದೆ. 2294 ಸದಸ್ಯ ಸಂಘಗಳಿಗೆ ಪ್ರತಿ ಸಂಘಕ್ಕೆ ತಲಾ ರೂ.15 ಸಾವಿರದಂತೆ ಒಟ್ಟು 3.44 ಕೋಟಿ ವಿತರಿಸಲಾಗುತ್ತಿದೆ. ಒಕ್ಕೂಟದ ಇತಿಹಾಸದಲ್ಲಿಯೇ ಇದೊಂದು ಮೈಲಿಗಲ್ಲಾಗಿದ್ದು, ಕೆಲ ಸಂಘಗಳು ರೂ.1 ಲಕ್ಷದಿಂದ 3.5 ಲಕ್ಷದವರೆಗೆ ಹಣ ಪಡೆಯಲಿದ್ದಾರೆ. ಹಾಲು ಉತ್ಪನ್ನ ಮಾಡುವ ರೈತರಿಗೆ ಕೂಡ 1 ಕೆ.ಜಿ.ಗೆ ರೂ.1 ರಂತೆ ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದರು.

2022–23ರ ಅವಧಿಗೆ ಒಕ್ಕೂಟದಲ್ಲಿ ಪ್ರತಿದಿನ 15,53,363 ಲೀಟರ್, 2023–24ರಲ್ಲಿ 14,75,796. 2024–25ರಲ್ಲಿ 15,45,517 ಲೀ., ಮತ್ತು 2025–26ರಲ್ಲಿ 18,89,988 ಲೀಟರ್ ಹಾಲು ಸಂಸ್ಕರಣೆ ಮಾಡಲಾಗುತ್ತಿದೆ. ಕನಕಪುರ ಮೆಗಾ ಡೈರಿಯಲ್ಲಿ ಹಾಲು ಮತ್ತು ಮೊಸರು ಉತ್ಪಾದನೆ, ಉತ್ಪನ್ನಗಳಾದ ಕೆನೆರಹಿತ ಹಾಲಿನ ಪುಡಿ, ಕೆನೆ ಸಹಿತ ಹಾಲಿನ ಪುಡಿ, ಚಡ್ಡರ್ ಚೀಸ್, ಮೊಜ್ರೇಲ್ಲಾ ಚೀಸ್, ಪ್ರೋಸಸ್ ಚೀಸ್, ಯು.ಹೆಚ್.ಟಿ., ಫ್ಲೇಕ್ಸಿ ಹಾಲು, ವೇ ಪೌಡರ್ ಉತ್ಪಾದನೆ ಮಾಡಲಾಗುತ್ತಿದೆ ಎಂದ ಅವರು, 2021–22ರಲ್ಲಿ 4,40,252, 2022–23 ರಲ್ಲಿ 3,27,593, 2023–24ರಲ್ಲಿ 2,75,652, 2024–25ರಲ್ಲಿ 3,98,667 ಮತ್ತು 2025–26ರಲ್ಲಿ 7,17,901 ಲೀಟರ್ ಹಾಲು ಪ್ರತಿದಿನ ಸರಾಸರಿ ಹಾಲು ಸಂಸ್ಕರಣೆ ಆಗುತ್ತಿದೆ ಎಂದರು.

**24 ಗಂಟೆಯೊಳಗೆ ಗ್ರಾಹಕರ ಮನೆಗೆ:**

ಒಕ್ಕೂಟದ ಕಾರ್ಯಕ್ಷಮತೆಯಿಂದ ಸಂಸ್ಕರಣೆಗೊಂಡ ಹಾಲು 24 ಗಂಟೆಯೊಳಗೆ ಗ್ರಾಹಕರ ಮನೆಗೆ ತಲುಪುತ್ತದೆ. ಬಮೂಲ್‌ನಲ್ಲಿ 18 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದ್ದು, ಬೇಸಿಗೆಯ ವೇಳೆ 16 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದೆ. ಮಳೆಗಾಲದ ಅವಧಿಯಲ್ಲಿ 20 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದ್ದು, ಮುಂದಿನ ದಿನಗಳಲ್ಲಿ 24 ಲಕ್ಷ ಲೀಟರ್ ಹಾಲು ಮಾರಾಟ ಮಾಡುವ ಗುರಿ ಹೊಂದಿದ್ದೇವೆ. ಕಳೆದ 8 ತಿಂಗಳ ಅವಧಿಯಲ್ಲಿ ಸಾಕಷ್ಟು ಮಾರ್ಪಾಡುಗಳನ್ನು ಮಾಡಲಾಗಿದ್ದು, ಒಕ್ಕೂಟಕ್ಕೆ ಒಂದು ಶಕ್ತಿ ತರಲಾಗಿದೆ. ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಬೆಂಬಲಕ್ಕೆ ನಿಂತಿದ್ದು, ರೈತರಿಗೆ ರೂ.4 ಪ್ರೋತ್ಸಾಹ ಧನ ನೀಡುತ್ತಿದ್ದು, ಇತರೆ ಖಾಸಗಿ ಸಂಸ್ಥೆಗಳಿಗೆ ಹೋಲಿಸಿದರೆ ನಂದಿನಿ ಹಾಲು ಕಡಿಮೆ ದರದಲ್ಲಯೇ ವಿತರಣೆ ಆಗುತ್ತಿದೆ ಎಂದರು. ಸರ್ಕಾರದ ಆದೇಶವಿದ್ದರೂ ರೈತರ ಹಿತದೃಷ್ಟಿಯಿಂದ ರೈತರಿಗೆ ನೀಡುತ್ತಿದ್ದು, ಉಳಿದ ಹಾಲನ್ನು ಪದಾರ್ಥಗಳ ರೂಪದಲ್ಲಿ ಮಾರಾಟ ಮಾಡುತ್ತಿದ್ದೇವೆ. ಮೊಸರು, ತುಪ್ಪ, ಬೆಣ್ಣೆ ಸೇರಿ ನಂದಿನಿಯ ಯಾವುದೇ ಉತ್ಪನ್ನಗಳ ಬೆಲೆ ಹೆಚ್ಚು ಮಾಡಿಲ್ಲ. ಹೀಗಾಗಿ ಸಂಸ್ಥೆ ನಷ್ಟ ಅನುಭವಿಸಬೇಕಾಗಿದೆ. ಹೊಸ ಆಡಳಿತ ಮಂಡಳಿಯಿಂದ, ನಿರ್ದೇಶಕರ ಸಲಹೆ ಮೇರೆಗೆ ರೈತರಿಗೆ ನೆರವಾಗುತ್ತಿದ್ದು, ಪ್ರತಿ ಲೀಟರ್ ಗೆ 1 ರೂ.ನಂತೆ ಹಾಲು ಉತ್ಪಾದಕರಿಗೆ ಬೋನಸ್ ನೀಡುತ್ತಿರುವುದಾಗಿ ಹೇಳಿದರು. ಮಾ.31 ಅಥವಾ ಏ.10ರ ಒಳಗೆ ರೈತರ ಖಾತೆಗೆ ಹಣ ಜಮೆ ಆಗಲಿದ್ದು, ಬಮೂಲ್ ಇತಿಹಾಸದಲ್ಲೇ ಮೊದಲ ಬಾರಿಗೆ ಇಂತಹ ತೀರ್ಮಾನ ಕೈಗೊಳ್ಳಾಗಿದೆ. ಹಾಲು ಉತ್ಪಾದಕರ ಜತೆಗೆ ಸಿಬ್ಬಂದಿ, ಗುತ್ತಿಗೆ ಕಾರ್ಮಿಕರಿಗೂ ಉಡುಗೊರೆ ನೀಡಲು ಉದ್ದೇಶಿಸಿದೆ ಎಂದರು.

# ಡಿಂಗ್ರಿ ನಾಗರಾಜ್ ಅವಿರೋಧ ಆಯ್ಕೆ



ಬೆಂಗಳೂರು: ಕರ್ನಾಟಕ ಚಲನಚಿತ್ರ ಪೋಷಕರ ಕಲಾವಿದರ ಸಂಘದ ಅಧ್ಯಕ್ಷರಾಗಿ ಹಿರಿಯ ನಟ, ರಂಗಭೂಮಿ ಕಲಾವಿದ ಡಿಂಗ್ರಿ ನಾಗರಾಜ್ ಮೂರನೇ ಬಾರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಆಡುಗೋಡಿ ಶ್ರೀನಿವಾಸ್ ಎರಡನೇ ಬಾರಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಗೌರವ ಅಧ್ಯಕ್ಷರಾದ ಗಂಡಸಿ ಸದಾನಂದ ಸ್ವಾಮಿ ಅವರು ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿ, 79 ವರ್ಷ ವಯಸ್ಸಿನ ಡಿಂಗ್ರಿ ನಾಗರಾಜ್ ಅವರು 800 ಕ್ಕೂ ಅಧಿಕ ಚಲನಚಿತ್ರಗಳಲ್ಲಿ ನಟಿಸಿದ್ದು, ಹತ್ತು ಸಾವಿರಕ್ಕೂ ಅಧಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಐದು ದಶಕಗಳಿಗೂ ಅಧಿಕ ಸಮಯದಿಂದ ಕಲಾವಿದರಾಗಿರುವ ಡಿಂಗ್ರಿ ನಾಗರಾಜ್, ಕೋವಿಡ್ ಸಂಕಷ್ಟ ಸಂದರ್ಭದಲ್ಲಿ ಕಲಾವಿದರಿಗೆ ನೆರವು ನೀಡಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜೊತೆಗೆ ಚಲನಚಿತ್ರ ನಟ ಹಾಗೂ ನಿರ್ಮಾಪಕರಾದ ಗಣೇಶ್ ರಾವ್ ಕೆಸರ್ಕರ್ ಮತ್ತು ಹಿರಿಯ ನಟಿ ನವನೀತಂ ಅಭಿನಂದನೆ ಸಲ್ಲಿಸಿ, ಸಂಘದ ಅಭಿವೃದ್ಧಿಗೆ ನೂತನ ಪದಾಧಿಕಾರಿಗಳು ಮತ್ತಷ್ಟು ಸೇವೆ ಸಲ್ಲಿಸಲಿ ಎಂದು ಹಾರೈಸಿದ್ದಾರೆ.

# ಸ್ವರಾಜ್ ಎಕ್ಸ್‌ಪ್ರೆಸ್ ವಾಹಿನಿ ಲೋಕಾರ್ಪಣೆ

ಬೆಂಗಳೂರು: ನಗರದ ಟೌನ್ ಹಾಲ್‌ನಲ್ಲಿ ಸ್ವರಾಜ್ ಎಕ್ಸ್‌ಪ್ರೆಸ್ ವಾಹಿನಿಯ ಲೋಕಾರ್ಪಣೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ದಿನೇಶ್ ಗುಂಡೂರಾವ್ ಅವರು ವಾಹಿನಿಯ ಲೋಗೋವನ್ನು ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಹೊಸ ವಾಹಿನಿಗೆ ಶುಭಾಶಯಗಳನ್ನು ತಿಳಿಸಿ, ರಾಜ್ಯದ ಜನತೆಗೆ ಉತ್ತಮ ಸೇವೆ ಸಲ್ಲಿಸುವಂತೆ ಮಾಧ್ಯಮ ಮಿತ್ರರಿಗೆ ಕರೆ ನೀಡಿದರು. ಮಾಧ್ಯಮಗಳು ಸರ್ಕಾರದ ಒಂದು ಅಂಗವಾಗಿ ಕೆಲಸ ಮಾಡುತ್ತಾ ಜನರ ಸಮಸ್ಯೆಗಳನ್ನು ಬೆಳಕಿಗೆ ತರುವುದರ ಜೊತೆಗೆ ಸಮಾಜದ ಅಭಿವೃದ್ಧಿಗೆ ಸಹಕಾರಿಯಾಗಬೇಕು ಎಂದು ಹೇಳಿದರು.




ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಆರ್.ವಿ. ಮಮತ ದೇವರಾಜ್, ನಿರ್ಮಾಪಕ ಹಾಗೂ ಬೊಮ್ಮನಹಳ್ಳಿ ಬಿಬಿಎಂಪಿ ಮಾಜಿ ಸದಸ್ಯ ಸೈಯದ್ ಸಲಾಂ, ನಟ ಹಾಗೂ ನಿರ್ಮಾಪಕ ಗಂಡಸಿ ಸದಾನಂದ ಸ್ವಾಮಿ, ಹೋರಾಟಗಾರ ಕೆ.ಸಿ. ರಾಜಪ್ಪ, ಕರವೇ ಶಿವರಾಮೇಗೌಡ್ರು, ವಾಹಿನಿಯ ಸಂಪಾದಕ ಕನ್ನಡ ಶಾಫಿ, ಸಮಾಜ ಸೇವಕರಾದ ಡಾ. ಬೇಗೂರ್ ಅಬ್ದುಲ್, ಶಿಕ್ಷಕಿ ಜಾಸ್ಮಿನ್, ನಾಯಕನಟ ಪ್ರತಾಪ್ ಸಿಂಹ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.



ಈ ವೇಳೆ ಮಾತನಾಡಿದ ಗಣ್ಯರು, ಸ್ವರಾಜ್ ಎಕ್ಸ್‌ಪ್ರೆಸ್ ವಾಹಿನಿ ಸಮಾಜದ ಸಮಸ್ಯೆಗಳು, ಸಾರ್ವಜನಿಕ ವಿಚಾರಗಳು ಹಾಗೂ ಸತ್ಯಸಂಧ ಸುದ್ದಿಗಳನ್ನು ಜನತೆಗೆ ತಲುಪಿಸುವಲ್ಲಿ ಪ್ರಮುಖ ಪಾತ್ರವಹಿಸಲಿ ಎಂದು ಆಶಿಸಿದರು. ಮಾಧ್ಯಮಗಳು ಸಮಾಜದ ಅಭಿವೃದ್ಧಿಗೆ ಮಾರ್ಗದರ್ಶಕರಾಗಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು, ಮಾಧ್ಯಮದವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಸಣ್ಣ ಆಘಾತದಿಂದಲೂ ಬೆನ್ನು ಮೂಳೆಗೆ ಸಮಸ್ಯೆ: ತಜ್ಞರು

ಬೆಂಗಳೂರು

ರಸ್ತೆ ಸಂಚಾರ ಅಪಘಾತಗಳು, ಬೀಳುವಿಕೆಗಳು, ಕ್ರೀಡಾ ಗಾಯಗಳು ಮತ್ತು ವಯಸ್ಸಾದವರಲ್ಲಿ ದುರ್ಬಲ ಮುರಿತಗಳಂತಹ ಅಂಶಗಳಿಂದಾಗಿ ಭಾರತದಾದ್ಯಂತ ಬೆನ್ನುಮೂಳೆ ಮತ್ತು ಆಘಾತ-ಸಂಬಂಧಿತ ಗಾಯಗಳ ಸಂಭವವು ಸ್ಥಿರವಾಗಿ ಹೆಚ್ಚುತ್ತಿದೆ. ಇತ್ತೀಚಿನ ಜಾಗೃತಿ ಉಪಕ್ರಮದ ಸಂದರ್ಭದಲ್ಲಿ, ಪ್ರಮುಖ ತಜ್ಞರಾದ ಡಾ.ರವಿರಾಜ್ ಎ., ಡಾ. ಅಮೃತಲಾಲ್ ಮಸ್ಕರೇನ್ಹಸ್ ಮತ್ತು ಡಾ. ರಘು ನಾಗರಾಜ್ ಅವರು ಆರಂಭಿಕ ರೋಗನಿರ್ಣಯ, ಸಕಾಲಿಕ ಚಿಕಿತ್ಸೆ ಮತ್ತು ರಚನಾತ್ಮಕ ಪುನರ್ವಸತಿ ಶಾಶ್ವತ ಅಂಗವೈಕಲ್ಯವನ್ನು ತಡೆಗಟ್ಟುವಲ್ಲಿ ಮತ್ತು ಚೇತರಿಕೆಯ ಫಲಿತಾಂಶಗಳನ್ನು ಸುಧಾರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ ಎಂದು ಒತ್ತಿ ಹೇಳಿದರು.
ಸಣ್ಣ ಆಘಾತವು ಸಹ ಕಶೇರುಖಂಡಗಳ ಮುರಿತಗಳು, ಬೆನ್ನುಮೂಳೆಯ ಅಸ್ಥಿರತೆ ಅಥವಾ ಬೆನ್ನುಹುರಿಗೆ ಹಾನಿ ಸೇರಿದಂತೆ ಗಂಭೀರ ಬೆನ್ನುಮೂಳೆಯ ಗಾಯಗಳಿಗೆ ಕಾರಣವಾಗಬಹುದು ಎಂದು ತಜ್ಞರು ವಿವರಿಸಿದರು.
ನಿರಂತರ ಕುತ್ತಿಗೆ ಅಥವಾ ಬೆನ್ನು ನೋವು, ತೋಳುಗಳು ಅಥವಾ ಕಾಲುಗಳಿಗೆ ನೋವು ಹರಡುವುದು, ಮರಗಟ್ಟುವಿಕೆ, ಅಂಗಗಳ ದೌರ್ಬಲ್ಯ, ನಡೆಯಲು ತೊಂದರೆ ಅಥವಾ ಮೂತ್ರಕೋಶ ಮತ್ತು ಕರುಳಿನ ಅಡಚಣೆಗಳನ್ನು ಅನುಭವಿಸುವ ವ್ಯಕ್ತಿಗಳು ತ್ವರಿತ ವೈದ್ಯಕೀಯ ಮೌಲ್ಯಮಾಪನವನ್ನು ಪಡೆಯಬೇಕು.



ವಿಳಂಬವಾದ ರೋಗನಿರ್ಣಯವು ಪ್ರಗತಿಶೀಲ ವಿರೂಪತೆ ಮತ್ತು ನರವೈಜ್ಞಾನಿಕ ತೊಡಕುಗಳಿಗೆ ಕಾರಣವಾಗಬಹುದು.
ಕನಿಷ್ಠ ಪ್ರಮಾಣದ ಶಸ್ತ್ರಚಿಕಿತ್ಸಾ ತಂತ್ರಗಳು ಸೇರಿದಂತೆ ಆಧುನಿಕ ಬೆನ್ನುಮೂಳೆಯ ಆರೈಕೆಯಲ್ಲಿನ ಪ್ರಗತಿಗಳು ಸೂಕ್ತ ರೋಗಿಗಳಿಗೆ ಚೇತರಿಕೆಯ ಸಮಯವನ್ನು ಕಡಿಮೆ ಮಾಡುವಾಗ ಚಿಕಿತ್ಸೆಯ ಫಲಿತಾಂಶಗಳನ್ನು ಗಮನಾರ್ಹವಾಗಿ ಸುಧಾರಿಸಿವೆ.
ಮೂಳೆ ಆಘಾತ ತಜ್ಞರು ಮಣಿಕಟ್ಟು, ಸೊಂಟ, ಎಲುಬು ಮತ್ತು ಪಾದದ ಮುರಿತಗಳ ನಿಖರವಾದ ರೋಗನಿರ್ಣಯ ಮತ್ತು ನಿರ್ವಹಣೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದ್ದಾರೆ, ಇವು ಸಾಮಾನ್ಯವಾಗಿ ಚಿಕಿತ್ಸೆ ಪಡೆಯುವ ಗಾಯಗಳಲ್ಲಿ ಸೇರಿವೆ. ಬಿಗಿತ, ಕಡಿಮೆ ಚಲನಶೀಲತೆ ಅಥವಾ ಸಂಧಿವಾತದಂತಹ ದೀರ್ಘಕಾಲೀನ ತೊಡಕುಗಳನ್ನು ತಡೆಗಟ್ಟಲು ಸರಿಯಾದ ಜೋಡಣೆ ಅತ್ಯಗತ್ಯ.
ಕೆಲವು ಸ್ಥಿರ ಮುರಿತಗಳನ್ನು ನಿಶ್ಚಲತೆಯೊಂದಿಗೆ ಸಂಪ್ರದಾಯವಾದಿಯಾಗಿ ನಿರ್ವಹಿಸಬಹುದಾದರೂ, ಸ್ಥಳಾಂತರಗೊಂಡ ಅಥವಾ ಅಸ್ಥಿರ ಮುರಿತಗಳು ಅಂಗರಚನಾ ಜೋಡಣೆಯನ್ನು ಪುನಃಸ್ಥಾಪಿಸಲು ಮತ್ತು ಆರಂಭಿಕ ಸಜ್ಜುಗೊಳಿಸುವಿಕೆಯನ್ನು ಸಕ್ರಿಯಗೊಳಿಸಲು ಶಸ್ತ್ರಚಿಕಿತ್ಸೆಯ ಸ್ಥಿರೀಕರಣದ ಅಗತ್ಯವಿರುತ್ತದೆ ಎಂದಿದ್ದಾರೆ.
ಆಸ್ಟಿಯೊಪೊರೋಸಿಸ್ ಸಂಬಂಧಿತ ಮುರಿತಗಳ ಹೆಚ್ಚುತ್ತಿರುವ ಹೊರೆಯ ಬಗ್ಗೆ, ವಿಶೇಷವಾಗಿ ಋತುಬಂಧದ ನಂತರದ ಮಹಿಳೆಯರಲ್ಲಿ ವೈದ್ಯರು ಮತ್ತಷ್ಟು ಕಳವಳ ವ್ಯಕ್ತಪಡಿಸಿದ್ದಾರೆ. ಭಾರತದಲ್ಲಿ, ವ್ಯಾಪಕವಾದ ವಿಟಮಿನ್ ಡಿ ಕೊರತೆ, ಜಡ ಜೀವನಶೈಲಿ ಮತ್ತು ಮೂಳೆ ಆರೋಗ್ಯ ತಪಾಸಣೆಯ ಬಗ್ಗೆ ಸೀಮಿತ ಅರಿವು ಮುರಿತದ ಅಪಾಯವನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ. ನಿರ್ದಿಷ್ಟವಾಗಿ ಸೊಂಟ ಮುರಿತಗಳು, ತಕ್ಷಣ ಚಿಕಿತ್ಸೆ ನೀಡದಿದ್ದರೆ ಚಲನಶೀಲತೆ, ಸ್ವಾತಂತ್ರ್ಯ ಮತ್ತು ಒಟ್ಟಾರೆ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತವೆ. ಆದ್ದರಿಂದ ತಜ್ಞರು 40-50 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ, ವಿಶೇಷವಾಗಿ ಋತುಬಂಧದ ನಂತರ ಮಹಿಳೆಯರಿಗೆ ಮೂಳೆ ಖನಿಜ ಸಾಂದ್ರತೆಯ ಮೌಲ್ಯಮಾಪನಗಳನ್ನು ಶಿಫಾರಸು ಮಾಡುತ್ತಾರೆ.

# 90ನೇ ಮುತ್ತೂಟ್ ಗೋಲ್ಡ್ ಪಾಯಿಂಟ್ ಶಾಖೆ



ಬೆಂಗಳೂರು

138 ವರ್ಷಗಳಷ್ಟು ಹಳೆಯದಾದ ಮುತ್ತೂಟ್ ಪಪ್ಪಚನ್ ಗ್ರೂಪ್ (ಮುತ್ತೂಟ್ ಬ್ಲೂ) ನ ಅಮೂಲ್ಯ ಲೋಹಗಳ ವಿಭಾಗವಾದ ಮುತ್ತೂಟ್ ಎಕ್ಸಿಮ್ (ಪ್ರೈ) ಲಿಮಿಟೆಡ್, ಮುತ್ತೂಟ್ ಗೋಲ್ಡ್ ಪಾಯಿಂಟ್, ಅಂಗಡಿ 33/16/೦ ಅನ್ನಪೂರ್ಣೇಶ್ವರಿ ಆರ್ಕೇಡ್, ಮೈಸೂರು ರಸ್ತೆ, ಮೆಟ್ರೋ ಪಿಲ್ಲರ್ ಸಂಖ್ಯೆ 649, ಕೆಂಗೇರಿ ಎದುರು, ಬೆಂಗಳೂರು, ಕರ್ನಾಟಕ – 560060 ನಲ್ಲಿ ತನ್ನ ಹೊಸ ಗೋಲ್ಡ್ ಪಾಯಿಂಟ್ ಕೇಂದ್ರದ ಅದ್ಧೂರಿ ಉದ್ಘಾಟನೆಯನ್ನು ಹೆಮ್ಮೆಯಿಂದ ಘೋಷಿಸುತ್ತಿದೆ. ಇದು ಭಾರತದಲ್ಲಿ 90ನೇ ಶಾಖೆ, ಬೆಂಗಳೂರಿನಲ್ಲಿ 6ನೇ ಮತ್ತು ಕರ್ನಾಟಕದಲ್ಲಿ 14ನೇ ಶಾಖೆಯಾಗಿದೆ.
ಕೆಂಗೇರಿ ಮತ್ತು ಸುತ್ತಮುತ್ತಲಿನ ಗ್ರಾಹಕರಿಗೆ ಪಾರದರ್ಶಕ, ವೈಜ್ಞಾನಿಕ ಮತ್ತು ಜವಾಬ್ದಾರಿಯುತ ಚಿನ್ನದ ಮರುಬಳಕೆಯನ್ನು ಹೆಚ್ಚು ಲಭ್ಯವಾಗುವಂತೆ ಮಾಡುವುದು ಹೊಸ ಗೋಲ್ಡ್ ಪಾಯಿಂಟ್ ಕೇಂದ್ರದ ಉದ್ದೇಶವಾಗಿದೆ.
ಕೆಂಗೇರಿ ಗೋಲ್ಡ್ ಪಾಯಿಂಟ್ ಕೇಂದ್ರವು ಖರೀದಿದಾರರಿಗೆ ಹಳೆಯ ಮತ್ತು ಬಳಸಿದ ಚಿನ್ನವನ್ನು ಸುರಕ್ಷಿತ ಮತ್ತು ವಿಶ್ವಾಸಾರ್ಹ ರೀತಿಯಲ್ಲಿ ಮಾರಾಟ ಮಾಡಲು ಅನುವು ಮಾಡಿಕೊಡುತ್ತದೆ. ಮುತ್ತೂಟ್ ಗೋಲ್ಡ್ ಪಾಯಿಂಟ್ ಕೇಂದ್ರಗಳು ಪಾರದರ್ಶಕತೆಗೆ ತಮ್ಮ ಬದ್ಧತೆಗೆ ಹೆಸರುವಾಸಿಯಾಗಿದ್ದು, ಗ್ರಾಹಕರು ನ್ಯಾಯಯುತ ಮತ್ತು ನಿಖರವಾದ ಮೌಲ್ಯವನ್ನು ಪಡೆಯುವಾಗ ಪೂರ್ಣ ಮೌಲ್ಯಮಾಪನ ಪ್ರಕ್ರಿಯೆಯನ್ನು ನೇರವಾಗಿ ವೀಕ್ಷಿಸಲು ಅನುವು ಮಾಡಿಕೊಡುತ್ತದೆ.
ಮುತ್ತೂಟ್ ಪಪ್ಪಚನ್ ಗ್ರೂಪ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಮುತ್ತೂಟ್ ಎಕ್ಸಿಮ್‌ನ ವ್ಯವಸ್ಥಾಪಕ ನಿರ್ದೇಶಕ ಥಾಮಸ್ ಮುತ್ತೂಟ್, "ಬೆಂಗಳೂರಿನ ಕೆಂಗೇರಿಯಲ್ಲಿ 90 ನೇ ಮುತ್ತೂಟ್ ಗೋಲ್ಡ್ ಪಾಯಿಂಟ್ ಶಾಖೆಯನ್ನು ಉದ್ಘಾಟಿಸಲು ನಮಗೆ ಸಂತೋಷವಾಗಿದೆ. ಕರ್ನಾಟಕವು ಯಾವಾಗಲೂ 'ಚಿನ್ನದ ಭೂಮಿ' ಆಗಿದ್ದು, ಭಾರತದ ಚಿನ್ನದ ನಿಕ್ಷೇಪಗಳಿಗೆ ಗಣನೀಯ ಕೊಡುಗೆ ನೀಡುತ್ತದೆ. ಆದ್ದರಿಂದ, ಕರ್ನಾಟಕವು ನಮಗೆ ಪ್ರಮುಖ ಮಾರುಕಟ್ಟೆಯಾಗಿ ಮುಂದುವರೆದಿದೆ ಮತ್ತು ಈ ಹೊಸ ಕೇಂದ್ರದೊಂದಿಗೆ, ಬೆಂಗಳೂರಿನ ಕೆಂಗೇರಿಯ ಜನರಿಗೆ ವೈಜ್ಞಾನಿಕ ಮತ್ತು ಪಾರದರ್ಶಕ ಚಿನ್ನದ ಮರುಬಳಕೆಯನ್ನು ಹೆಚ್ಚು ಪ್ರವೇಶಿಸುವಂತೆ ಮಾಡುವ ಗುರಿಯನ್ನು ನಾವು ಹೊಂದಿದ್ದೇವೆ.
ಮುತ್ತೂಟ್ ಎಕ್ಸಿಮ್‌ನಲ್ಲಿ, ಸುಸ್ಥಿರ ಮತ್ತು ನೈತಿಕ ಮರುಬಳಕೆ ವ್ಯವಸ್ಥೆಯನ್ನು ಬೆಂಬಲಿಸುವಾಗ ಗ್ರಾಹಕರು ತಮ್ಮ ಚಿನ್ನದ ನಿಜವಾದ ಮೌಲ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು ನಮ್ಮ ಪ್ರಯತ್ನವಾಗಿದೆ."

# 'ಮೂತ್ರಪಿಂಡ ಆರೈಕೆಯಲ್ಲಿ ಪ್ರಮುಖ ಮೈಲಿಗಲ್ಲು'




ಬೆಂಗಳೂರು

ಸುಧಾರಿತ ಮೂತ್ರಪಿಂಡ ಆರೈಕೆಯಲ್ಲಿ ಮಹತ್ವದ ಸಾಧನೆ ಮಾಡಿರುವ ಗ್ಲೆನೀಗಲ್ಸ್ ಬಿಜಿಎಸ್ ಆಸ್ಪತ್ರೆ (ಎ ಫೋರ್ಟಿಸ್ ಹೆಲ್ತ್‌ಕೇರ್ ನೆಟ್‌ವರ್ಕ್), ಬೆಂಗಳೂರು, ಯಶಸ್ವಿಯಾಗಿ 1000 ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸಿ ಪ್ರಮುಖ ಮೈಲಿಗಲ್ಲು ಸಾಧಿಸಿದೆ.
ವಿಶ್ವ ಮೂತ್ರಪಿಂಡ ದಿನದ ಅಂಗವಾಗಿ ಈ ಮಹತ್ವದ ಸಾಧನೆಯನ್ನು ಆಚರಿಸಲು ಆಸ್ಪತ್ರೆ "ರೀನಲ್ ವಾರಿಯರ್ ಲೀಗ್" ಎಂಬ ವಿಶೇಷ ಕ್ರೀಡಾ ಕಾರ್ಯಕ್ರಮವನ್ನು ಆಯೋಜಿಸಿತು. ಈ ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ಮೂತ್ರಪಿಂಡ ದಾನಿಗಳು ಮತ್ತು ಪ್ರತಿರೋಪಣಾ ಸ್ವೀಕರಿಸಿದವರು ಭಾಗವಹಿಸಿ ತಮ್ಮ ಧೈರ್ಯ, ಪುನಶ್ಚೇತನ ಮತ್ತು ಆರೋಗ್ಯಕರ ಜೀವನದ ಸಂದೇಶವನ್ನು ಹಂಚಿಕೊಂಡರು.
ಕ್ರೀಡಾ ಕಾರ್ಯಕ್ರಮವು ಪ್ರತಿರೋಪಣೆಯ ನಂತರವೂ ಜೀವನ ಚುರುಕಾಗಿ ಹಾಗೂ ಸಕ್ರಿಯವಾಗಿ ಸಾಗಬಹುದು ಎಂಬುದನ್ನು ತೋರಿಸಿತು. ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರನ್ನು ಮಾಧ್ಯಮಗಳ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.
ಈ ಸಂದರ್ಭದಲ್ಲಿ ಮಾತನಾಡಿದ ಡಾ. ಅನಿಲಕುಮಾರ್ ಬಿ ಟಿ, ಮುಖ್ಯಸ್ಥರು ಮತ್ತು ಹಿರಿಯ ಸಲಹೆಗಾರರು ನೆಫ್ರಾಲಜಿ ಮತ್ತು ಟ್ರಾನ್ಸ್‌ಪ್ಲಾಂಟ್ ವೈದ್ಯರು, ಹೇಳಿದರು.
"1000 ಮೂತ್ರಪಿಂಡ ಕಸಿ ಮೈಲಿಗಲ್ಲು ತಲುಪಿರುವುದು ನಮ್ಮ ತಂಡದ ಸಮರ್ಪಣೆ ಹಾಗೂ ರೋಗಿಗಳು ಮತ್ತು ಅವರ ಕುಟುಂಬಗಳು ನಮ್ಮ ಮೇಲೆ ಇಟ್ಟಿರುವ ವಿಶ್ವಾಸದ ಪ್ರತೀಕವಾಗಿದೆ."
ಡಾ. ನರೇಂದ್ರ ಎಸ್, ಮುಖ್ಯಸ್ಥರು ಮತ್ತು ಹಿರಿಯ ಸಲಹೆಗಾರರು ಯೂರಾಲಜಿ ಮತ್ತು ರೀನಲ್ ಟ್ರಾನ್ಸ್‌ಪ್ಲಾಂಟ್ ಶಸ್ತ್ರಚಿಕಿತ್ಸೆ, ಹೇಳಿದರು:
"ಪ್ರತಿ ಪ್ರತಿರೋಪಣೆಯೂ ಸಂಕೀರ್ಣವಾದ ಶಸ್ತ್ರಚಿಕಿತ್ಸಾ ಪ್ರಕ್ರಿಯೆಯಾಗಿದ್ದು, ಶಸ್ತ್ರಚಿಕಿತ್ಸಕರು, ನೆಫ್ರಾಲಜಿಸ್ಟ್‌ಗಳು, ಟ್ರಾನ್ಸ್‌ಪ್ಲಾಂಟ್ ಸಂಯೋಜಕರು ಹಾಗೂ ಬೆಂಬಲ ತಂಡಗಳ ಸಹಕಾರದಿಂದ ಸಾಧ್ಯವಾಗುತ್ತದೆ."

# ನಾಲ್ಕು ವಿಶೇಷ ಚಿಕಿತ್ಸಾಲಯಗಳ ಪ್ರಾರಂಭ

ಬೆಂಗಳೂರು

ಸೂಕ್ಷ್ಮ ಸ್ವರೂಪದ ಮತ್ತು ಹೆಚ್ಚು ಗಮನಕ್ಕೆ ಬಾರದ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸಲು ಫೋರ್ಟಿಸ್ ಹೆಲ್ತ್ ಕೇರ್ ಬೆಂಗಳೂರಿನಲ್ಲಿರುವ ತನ್ನ ಆಸ್ಪತ್ರೆಗಳ ಜಾಲದಲ್ಲಿ ನಾಲ್ಕು ವಿಶೇಷ ಚಿಕಿತ್ಸಾಲಯಗಳನ್ನು ಪ್ರಾರಂಭಿಸಿದೆ.
ರೋಗಿ-ಕೇಂದ್ರಿತ ಮತ್ತು ಸಮಗ್ರ ಆರೋಗ್ಯ ರಕ್ಷಣೆ ಒದಗಿಸುವ ಫೋರ್ಟಿಸ್ ಹೆಲ್ತ್ ಕೇರ್ ನ ಬದ್ಧತೆಯನ್ನು ಇದು ಬಲಪಡಿಸುತ್ತದೆ. ಮ್ಯಾನ್ ಕ್ಲಿನಿಕ್, ಇನ್ ಕಂಟಿನೆನ್ಸ್ ಕ್ಲಿನಿಕ್, ರೆಸ್ಟೋರೇಟಿವ್ ಗೈನಕಾಲಜಿ ಕ್ಲಿನಿಕ್ ಮತ್ತು ಮೊಬೈಲ್ ಲಿಥೊ ಟ್ರಿಪ್ಸಿ ಸೇವೆಗಳನ್ನು ಹೊಸದಾಗಿ ಪರಿಚಯಿಸಲಾಗಿದೆ.
ಸಾಮಾಜಿಕ ಕಳಂಕ ಅಥವಾ ಸೀಮಿತ ಅರಿವಿನಿಂದಾಗಿ ನಿಯಮಿತವಾಗಿ ಚಿಕಿತ್ಸೆ ಪಡೆಯದೆ ಉಳಿಯುವ ಸೂಕ್ಷ್ಮ ಮತ್ತು ಹೆಚ್ಚಾಗಿ ಚರ್ಚಿಸದ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸಲು ಈ ವಿಶೇಷ ಚಿಕಿತ್ಸಾಲಯಗಳನ್ನು ವಿನ್ಯಾಸಗೊಳಿಸಲಾಗಿದೆ.
ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಸಚಿವ ಶರಣ್ ಪ್ರಕಾಶ್ ಪಾಟೀಲ ಅವರು ಕ್ಲಿನಿಕ್ ಗಳನ್ನು ಉದ್ಘಾಟಿಸಿದರು. ಫೋರ್ಟಿಸ್ ನ ಪ್ರಮುಖ ವೈದ್ಯರು,




ಆಸ್ಪತ್ರೆಯ ಉನ್ನತ ಅಧಿಕಾರಿಗಳು, ಸಿಬ್ಬಂದಿ, ರೋಗಿಗಳು ಮತ್ತು ಗಣ್ಯ ಅತಿಥಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.ಲೈಂಗಿಕ ಸ್ವಾಸ್ಥ್ಯ, ಪ್ರಾಸ್ಟೇಟ್ ಆರೋಗ್ಯ, ಸಂತಾನೋತ್ಪತ್ತಿ ಸಮಸ್ಯೆ, ಹಾರ್ಮೋನುಗಳ ಅಸಮತೋಲನ ಮತ್ತು ಜೀವನಶೈಲಿ-ಸಂಬಂಧಿತ ಪರಿಸ್ಥಿತಿಗಳು ಸೇರಿದಂತೆ ಪುರುಷರ ಆರೋಗ್ಯ ಕಾಳಜಿಗಳಿಗೆ ಗಮನ ಕೇಂದ್ರೀಕರಿಸಲು ಮೀಸಲಾದ ಕೇಂದ್ರ ಇದಾಗಿದೆ. ಗೌಪ್ಯತೆ, ಕ್ಲಿನಿಕಲ್ ಶ್ರೇಷ್ಠತೆ ಮತ್ತು ಸಮಗ್ರ, ಬಹುಬಗೆಯ ಚಿಕಿತ್ಸಾ ವಿಧಾನದ ಮೇಲೆ ಇದು ಒತ್ತು ನೀಡಲಿದೆ.

# ಇನ್ಸೋಲೇಷನ್ ಎನರ್ಜಿ ಲಿಮಿಟೆಡ್ ಷೇರುಗಳ ಮಹತ್ವದ ಸಾಧನೆ



ಬೆಂಗಳೂರು


ಸೋಲಾರ್ ಪ್ಯಾನಲ್ ತಯಾರಿಕಾ ಕ್ಷೇತ್ರದ ಪ್ರಮುಖ ಕಂಪನಿಯಾದ ಇನ್ಸೋಲೇಷನ್ ಎನರ್ಜಿ ಲಿಮಿಟೆಡ್ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ (ಎನ್‌ಎಸ್‌ಇ) ಮೇನ್‌ಬೋರ್ಡ್‌ನಲ್ಲಿ ಯಶಸ್ವಿಯಾಗಿ ಪಟ್ಟಿಗೊಂಡಿದೆ. 1 ರೂಪಾಯಿ ಮುಖಬೆಲೆಯ 22,03,94,625 ಇಕ್ವಿಟಿ ಷೇರುಗಳನ್ನು ಹೊಂದಿರುವ ಕಂಪನಿ ಹಿಂದಿರುಗಿ ಬಿಎಸ್‌ಇ ಎಸ್‌ಎಂಇ ಪ್ಲಾಟ್‌ಫಾರ್ಮ್‌ನಲ್ಲಿ ಪಟ್ಟಿಗೊಂಡಿತ್ತು, ಈಗ ಮೇನ್‌ಬೋರ್ಡ್‌ಗೆ ಮೈಗ್ರೇಶನ್ ಮತ್ತು ಎನ್‌ಎಸ್‌ಇ ಕ್ಯಾಪಿಟಲ್ ಮಾರ್ಕೆಟ್ ಸೆಗ್ಮೆಂಟ್‌ನಲ್ಲಿ ನೇರ ಪಟ್ಟಿಗೆ ಅಂತಿಮ ಅನುಮೋದನೆ ಪಡೆದಿದೆ. ಸೋಮವಾರದಿಂದ ಷೇರುಗಳು ಎರಡೂ ಪ್ರಮುಖ ಎಕ್ಸ್‌ಚೇಂಜ್‌ಗಳಲ್ಲಿ ವಹಿವಾಟಿಗೆ ಲಭ್ಯವಿವೆ.
ಕಂಪನಿಯ ಅಧ್ಯಕ್ಷ ಶ್ರೀ ಮನೀಷ್ ಗುಪ್ತಾ ಈ ಸಾಧನೆಯನ್ನು "ಐತಿಹಾಸಿಕ ಮೈಲುಗಲ್ಲು" ಎಂದು ಹೇಳಿ, ಹೂಡಿಕೆದಾರರ ವಿಶ್ವಾಸ, ತಂಡದ ಪರಿಶ್ರಮ ಮತ್ತು ಬಲವಾದ ಕಾರ್ಪೊರೇಟ್ ಗವರ್ನೆನ್ಸ್ ಫಲವಾಗಿದೆ ಎಂದರು.
ವ್ಯವಸ್ಥಾಪಕ ನಿರ್ದೇಶಕ ಶ್ರೀ ವಿಕಾಸ್ ಜೈನ್, ತಾಂತ್ರಿಕ ನವೀನತೆ, ಉತ್ಪಾದನಾ ಸಾಮರ್ಥ್ಯದ ವಿಸ್ತರಣೆ ಮತ್ತು ಗುಣಮಟ್ಟದ ಉತ್ಪನ್ನಗಳ ಮೂಲಕ ಕಂಪನಿ ಸೋಲಾರ್ ಕ್ಷೇತ್ರದಲ್ಲಿ ತನ್ನ ಬಲವನ್ನು ಹೆಚ್ಚಿಸಲು ಬದ್ಧವಾಗಿದೆ ಎಂದರು.
ಶಕ್ತಿ ಸಚಿವ ಹೀರಾಲಾಲ್ ನಾಗರ್, ರಾಜಸ್ಥಾನವನ್ನು ಸೋಲಾರ್ ಮ್ಯಾನುಫ್ಯಾಕ್ಚರಿಂಗ್ ಹಬ್ ಆಗಿ ಸ್ಥಾಪಿಸಲು ಇನ್ಸೋಲೇಷನ್ ಎನರ್ಜಿ ಲಿಮಿಟೆಡ್ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಹೇಳಿದ್ದಾರೆ. ಅವರು ಈ ಲಿಸ್ಟಿಂಗ್ ರಾಜ್ಯದ ಕೈಗಾರಿಕಾ ಅಭಿವೃದ್ಧಿ ಮತ್ತು ಸ್ವಚ್ಛ ಶಕ್ತಿಯ ವಿಸ್ತರಣೆಗೆ ಸಕಾರಾತ್ಮಕ ಸೂಚನೆ ನೀಡುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

# ಎಲ್.ಪಿ.ಜಿ ದಾಸ್ತಾನು ಕೊರತೆ ಇಲ್ಲ

ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ ಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದೆಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಜಗದೀಶ.ಜಿ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

# ಸಹಭಾಗಿತ್ವ ಘೋಷಣೆ




ಬೆಂಗಳೂರು

ಭಾರತದಲ್ಲಿ ಹೆಚ್ಚುತ್ತಿರುವ ಮಕ್ಕಳ ಸ್ಥೂಲಕಾಯತೆ ಸಮಸ್ಯೆಯನ್ನು ನಿಯಂತ್ರಿಸಲು ಮತ್ತು ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಆರ್ಥಿಕ ನೆರವು ನೀಡುವ ಉದ್ದೇಶದೊಂದಿಗೆ 'ಡಬ್ಲ್ಯೂಎಚ್‌ಓ ಫೌಂಡೇಶನ್' ಮತ್ತು 'ನೋವೋ ನಾರ್ಡಿಸ್ಕ್' ಸಂಸ್ಥೆಗಳು ಇಂದು ಹೊಸ ಸಹಭಾಗಿತ್ವ ಮಾಡಿಕೊಂಡಿವೆ. ಈ ಸಹಯೋಗವು ಶಾಲಾ ಆಧಾರಿತ ಆರೋಗ್ಯ ಕಾರ್ಯಕ್ರಮಗಳ ಮೂಲಕ ಸ್ಥೂಲಕಾಯತೆ ತಡೆಗಟ್ಟುವ ಗುರಿಯನ್ನು ಹೊಂದಿದ್ದು, ಭಾರತ ಸರ್ಕಾರದ 'ಆಯುಷ್ಮಾನ್ ಭಾರತ್ ಶಾಲಾ ಆರೋಗ್ಯ ಮತ್ತು ಸ್ವಾಸ್ಥ್ಯ ಕಾರ್ಯಕ್ರಮ' ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ 'ಆರೋಗ್ಯ ಉತ್ತೇಜಕ ಶಾಲೆಗಳ' ಚೌಕಟ್ಟಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಇಂದು ಜಾಗತಿಕವಾಗಿ ಅಪೌಷ್ಟಿಕತೆಗಿಂತಲೂ, ಅತಿಯಾದ ತೂಕ ಮತ್ತು ಸ್ಥೂಲಕಾಯತೆ ಹೆಚ್ಚಿನ ಸಾವುಗಳಿಗೆ ಕಾರಣವಾಗುತ್ತಿವೆ. ಇದು ಹೃದಯರಕ್ತನಾಳದ ಕಾಯಿಲೆಗಳು ಮತ್ತು ಟೈಪ್ 2 ಮಧುಮೇಹ ಸೇರಿದಂತೆ ಹಲವಾರು ಸಾಂಕ್ರಾಮಿಕವಲ್ಲದ ರೋಗಗಳಿಗೆ ನೇರ ಸಂಬಂಧ ಹೊಂದಿದೆ. ಬಾಲ್ಯದಲ್ಲಿ ಕಂಡುಬರುವ ಅತಿಯಾದ ತೂಕವು ಮುಂದಿನ ಜೀವನದಲ್ಲಿ ಸ್ಥೂಲಕಾಯತೆ ಮತ್ತು ಅದಕ್ಕೆ ಸಂಬಂಧಿಸಿದ ಆರೋಗ್ಯದ ಅಪಾಯಗಳನ್ನು ಹೆಚ್ಚಿಸುತ್ತದೆ.

## 15ರಂದು ವಿಶೇಷ ಶಿಬಿರ

ರಾಮನಗರ

ವಿಶ್ವವಿಖ್ಯಾತ ಚನ್ನಪಟ್ಟಣದ ಬೊಂಬೆಗಳ ಐತಿಹಾಸಿಕ ಮಹತ್ವ ಮತ್ತು ಅವುಗಳ ಮುಂದಿನ ಸಾಧ್ಯತೆಗಳ ಕುರಿತು ಚರ್ಚಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ವತಿಯಿಂದ 'ಚನ್ನಪಟ್ಟಣದ ಬೊಂಬೆಗಳು ಕನ್ನಡದ ಅಸ್ಮಿತೆ' ಎಂಬ ಒಂದು ದಿನದ ವಿಶೇಷ ಶಿಬಿರವನ್ನು ಆಯೋಜಿಸಲಾಗಿದೆ. ಇದೇ 15ರ ಭಾನುವಾರ ಬೆಳಿಗ್ಗೆ 10.30ಕ್ಕೆ ರಾಮನಗರದ ಜಾನಪದ ಲೋಕದ ಬಯಲು ರಂಗಮಂದಿರದಲ್ಲಿ ಈ ಕಾರ್ಯಕ್ರಮ ಜರುಗಲಿದೆ.

ಮುಖ್ಯ ಅತಿಥಿಗಳಾಗಿ ಕೇಂದ್ರ ಸರ್ಕಾರದ ಅಭಿವೃದ್ಧಿ ಆಯುಕ್ತರಾದ (ಕರಕುಶಲ) ದೇವರಮನಿ ಎಸ್.ಸಿ. ಹಾಗೂ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್ ಭಾಗವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಪ್ರೊ. ಹಿ.ಚಿ. ಬೋರಲಿಂಗಯ್ಯ ವಹಿಸಲಿದ್ದಾರೆ.

ವೈವಿಧ್ಯಮಯ ವಿಷಯಗಳ ಮಂಡನೆ: ಈ ಶಿಬಿರದಲ್ಲಿ ಚನ್ನಪಟ್ಟಣದ ಬೊಂಬೆ ಉದ್ಯಮದ ವಿವಿಧ ಆಯಾಮಗಳ ಕುರಿತು ತಜ್ಞರು ಪ್ರಾತ್ಯಕ್ಷಿಕೆಯೊಂದಿಗೆ ಮಾತನಾಡಲಿದ್ದಾರೆ.

ಸಿದ್ದರಾಮಯ್ಯ (ನೀಲಸಂದ್ರ): ಬೊಂಬೆ ತಯಾರಿಕೆಯ ಪಾರಂಪರಿಕ ಜ್ಞಾನ.

ಶಹೆದಾ ನೂರಿ: ಮಹಿಳೆಯರಿಗೆ ಬೊಂಬೆ ತಯಾರಿಕೆಯಲ್ಲಿ ತರಬೇತಿ ಮತ್ತು ಉದ್ಯೋಗದ ಅವಕಾಶಗಳು.

ಬಿ. ವೆಂಕಟೇಶ್: ಬೊಂಬೆಗಳ ನೂತನ ಕಲ್ಪನೆ, ವಿನ್ಯಾಸ ಹಾಗೂ ಹೊಸ ಸಾಧ್ಯತೆಗಳು.

ಎಂ. ಭೂಪತಿ: ಬದಲಾಗುತ್ತಿರುವ ಕಾಲಘಟ್ಟದಲ್ಲಿ ಚನ್ನಪಟ್ಟಣ ಬೊಂಬೆಗಳ ಸ್ಥಿತಿಗತಿ.

ಶ್ರೀನಿವಾಸ್ ಮೂರ್ತಿ: ಜಾಗತಿಕ ಮಟ್ಟದಲ್ಲಿ ಬೊಂಬೆಗಳ ಮಾರುಕಟ್ಟೆ ಮತ್ತು ಅದರ ವಿಸ್ತರಣೆ.

ಡಾ. ಶಿವರಾಜ್ ಬ್ಯಾಡರಹಳ್ಳಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು, ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಹಾಗೂ ಡಾ. ಪಿ.ವಿ. ನಿರಂಜನಾರಾಧ್ಯ ಗೌರವ ಉಪಸ್ಥಿತರಿರುವರು.

## ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ



ಚಿಂತಾಮಣಿ

ಶಿಡ್ಲಘಟ್ಟ ತಾಲ್ಲೂಕಿನ ಆಬ್ಲೂಡು ಸಿಆರ್‌ಪಿ ವ್ಯಾಪ್ತಿಯ ಕನ್ನಪ್ಪನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾರದಾ ಪೂಜೆ ಹಾಗೂ ಏಳನೇ ತರಗತಿ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಬೀಳ್ಕೊಡುಗೆ ಸಮಾರಂಭವು ಅರ್ಥಪೂರ್ಣವಾಗಿ ಜರುಗಿತು.

ಸಂಸ್ಕಾರಯುತ ಶಿಕ್ಷಣದ ಅನಿವಾರ್ಯತೆ: ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಿವೃತ್ತ ಮುಖ್ಯ ಶಿಕ್ಷಕ ಎ.ವಿ. ವೆಂಕಟನರಸಪ್ಪ ಅವರು ಮಾತನಾಡಿ, "ಮಕ್ಕಳು ಕೇವಲ ಅಂಕ ಗಳಿಕೆಗೆ ಸೀಮಿತವಾಗದೆ, ವಿದ್ಯಾಭ್ಯಾಸದ ಜೊತೆಗೆ ಸಂಸ್ಕಾರವಂತರಾಗಬೇಕು. ಉತ್ತಮ ಗುಣಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಗೌರವ ಸಿಗಲು ಸಾಧ್ಯ," ಎಂದು ತಿಳಿಸಿದರು.

ಸಹ ಶಿಕ್ಷಕಿ ಸಿ. ಸುಧಾ ಶ್ರೀ ಮಾತನಾಡಿ, ವಿದ್ಯಾರ್ಥಿಗಳು ಬಾಲ್ಯದಿಂದಲೇ ಶಿಸ್ತು ಅಳವಡಿಸಿಕೊಳ್ಳಬೇಕು ಮತ್ತು ಪೋಷಕರಿಗೆ ವಿಧೇಯರಾಗಿ ನಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಶಿಕ್ಷಕಿ ವಿ.ಎ. ಸೌಮ್ಯ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ನಡೆಸಿಕೊಟ್ಟ ದೇಶಭಕ್ತಿ ಗೀತೆಗಳು ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದವು.

ಶಾಲೆಯ ಮುಖ್ಯ ಶಿಕ್ಷಕ ಕೆ.ಎನ್. ಮಂಜುನಾಥ್ ಅವರು ತಮ್ಮ ಮಗಳಾದ ಎಂ. ಅಕ್ಷಯ ಅವರ ಸ್ಮರಣಾರ್ಥ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿಗಳನ್ನು ವಿತರಿಸಿದ್ದಲ್ಲದೆ, ಸಿಹಿ ಊಟದ ವ್ಯವಸ್ಥೆ ಮಾಡುವ ಮೂಲಕ ಮಾದರಿಯಾದರು. ಈ ವೇಳೆ ಎಸ್.ಡಿ.ಎಂ.ಸಿ ಅಧ್ಯಕ್ಷರು, ಸದಸ್ಯರು, ಅಡುಗೆ ಸಿಬ್ಬಂದಿ ಪುಷ್ಪಲತಾ ಹಾಗೂ ಪೋಷಕರು ಉಪಸ್ಥಿತರಿದ್ದು, ಮುಂದಿನ ಹಂತದ ಶಿಕ್ಷಣಕ್ಕೆ ತೆರಳುತ್ತಿರುವ ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

## ಕಾಲಮಿತಿಯಲ್ಲಿ ಕೆಲಸ ಮುಗಿಸಲು ಜಿಲ್ಲಾಧಿಕಾರಿಗಳ ತಾಕೀತು

ತುಮಕೂರು

ಜಿಲ್ಲೆಯಲ್ಲಿ ನಡೆಯುತ್ತಿರುವ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಇದೇ 20ರ ವೇಳೆಗೆ ಶೇ. 95ರಷ್ಟು ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಗುರಿ ನೀಡಿದ್ದಾರೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಅವರು ರಾಜ್ಯದ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳೊಂದಿಗೆ ನಡೆಸಿದ ವಿಡಿಯೋ ಕಾನ್ಫರೆನ್ಸ್ ಸಭೆಯ ನಂತರ, ಜಿಲ್ಲೆಯ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಮತಗಟ್ಟೆ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳು ಸಭೆ ನಡೆಸಿದರು.

ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, "ಪ್ರಸ್ತುತ ತುಮಕೂರು ಜಿಲ್ಲೆಯು ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಶೇ. 93.07 ಪ್ರಗತಿ ಸಾಧಿಸಿದೆ. ಜಿಲ್ಲೆಯ ಈ ಸಾಧನೆಯನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳು ಶ್ಲಾಘಿಸಿದ್ದಾರೆ. ಈ ಲವಲವಿಕೆಯನ್ನು ಮುಂದುವರಿಸಿ, ಮಾ. 20ರಂದು ನಡೆಯಲಿರುವ ಮುಂದಿನ ಸಭೆಯ ವೇಳೆಗೆ ಕನಿಷ್ಠ ಶೇ. 95ರಷ್ಟು ಗುರಿ ತಲುಪಬೇಕು," ಎಂದು ಸೂಚಿಸಿದರು.

ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಬಾಕಿ ಇರುವ ತಿದ್ದುಪಡಿ ಹಾಗೂ ಸೇರ್ಪಡೆ ಕಾರ್ಯಗಳನ್ನು ಕಾಲಮಿತಿಯಲ್ಲಿ ಮುಗಿಸಬೇಕು. ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಎಚ್ಚರ ವಹಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಲಾಯಿತು.

ಸಭೆಯಲ್ಲಿ ಎಲ್ಲಾ ತಾಲೂಕುಗಳ ಚುನಾವಣಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖಾ ಸಿಬ್ಬಂದಿ ಉಪಸ್ಥಿತರಿದ್ದರು.

## ಮಹಿಳೆಯರು ಸಮಾಜದ ಅಭಿವೃದ್ಧಿಗೆ ಅಡಿಗಲ್ಲು ; ಜಿ.ಮುನಿರೆಡ್ಡಿ

ಬಂಗಾರಪೇಟೆ

ಮಹಿಳೆಯರು ಸಮಾಜದ ಅಭಿವೃದ್ಧಿಗೆ ಅಡಿಗಲ್ಲುಗಳಾಗಿದ್ದು, ಅವರ ಹಕ್ಕುಗಳು, ಸಮಾನತೆ ಮತ್ತು ಸಾಧನೆಗಳನ್ನು ಗೌರವಿಸುವ ಉದ್ದೇಶದಿಂದ ಪ್ರತಿವರ್ಷ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಜಿ.ಮುನಿರೆಡ್ಡಿ ಹೇಳಿದರು.

ಪಟ್ಟಣದ ಅಕ್ಕಚ್ಚಮ್ಮ ಕಲ್ಯಾಣ ಮಂಟಪದಲ್ಲಿ ಚಿಗುರು ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ 115ನೇ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು, ಮಹಿಳೆಯರು ಕುಟುಂಬ ಹಾಗೂ ಸಮಾಜದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದು, ಅವರ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಕೆ ಶಶಿಕಲಾ ಅವರು ಮಾತನಾಡಿ, ಇಂದಿನ ಸಮಾಜದಲ್ಲಿ ಮಹಿಳೆಯರು ಶಿಕ್ಷಣ, ವೈದ್ಯಕೀಯ, ಆಡಳಿತ, ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಸಂತಸದ ವಿಷಯವಾಗಿದೆ. ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಒದಗಿಸಿದರೆ ಅವರು ದೇಶದ ಪ್ರಗತಿಗೆ ದೊಡ್ಡ ಕೊಡುಗೆ ನೀಡಬಲ್ಲರು ಎಂದ ಅವರು ಮಹಿಳೆಯರ ಆತ್ಮವಿಶ್ವಾಸವನ್ನು ಹೆಚ್ಚಿಸುವ ಕಾರ್ಯಕ್ರಮಗಳು ಮತ್ತು ಜಾಗೃತಿ ಕಾರ್ಯಕ್ರಮಗಳು ಇಂದಿನ ದಿನಗಳಲ್ಲಿ ಅತ್ಯಂತ ಅಗತ್ಯವಾಗಿದೆ ಎಂದರು.

ಚಿಗುರು ಟ್ರಸ್ಟ್ ಅಧ್ಯಕ್ಷೆ ಎಸ್.ಪ್ರಭಾವತಿ ಮಾತನಾಡಿ, ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಅರಿತುಕೊಂಡು ಸಮಾಜದಲ್ಲಿ ಸ್ವಾವಲಂಬಿಯಾಗಿ ಬದುಕಬೇಕು. ಮಹಿಳೆಯರ ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ನೀಡುವುದು ಸಮಾಜದ ಹೊಣೆಗಾರಿಕೆ ಆಗಿದೆ, ಚಿಗುರು ಟ್ರಸ್ಟ್ ಮಹಿಳೆಯರ ಅಭಿವೃದ್ಧಿಗೆ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆರಕ್ಷಕ ನಿರೀಕ್ಷಕ ಸಿ.ರವಿಕುಮಾರ್, ಸಿಡಿಪಿಓ ರವಿ, ಭಾರತ್ ಪೌಂಡೇಷನ್ ಸಯ್ಯದ್ ನದೀಮ್, ಮಕ್ಕಳ ತಜ್ಞ ಡಾ.ಅರುಣ್ ಕುಮಾರ್, ಡಾ.ಮಹೇಶ್, ತೊರಲಕ್ಕಿ ಶಾಲೆಯ ಮುಖ್ಯ ಶಿಕ್ಷಕ ಬಿ.ಆರ್.ರವಿ, ಮುಖ್ಯ ಶಿಕ್ಷಕಿ ವಿ.ಭಾಗ್ಯಲಕ್ಷ್ಮಮ್ಮ, ಡಾ.ಮಾಲತಿ, ಶಿಕ್ಷಕಿ ನಾರಾಯಣಮ್ಮ, ಬೈರಕೂರು ಬೌದ್ಧ ಉಪಾಸಕ ಎಂ.ರವಿ, ಸೌಭಾಗ್ಯ, ರಾಧ, ಶಿಕ್ಷಕಿ ಕೆ.ಆರ್ ತ್ರೇಜೋವತಮ್ಮ, ಚಿಗುರು ಸಂಸ್ಥೆ ಸಂಯೋಜಕಿ ಅಂಜಲಿ.ಪಿ, ಕೆಜಿಎಫ್ ಸೌತ್ ಟ್ಯಾಂಕ್ ಬ್ಲಾಕ್ ಕಮಿಟಿ ಸದಸ್ಯರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



## ಕಲ್ವ ಡೈರಿಗೆ ಅಧ್ಯಕ್ಷರ ಆಯ್ಕೆ



ವೇಮಗಲ್

ಕೋಲಾರ ಜಿಲ್ಲೆಯ ವೇಮಗಲ್ ಹೋಬಳಿಯ ಕಲ್ವ ಹಾಲು ಉತ್ಪಾದಕ ಸಹಕಾರ ಸಂಘದ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸಂಘದ ನೂತನ ಅಧ್ಯಕ್ಷರಾಗಿ ಟಿ.ಕೆ. ಬೈರೇಗೌಡ ಹಾಗೂ ಉಪಾಧ್ಯಕ್ಷರಾಗಿ ಟಿ. ಕಾಂತಮ್ಮ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಯ್ಕೆಯ ವಿವರ: ಇದೇ 2, 2026ರಂದು ನಡೆದ ಚುನಾವಣೆಯಲ್ಲಿ ವಿವಿಧ ಕ್ಷೇತ್ರಗಳಿಂದ ಒಟ್ಟು 12 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದರು. ಇದೀಗ ಪದಾಧಿಕಾರಿಗಳ ಆಯ್ಕೆಯೂ ಮುಕ್ತಾಯವಾಗಿದ್ದು, ಸಾಮಾನ್ಯ ಕ್ಷೇತ್ರದಿಂದ ಬಂದ ಟಿ.ಕೆ. ಬೈರೇಗೌಡ ಅವರು ಅಧ್ಯಕ್ಷರಾಗಿ ಹಾಗೂ ಮಹಿಳಾ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದ ಟಿ. ಕಾಂತಮ್ಮ ಅವರು ಉಪಾಧ್ಯಕ್ಷರಾಗಿ ಮುಂದಿನ ಐದು ವರ್ಷಗಳ ಅವಧಿಗೆ ಸಂಘದ ಚುಕ್ಕಾಣಿ ಹಿಡಿದಿದ್ದಾರೆ.

ಆಡಳಿತ ಮಂಡಳಿ ತಂಡ: ನೂತನ ಆಡಳಿತ ಮಂಡಳಿಯಲ್ಲಿ ನಿರ್ದೇಶಕರುಗಳಾದ ವೆಂಕಟಶಾಮೇಗೌಡ, ರಾಧಾಕೃಷ್ಣ ಕೆ.ಆರ್., ಎಂ.ಎನ್. ಅಂಬರೀಶ್, ನಾಗರಾಜಬಾಬು ಸಿ.ಎಂ., ಸಿ.ಎಸ್. ಮಧುಕರ್, ಮುತ್ತಪ್ಪ, ಅಂಜಿನಪ್ಪ, ಬಾಬಾಸಾಬಿ, ನಾಗರಾಜ ಸಿ.ಆರ್. ಹಾಗೂ ಮಂಜುಳಾ ಅವರು ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ.

ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದ ಹಿರಿಯ ಮುಖಂಡ ಕೆ.ಎನ್. ಚಂದ್ರೇಗೌಡ ಮತ್ತು ಗಣ್ಯರು, "ಹೈನುಗಾರರ ಹಿತರಕ್ಷಣೆಯೇ ಸಂಘದ ಮೊದಲ ಆದ್ಯತೆಯಾಗಲಿ. ಉತ್ಪಾದಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಸಕಾಲಕ್ಕೆ ತಲುಪಿಸುವ ಮೂಲಕ ಜಿಲ್ಲೆಯಲ್ಲಿಯೇ ಕಲ್ವ ಸಂಘವನ್ನು ಮಾದರಿಯಾಗಿ ರೂಪಿಸಿ," ಎಂದು ಹಾರೈಸಿದರು.

ಅಧಿಕಾರ ವಹಿಸಿಕೊಂಡ ನಂತರ ಮಾತನಾಡಿದ ನೂತನ ಅಧ್ಯಕ್ಷ ಟಿ.ಕೆ. ಬೈರೇಗೌಡ ಅವರು, "ಸಂಘದ ಸದಸ್ಯರ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ಪಾರದರ್ಶಕ ಆಡಳಿತ ನೀಡಲು ನಾನು ಬದ್ಧನಾಗಿದ್ದೇನೆ. ಹೈನುಗಾರರ ಆರ್ಥಿಕ ಸಬಲೀಕರಣಕ್ಕೆ ವಿಶೇಷ ಒತ್ತು ನೀಡಲಾಗುವುದು," ಎಂದು ತಿಳಿಸಿದರು.

ಸಮಾರಂಭದಲ್ಲಿ ಮುಖಂಡರಾದ ಶ್ರೀರಾಮಪ್ಪ ಡಿ., ಸಿ. ಶಿವಣ್ಣ, ಪಿ. ರಾಜೇಶ್, ನಟರಾಜ್, ಪಟ್ಟಣ ಪಂಚಾಯತಿ ಸದಸ್ಯ ರವಿ ಸೇರಿದಂತೆ ಗ್ರಾಮದ ಹಿರಿಯರು ಮತ್ತು ಯುವ ಮುಖಂಡರು ಉಪಸ್ಥಿತರಿದ್ದು, ನೂತನ ಮಂಡಳಿಗೆ ಶುಭ ಕೋರಿದರು.

## 7,500 ರೈತರಿಗೆ ಆರ್‌ಟಿಸಿ ವಿತರಣೆ ಗುರಿ: ಡಿಸಿ ರವಿ

ಬಂಗಾರಪೇಟೆ

"ರಾಜ್ಯ ಸರ್ಕಾರ ಹಾಗೂ ಕಂದಾಯ ಇಲಾಖೆಯ ವಿವಿಧ ಜನಪರ ಸೌಲಭ್ಯಗಳನ್ನು ಏಪ್ರಿಲ್ ತಿಂಗಳಲ್ಲಿ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಸಾರ್ವಜನಿಕರಿಗೆ ಸಮರ್ಪಿಸುವ ಗುರಿ ಹೊಂದಲಾಗಿದೆ," ಎಂದು ಜಿಲ್ಲಾಧಿಕಾರಿ ರವಿಕುಮಾರ್ ತಿಳಿಸಿದರು.

ಇಲ್ಲಿನ ತಾಲೂಕು ಆಡಳಿತ ಕಚೇರಿಯ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ ಖುದ್ದು ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ ಎಂದರು.

ದಶಕಗಳ ಸಮಸ್ಯೆಗೆ ಶಾಶ್ವತ ಪರಿಹಾರ: ದಶಕಗಳಿಂದ ದರಕಾಸ್ತು ಭೂಮಿಗೆ ದಾಖಲೆಗಳಿಲ್ಲದೆ ಪರದಾಡುತ್ತಿದ್ದ ರೈತರ ಹಿತದೃಷ್ಟಿಯಿಂದ ಹಮ್ಮಿಕೊಂಡಿದ್ದ ಆಂದೋಲನ ಫಲ ನೀಡುತ್ತಿದೆ. ಸುಮಾರು 7,500 ಜನರಿಗೆ ಆರ್‌ಟಿಸಿ ಒದಗಿಸಲಾಗುವುದು ಹಾಗೂ ಕಂದಾಯ ಗ್ರಾಮ ಯೋಜನೆಯಡಿ 25 ಜನರಿಗೆ ಹಕ್ಕುಪತ್ರ ನೀಡಲಾಗುವುದು. ಅಲ್ಲದೆ, ತಲೆಮಾರುಗಳಿಂದ ಬಾಕಿ ಉಳಿದಿದ್ದ ಪೌತಿ ಖಾತೆಗಳನ್ನು ಬದಲಾಯಿಸುವ 'ಪೌತಿ ಆಂದೋಲನ' ಯಶಸ್ವಿಯಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.



ಅಕ್ರಮ ದಾಸ್ತಾನುಗಾರರ ವಿರುದ್ಧ 'ಕಾನೂನು ಸಮರ':

"ಪ್ರಸ್ತುತ ಆಹಾರ ಧಾನ್ಯ ಸೇರಿದಂತೆ ಯಾವುದೇ ದಿನಬಳಕೆ ವಸ್ತುಗಳ ಅಭಾವವಿಲ್ಲ. ಆದರೆ, ಯುದ್ಧದ ಸಂದರ್ಭದ ಲಾಭ ಪಡೆಯಲು ಅಕ್ರಮವಾಗಿ ಆಹಾರ ಧಾನ್ಯ, ಅಡುಗೆ ಅನಿಲ ಹಾಗೂ ಕೃಷಿ ಪರಿಕರಗಳನ್ನು ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸುವ ವರ್ತಕರ ವಿರುದ್ಧ ಎಸೆನ್ಶಿಯಲ್ ಕಮಾಡಿಟಿ ಆಕ್ಟ್ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು," ಎಂದು ಎಚ್ಚರಿಕೆ ನೀಡಿದರು. ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲಿಸುವಂತೆ ತಹಶೀಲ್ದಾರ್ ಹಾಗೂ ಆಹಾರ ಇಲಾಖೆ ಅಧಿಕಾರಿಗಳಿಗೆ ಆದೇಶಿಸಿದರು.

ಮತದಾರರ ಮ್ಯಾಪಿಂಗ್ ಮತ್ತು ಕುಡಿಯುವ ನೀರು: ಮತದಾರರ ಪಟ್ಟಿ ಮ್ಯಾಪಿಂಗ್ ಕಾರ್ಯದಿಂದ ಮಕ್ಕಳ ಶಿಕ್ಷಣದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಶಿಕ್ಷಕರು ಶಾಲಾ ಅವಧಿಯ ನಂತರ ಈ ಕಾರ್ಯ ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಈಗಾಗಲೇ ಶೇ. 88ರಷ್ಟು ಮ್ಯಾಪಿಂಗ್ ಪೂರ್ಣಗೊಂಡಿದೆ ಎಂದರು. ಇನ್ನು ಬೇಸಿಗೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸದ್ಯಕ್ಕೆ ನೀರಿನ ಬವಣೆಯಿಲ್ಲ, ಅಗತ್ಯ ಬಿದ್ದಲ್ಲಿ ಸರ್ಕಾರಿ ಟ್ಯಾಂಕರ್ ಮೂಲಕ ನೀರು ಪೂರೈಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಅಹವಾಲು ಸಲ್ಲಿಕೆ: ಜಿಲ್ಲಾಧಿಕಾರಿಗಳು ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನೂರಾರು ಸಾರ್ವಜನಿಕರು ತಮ್ಮ ಸಮಸ್ಯೆಗಳ ಕುರಿತು ಅಹವಾಲುಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮಿಷನರ್ ಮಂಗಳಮ್ಮ, ತಹಶೀಲ್ದಾರ್ ಸುಜಾತ, ಗ್ರೇಡ್–2 ತಹಶೀಲ್ದಾರ್ ಗಾಯತ್ರಿ ಹಾಗೂ ಇತರೆ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಹಿಳೆ ಕೇವಲ ಕುಟುಂಬಕ್ಕೆ ಸೀಮಿತವಾಗದಿರಲಿ: ಡಾ. ಇಂದಿರಾ



ಮಧುಗಿರಿ

"ಮಹಿಳೆಯರು ಕೇವಲ ಮನೆಗೆಲಸ ಅಥವಾ ಕುಟುಂಬಕ್ಕೆ ಸೀಮಿತವಾಗದೆ ಇಡೀ ಸಮಾಜದ ಪ್ರೇರಕ ಶಕ್ತಿಯಾಗಿ ಹೊರಹೊಮ್ಮಬೇಕು. ಹೆಣ್ಣು ಜನ್ಮವು ದೇವರು ಕೊಟ್ಟ ಅಪರೂಪದ ವರವಾಗಿದೆ," ಎಂದು ಮಧುಗಿರಿ ಸಾರ್ವಜನಿಕ ಆಸ್ಪತ್ರೆಯ ವೈದ್ಯರಾದ ಡಾ. ಇಂದಿರಾ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಮಹಿಳಾ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಯರು ಶಿಕ್ಷಣ ಪಡೆದು ಸಾಧಕರಾಗುವ ಜೊತೆಗೆ ತಮ್ಮ ಆರೋಗ್ಯದ ಕಡೆಗೂ ಹೆಚ್ಚಿನ ಗಮನಹರಿಸಬೇಕು. ರಕ್ತಹೀನತೆಯಂತಹ ಸಮಸ್ಯೆಗಳು ಕಾಡದಂತೆ ಪೌಷ್ಟಿಕಾಂಶಯುಕ್ತ ಆಹಾರ ಸೇವಿಸಬೇಕು ಹಾಗೂ ವೈಯಕ್ತಿಕ ಶುಚಿತ್ವಕ್ಕೆ ಆದ್ಯತೆ ನೀಡಬೇಕು ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಸ್ವಾವಲಂಬನೆಯೇ ಅಭಿವೃದ್ಧಿಯ ಹಾದಿ: ಐಕ್ಯೂಎಸಿ ಸಂಚಾಲಕರಾದ ಪ್ರೊ. ವೇದಲಕ್ಷ್ಮೀ ಜಿ. ಮಾತನಾಡಿ, ಮಹಿಳಾ ಸಮಾನತೆಯ ಉದ್ದೇಶದಿಂದ ಆರಂಭವಾದ ಚಳವಳಿಗಳು ಇಂದು ಸಕಾರಾತ್ಮಕ ಫಲ ನೀಡುತ್ತಿವೆ. ಮಹಿಳೆ ಆರ್ಥಿಕವಾಗಿ ಸ್ವಾವಲಂಬಿಯಾದಾಗ ಮಾತ್ರ ದೇಶದ ನಿಜವಾದ ಅಭಿವೃದ್ಧಿ ಸಾಧ್ಯ ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಗೋವಿಂದರಾಯ ಮಾತನಾಡಿ, ಸ್ತ್ರೀ ಸಮಾನತೆಯು ಕೇವಲ ಘೋಷಣೆಯಾಗದೆ, ಪುರುಷನಂತೆ ಎಲ್ಲ ಕ್ಷೇತ್ರಗಳಲ್ಲೂ ಸಮಾನ ಅವಕಾಶ ಮತ್ತು ಗೌರವ ಸಿಗುವಂತಾಗಬೇಕು ಎಂದರು.

ಸಾಧಕಿಯರ ಹಾದಿ ತುಳಿಯಿರಿ: ಕಾಲೇಜಿನ ಪ್ರಾಂಶುಪಾಲ ಪ್ರೊ. ಕುಮಾರ್ ಕೆ.ಎಸ್. ಮಾತನಾಡಿ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆ ಅನನ್ಯವಾಗಿದೆ. ಯುವತಿಯರು ಮಹಿಳಾ ಸಾಧಕರ ಜೀವನದ ಯಶೋಗಾಥೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಬಿ., ಪತ್ರಾಂಕಿತ ವ್ಯವಸ್ಥಾಪಕಿ ಚಂದ್ರಕಲಾ ಹಾಗೂ ಪ್ರಾಧ್ಯಾಪಕರಾದ ಡಾ. ವಿಜಯಲಕ್ಷ್ಮೀ, ಡಾ. ರಂಜಿತಾ, ಡಾ. ಲತಾ, ಡಾ. ಲೀಲಾವತಿ ಸ್ತ್ರೀಶಕ್ತಿಯ ಮಹತ್ವದ ಬಗ್ಗೆ ಮಾತನಾಡಿದರು.

ವೇದಿಕೆಯಲ್ಲಿ ಡಾ. ಮಂಜುನಾಥ್ ಬುಡಸನಹಳ್ಳಿ, ಡಾ. ನಾಗರಾಜು, ಡಾ. ಸಂಜೀವಮೂರ್ತಿ ಸೇರಿದಂತೆ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ

## ಇಂದಿನ ಪುಟಾಣಿ ವ್ಯಾಪಾರಿಗಳೇ ಮುಂದಿನ ಶ್ರೇಷ್ಠ ಉದ್ಯಮಿಗಳು: ದಿನೇಶ್

ವಿಜಯಪುರ

"ವಿದ್ಯಾರ್ಥಿಗಳಿಗೆ ಪಠ್ಯದ ಕಲಿಕೆಯ ಜೊತೆಗೆ ವ್ಯವಹಾರಿಕ ಜ್ಞಾನವನ್ನು ತುಂಬಲು ಮೆಟ್ರಿಕ್ ಮೇಳದಂತಹ ಕಾರ್ಯಕ್ರಮಗಳು ಅತ್ಯಂತ ಸಹಕಾರಿಯಾಗಿವೆ," ಎಂದು ಸಿಆರ್‌ಪಿ ದಿನೇಶ್ ಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಗುರಪ್ಪನಮಠದ ಪಿ.ಎಂ.ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಹಣಕಾಸು ಸಾಕ್ಷರತಾ ಕಾರ್ಯಕ್ರಮ ಹಾಗೂ ಆರ್ಥಿಕ ಸಾಕ್ಷರತಾ ಶಿಬಿರದ ಅಂಗವಾಗಿ ಏರ್ಪಡಿಸಿದ್ದ 'ಮಕ್ಕಳ ಸಂತೆ ಮೇಳ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೌಶಲ್ಯ ವೃದ್ಧಿಗೆ ಆದ್ಯತೆ: ವಿದ್ಯಾರ್ಥಿಗಳು ಕೇವಲ ಪುಸ್ತಕದ ಬದನೆಕಾಯಿಗೆ ಸೀಮಿತವಾಗದೆ, ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಗಳಿಕೆ, ಉಳಿತಾಯ, ಖರ್ಚು ಹಾಗೂ ಬ್ಯಾಂಕಿಂಗ್ ಕಾರ್ಯವೈಖರಿಯನ್ನು ಬಾಲ್ಯದಲ್ಲಿಯೇ ಅರ್ಥೈಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸರ್ಕಾರವು ಇಂತಹ ಮೇಳಗಳ ಮೂಲಕ ಮಕ್ಕಳಲ್ಲಿ ಉದ್ಯಮಶೀಲತೆ ಬೆಳೆಸುತ್ತಿದೆ ಎಂದು ದಿನೇಶ್ ಕುಮಾರ್ ತಿಳಿಸಿದರು.



ಬದುಕು ಕಲಿಸುವ ಶಿಕ್ಷಣ: ಪುರಸಭೆ ಸದಸ್ಯ ಬೈರೇಗೌಡ ಮಾತನಾಡಿ, "ವ್ಯವಹಾರಿಕ ಜ್ಞಾನ ಹೊಂದಿದ ಮಕ್ಕಳು ಭವಿಷ್ಯದಲ್ಲಿ ಸ್ವಾವಲಂಬಿಗಳಾಗಿ ಬದುಕಬಲ್ಲರು," ಎಂದರು. ಶಾಲೆಯ ಮುಖ್ಯಶಿಕ್ಷಕಿ ಎನ್. ಸುಜಾತಮ್ಮ ಮಾತನಾಡಿ, "ಶಿಕ್ಷಣವೆಂದರೆ ಕೇವಲ ಅಕ್ಷರ ಕಲಿಯುವುದಲ್ಲ, ಅದು ಬದುಕು ಕಲಿಯುವುದು. ಇಲಾಖೆಯ ನಿರ್ದೇಶನದಂತೆ ಮಕ್ಕಳಲ್ಲಿ ಹೊಸ ಹುರುಪು ಮೂಡಿಸಲು ಈ ಸಂತೆಯನ್ನು ಆಯೋಜಿಸಲಾಗಿದೆ," ಎಂದು ವಿವರಿಸಿದರು.

ಸಂತೆಯಲ್ಲಿ ಮಕ್ಕಳ ಸಡಗರ: ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳು ಹಣ್ಣು, ತರಕಾರಿ, ಜ್ಯೂಸ್ ಕಾರ್ನರ್, ಫ್ಯಾನ್ಸಿ ಸ್ಟೋರ್ ಹಾಗೂ ಆಟಿಕೆ ಸಾಮಾನುಗಳ ವಿವಿಧ ಮಳಿಗೆಗಳನ್ನು ತೆರೆದಿದ್ದರು. ತಾವೇ ಗ್ರಾಹಕರನ್ನು ಸೆಳೆದು ವ್ಯಾಪಾರ ವಹಿವಾಟು ನಡೆಸುವ ಮೂಲಕ ಹಣಕಾಸಿನ ನಿರ್ವಹಣೆಯ ಪ್ರಾಯೋಗಿಕ ಜ್ಞಾನವನ್ನು ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ್, ಮುಖಂಡ ಹೆಚ್.ಎಂ. ಕೃಷ್ಣಪ್ಪ, ಶಿಕ್ಷಕರಾದ ಮಂಜುಳಾ ಎಂ., ಕುಮಾರಿ ಎನ್., ಜಲಜಾಕ್ಷಿ, ಸೋಮಶೇಖರ್, ರಾಮರತ್ನಮ್ಮ ಸೇರಿದಂತೆ ಶಾಲಾ ಸಿಬ್ಬಂದಿ ಹಾಗೂ ಪೋಷಕರು ಭಾಗವಹಿಸಿದ್ದರು.

## ಸ್ವ– ಸಹಾಯ ಗುಂಪುಗಳ ಉತ್ಪನ್ನಗಳು ರಾಜ್ಯಕ್ಕೆ ತಲುಪಲಿ: ಡಿಸಿ

ದೇವನಹಳ್ಳಿ

"ಜಿಲ್ಲೆಯ ಮಹಿಳಾ ಸ್ವ– ಸಹಾಯ ಗುಂಪುಗಳು ತಯಾರಿಸುವ ಉತ್ಪನ್ನಗಳು ಕೇವಲ ಸ್ಥಳೀಯ ಮಾರುಕಟ್ಟೆಗೆ ಸೀಮಿತವಾಗಬಾರದು. ಮುಂದಿನ ವರ್ಷದೊಳಗೆ ಅವು ರಾಜ್ಯಮಟ್ಟದ ಮಾರುಕಟ್ಟೆಯಲ್ಲಿ ಗುಣಮಟ್ಟದ ಬ್ರ್ಯಾಂಡ್ ಆಗಿ ಗುರುತಿಸಿಕೊಳ್ಳುವ ಗುರಿ ಹೊಂದಬೇಕು," ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಡಾ. ಕೆ.ಎನ್ ಅನುರಾಧ ಕರೆ ನೀಡಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂನಲ್ಲಿ ಆಯೋಜಿಸಿದ್ದ "ಬೇಟಿ ಬಚಾವೋ ಬೇಟಿ ಪಢಾವೋ" ಯೋಜನೆ ಹಾಗೂ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ–2026" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲೆಯ 66 ಸಾವಿರ ಮಹಿಳೆಯರು ಎನ್.ಆರ್.ಎಲ್.ಎಂ (ಓಖಐಓ) ಅಡಿ ಸಂಘಟಿತರಾಗಿದ್ದು, ಅವರಿಗೆ 33 ಕೋಟಿ ರೂ. ಬಂಡವಾಳ ನಿಧಿ ನೀಡಲಾಗಿದೆ. ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಲು ಜಿಲ್ಲಾಡಳಿತ ಎಲ್ಲ ರೀತಿಯ ಸಹಕಾರ ನೀಡಲಿದೆ ಎಂದರು.

ಅಬಲೆಯಲ್ಲ ಸಬಲೆ: ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ. ರಾಜಣ್ಣ ಮಾತನಾಡಿ, "ಹೆಣ್ಣು ಅಬಲೆಯಲ್ಲ, ಸಬಲೆ. ಸರ್ಕಾರದ ಗೃಹಲಕ್ಷ್ಮಿ ಮತ್ತು ಶಕ್ತಿ ಯೋಜನೆಗಳು ಮಹಿಳಾ ಸಬಲೀಕರಣಕ್ಕೆ ದೊಡ್ಡ ಶಕ್ತಿ ನೀಡಿವೆ. ಈ ಸೌಲಭ್ಯಗಳನ್ನು ಬಳಸಿಕೊಂಡು ಮಹಿಳೆಯರು ಯಶಸ್ವಿ ಉದ್ಯಮಿಗಳಾಗಬೇಕು," ಎಂದು ಕಿವಿಮಾತು ಹೇಳಿದರು.



ಸ್ಫೂರ್ತಿದಾಯಕ ಮಾತು: ಇತ್ತೀಚೆಗೆ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಸಂಘಮಿತ್ರ ಅವರು ತಮ್ಮ ಜೀವನದ ಹಾದಿಯನ್ನು ಮೆಲುಕು ಹಾಕುತ್ತಾ, "ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನಲ್ಲಿ ಓದಿ ಇಂದು ಜಡ್ಜ್ ಆಗಿದ್ದೇನೆ. ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಹಕ್ಕುಗಳಿಂದ ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲೂ ಮಿಂಚಲು ಸಾಧ್ಯವಾಗಿದೆ," ಎಂದು ವಿದ್ಯಾರ್ಥಿನಿಯರು ಮತ್ತು ಮಹಿಳೆಯರಲ್ಲಿ ಸ್ಫೂರ್ತಿ ತುಂಬಿದರು.

ಕಾರ್ಯಕ್ರಮದಲ್ಲಿ 2024–25 ಮತ್ತು 2025–26ನೇ ಸಾಲಿನಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಮಹಿಳಾ ಸ್ವಸಹಾಯ ಗುಂಪುಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಪ್ರಶಸ್ತಿ ಪತ್ರ ವಿತರಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಜಿ.ಪಂ. ಉಪಕಾರ್ಯದರ್ಶಿ ಶಿವಕುಮಾರ್, ಯೋಜನಾ ನಿರ್ದೇಶಕ ವಿಠಲ್ ಕಾವ್ಳೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮುದ್ದಣ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಉರಿಗಾಂ ರೈಲ್ವೆ ನಿಲ್ದಾಣಕ್ಕೆ ಸೌಲಭ್ಯಗಳ ಗ್ರಹಣ!

ಬೇತಮಂಗಲ

ಕೋಲಾರ ಚಿನ್ನದ ಗಣಿ ಪ್ರದೇಶದ ಇತಿಹಾಸದ ಅವಿಭಾಜ್ಯ ಅಂಗವಾಗಿರುವ, ಬ್ರಿಟಿಷರ ಕಾಲದ ಐತಿಹಾಸಿಕ ಉರಿಗಾಂ ರೈಲ್ವೆ ನಿಲ್ದಾಣವು ಇಂದು ಮೂಲಭೂತ ಸೌಕರ್ಯಗಳಿಲ್ಲದೆ ಸೊರಗುತ್ತಿದೆ. ಸುಮಾರು 1900– 1910ರ ಅವಧಿಯಲ್ಲಿ ಸ್ಥಾಪಿತವಾದ ಈ ನಿಲ್ದಾಣವು ಚಿನ್ನದ ಸಾಗಣೆಯ ಪ್ರಮುಖ ಕೇಂದ್ರವಾಗಿತ್ತು. ಆದರೆ, ಇಂತಹ ಐತಿಹಾಸಿಕ ತಾಣದಲ್ಲಿ ಇಂದು ಪ್ರಯಾಣಿಕರು ಕನಿಷ್ಠ ಸೌಲಭ್ಯಗಳಿಗೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

2019ರಲ್ಲಿ ಸಂಸದ ಎಸ್. ಮುನಿಸ್ವಾಮಿ ಅವರ ಪ್ರಯತ್ನದಿಂದ ನಿಲ್ದಾಣದ ನವೀಕರಣ ಕಾರ್ಯ ನಡೆದು, ಪುರುಷರಿಗಾಗಿ ಹೊಸ ಶೌಚಾಲಯವನ್ನು ನಿರ್ಮಿಸಲಾಯಿತು. ಆದರೆ, ದುರದೃಷ್ಟವಶಾತ್ ಈ ಶೌಚಾಲಯಕ್ಕೆ ಯಾವಾಗಲೂ ಬೀಗ ಹಾಕಲಾಗುತ್ತಿದೆ. ಇನ್ನು ಸಾಮಾನ್ಯ ಪ್ರತೀಕ್ಷಾಲಯದಲ್ಲಿ ಮಹಿಳೆಯರಿಗಾಗಿ ಶೌಚಾಲಯದ ವ್ಯವಸ್ಥೆ ಇದ್ದರೂ, ಪ್ರತೀಕ್ಷಾಲಯದ ಬಾಗಿಲಿಗೆ ಸದಾ ಬೀಗ ಇರುವುದರಿಂದ ಮಹಿಳಾ ಪ್ರಯಾಣಿಕರು ಮತ್ತು ಹಿರಿಯ ನಾಗರಿಕರು ತೀವ್ರ ಅಸೌಕರ್ಯ ಅನುಭವಿಸುವಂತಾಗಿದೆ.


ನಿಲ್ದಾಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲದಿರುವುದು ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿದೆ. ದಿವ್ಯಾಂಗರಿಗಾಗಿ ನಿರ್ಮಿಸಲಾದ ವಿಶೇಷ ಶೌಚಾಲಯಗಳೂ ಸಹ ಬೀಗ ಹಾಕಲ್ಪಟ್ಟಿದ್ದು, ಬಳಕೆಗೆ ಮುಕ್ತವಾಗಿಲ್ಲ. ಶತಮಾನದ ಇತಿಹಾಸವಿರುವ ನಿಲ್ದಾಣದಲ್ಲಿ ಪ್ರಯಾಣಿಕರು ಬಯಲು ಶೌಚಾಲಯವನ್ನೇ ಅವಲಂಬಿಸಬೇಕಾದ ಅನಿವಾರ್ಯತೆ ಎದುರಾಗಿದೆ. "ಇದ್ದ ಸೌಲಭ್ಯಗಳನ್ನು ಸಾರ್ವಜನಿಕರಿಗೆ ನೀಡದೆ ಬೀಗ ಹಾಕಿರುವುದು ಅಧಿಕಾರಿಗಳ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಕೂಡಲೇ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಮತ್ತು ಶೌಚಾಲಯಗಳನ್ನು ತೆರೆಯಬೇಕು," ಎಂದು ಸ್ಥಳೀಯರು ಹಾಗೂ ಪ್ರಯಾಣಿಕರು ರೈಲ್ವೆ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಭಾರತ ಸಾರಥಿ
13/03/2026
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಪಿಯು ಪರೀಕ್ಷೆ: ವೆಬ್ ಕಾಸ್ಟಿಂಗ್ ವ್ಯವಸ್ಥೆ ಕುರಿತು ಪ್ರಶಂಸೆ

ತುಮಕೂರು

ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ದ್ವಿತೀಯ ಪಿಯು ಪರೀಕ್ಷೆಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ 'ವೆಬ್ ಕ್ಯಾಸ್ಟಿಂಗ್' ವ್ಯವಸ್ಥೆಯು ಈಗ ರಾಷ್ಟ್ರಮಟ್ಟದ ಗಮನ ಸೆಳೆದಿದೆ. ಈ ಅತ್ಯಾಧುನಿಕ ನಿಗಾ ವ್ಯವಸ್ಥೆಯನ್ನು ಅಧ್ಯಯನ ಮಾಡಲು ಉತ್ತರ ಭಾರತದ ಕೇಂದ್ರ ತಂಡವು ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದೆ.



ಕೇಂದ್ರ ತಂಡದ ಅಧ್ಯಯನ: ಭಾರತ ಸರ್ಕಾರದ ಭಾರತ ಆಡಳಿತ ಸೇವೆಯ ಉಪ ಕಾರ್ಯದರ್ಶಿ ಹಂತದ ಇಬ್ಬರು ಹಿರಿಯ ಅಧಿಕಾರಿಗಳನ್ನೊಳಗೊಂಡ ತಂಡವು ಇದೇ 10 ಮತ್ತು 11ರಂದು ಜಿಲ್ಲೆಯಲ್ಲಿ ಬೀಡುಬಿಟ್ಟಿತ್ತು. ಪರೀಕ್ಷಾ ಅಕ್ರಮಗಳನ್ನು ತಡೆಯಲು ಮತ್ತು ಯಾವುದೇ ಗೊಂದಲವಿಲ್ಲದೆ ಪರೀಕ್ಷೆ ನಡೆಸಲು ಅಳವಡಿಸಿರುವ ತಂತ್ರಜ್ಞಾನವನ್ನು ತಂಡವು ಕೂಲಂಕಷವಾಗಿ ಪರಿಶೀಲಿಸಿತು.

ನೇರ ಸಂವಹನ ಮತ್ತು ವೀಕ್ಷಣೆ: ಇದೇ 10ರಂದು ಅರ್ಥಶಾಸ್ತ್ರ ಪರೀಕ್ಷೆ ನಡೆಯುತ್ತಿದ್ದ ಸಂದರ್ಭದಲ್ಲಿ, ತುಮಕೂರು ಜಿಲ್ಲಾ ಪಂಚಾಯತ್ ಸಂಪನ್ಮೂಲ ಕೇಂದ್ರದಲ್ಲಿ ತೆರೆದಿರುವ ವೆಬ್ ಕ್ಯಾಸ್ಟಿಂಗ್ ನಿಯಂತ್ರಣ ಕೊಠಡಿಗೆ ಭೇಟಿ ನೀಡಿದ ಅಧಿಕಾರಿಗಳು, ಪರೀಕ್ಷಾ ಕೊಠಡಿಯ ಮೇಲ್ವಿಚಾರಕರೊಂದಿಗೆ ನೇರವಾಗಿ ಸಂವಹನ ನಡೆಸಿದರು. ನಂತರ ನಗರದ ಪ್ರತಿಷ್ಠಿತ ಸರ್ವೋದಯ ಮತ್ತು ಎಂಪ್ರೆಸ್ ಪದವಿ ಪೂರ್ವ ಕಾಲೇಜುಗಳ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಅವಲೋಕಿಸಿದರು.

ರಾಷ್ಟ್ರಮಟ್ಟಕ್ಕೆ ಮಾದರಿ: "ಕರ್ನಾಟಕ ಸರ್ಕಾರವು ಪರೀಕ್ಷಾ ವ್ಯವಸ್ಥೆಯಲ್ಲಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿದೆ. ಉತ್ತರ ಪ್ರದೇಶ ಮತ್ತು ಬಿಹಾರ ಶ್ರೇಣಿಯ ಅಧಿಕಾರಿಗಳಾಗಿರುವ ನಾವು, ಕೇಂದ್ರ ಸರ್ಕಾರ ನಡೆಸುವ ವಿವಿಧ ಪರೀಕ್ಷೆಗಳಿಗೂ ಈ ಮಾದರಿಯನ್ನು ಅಳವಡಿಸಿಕೊಳ್ಳುವ ಉದ್ದೇಶ ಹೊಂದಿದ್ದೇವೆ" ಎಂದು ತಂಡದ ಅಧಿಕಾರಿಗಳು ಈ ಸಂದರ್ಭದಲ್ಲಿ ತಿಳಿಸಿದರು. ಈ ಭೇಟಿಯ ವೇಳೆ ತುಮಕೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಶ್ವಿಜಾ ಬಿ.ವಿ, ಚಿತ್ರದುರ್ಗ ಜಿಲ್ಲಾ ಪಂಚಾಯತ್ ಸಿಇಓ ಆಕಾಶ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಾಲ ಗುರುಮೂರ್ತಿ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಅಭಿವೃದ್ಧಿ ಕಾಮಗಾರಿಗೆ ಅಡ್ಡಿಪಡಿಸಿದರೆ ಹುಷಾರ್! ಮಾಲೂರಿನಲ್ಲಿ ಬೀದಿಗಿಳಿಯಲಿದೆ ಕರ್ನಾಟಕ ಸೇನೆ

ಮಾಲೂರು

ನಗರದ ಬಹುದಿನಗಳ ಬೇಡಿಕೆಯಾದ ಟ್ರಾಫಿಕ್ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಲು ಸರ್ಕಾರ ಹಾಗೂ ಶಾಸಕರು ಹಮ್ಮಿಕೊಂಡಿರುವ ಫ್ಲೈ ಓವರ್ (ಮೇಲ್ಸೇತುವೆ) ನಿರ್ಮಾಣ ಮತ್ತು ರಸ್ತೆ ಅಗಲೀಕರಣ ಯೋಜನೆಗೆ 'ನಮ್ಮ ಕರ್ನಾಟಕ ಸೇನೆ' ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಈ ಅಭಿವೃದ್ಧಿ ಕಾಮಗಾರಿಯನ್ನು ರಾಜಕೀಯ ಲಾಭಕ್ಕಾಗಿ ವಿರೋಧಿಸುವವರ ವಿರುದ್ಧ ಸಂಘಟನೆಯು ಪೊಲೀಸ್



ಠಾಣೆಯಲ್ಲಿ ಮನವಿ ಸಲ್ಲಿಸುವ ಮೂಲಕ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಅಭಿವೃದ್ಧಿಗೆ ಅಡ್ಡಿಪಡಿಸುವುದು ಸರಿಯಲ್ಲ: ನಗರದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶಾಂತಮ್ಮ ಅವರಿಗೆ ಮನವಿ ಸಲ್ಲಿಸಿದ ನಂತರ ಮಾತನಾಡಿದ ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಚಾಕನಹಳ್ಳಿ ನಾಗರಾಜ್, "ಮಾಲೂರು ನಗರದ ಅಭಿವೃದ್ಧಿಗಿಂತ ಕೆಲವರಿಗೆ ರಾಜಕೀಯವೇ ಮುಖ್ಯವಾಗಿದೆ. ವರ್ಷಗಳಿಂದ ಜನರು ಎದುರಿಸುತ್ತಿರುವ ಸಂಚಾರ ದಟ್ಟಣೆಗೆ ಮುಕ್ತಿ ನೀಡಲು ಫ್ಲೈ ಓವರ್ ನಿರ್ಮಾಣವಾಗುತ್ತಿದೆ. ಈ ಸಂದರ್ಭದಲ್ಲಿ ಜನರನ್ನು ತಪ್ಪು ದಾರಿಗೆ ಎಳೆಯುತ್ತಿರುವವರ ಬಣ್ಣ ಶೀಘ್ರವೇ ಬಯಲಾಗಲಿದೆ," ಎಂದು ಗುಡುಗಿದರು.

ಸಂಘಟನೆಗಳ ಒಕ್ಕೂಟದ ಬೆಂಬಲ: ಅಭಿವೃದ್ಧಿ ಎನ್ನುವುದು ವ್ಯಕ್ತಿ ಅಥವಾ ಪಕ್ಷಕ್ಕಲ್ಲ, ಅದು ತಾಲ್ಲೂಕಿನ ಜನರ ಭವಿಷ್ಯಕ್ಕಾಗಿ. ಮೇಲ್ಸೇತುವೆ ನಿರ್ಮಾಣದಿಂದ ವ್ಯಾಪಾರ ವಹಿವಾಟು ಸುಗಮವಾಗಲಿದ್ದು, ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಕನ್ನಡಪರ, ದಲಿತಪರ, ರೈತ ಹಾಗೂ ಮಹಿಳಾಪರ ಸಂಘಟನೆಗಳು ಈ ಕಾಮಗಾರಿಗೆ ಬೆಂಬಲ ನೀಡುತ್ತಿವೆ ಎಂದು ಅವರು ತಿಳಿಸಿದರು.

ಪ್ರತಿಭಟನೆಯ ಎಚ್ಚರಿಕೆ: ನಮ್ಮ ಕರ್ನಾಟಕ ಸೇನೆಯ ತಾಲ್ಲೂಕು ಅಧ್ಯಕ್ಷ ಮಾದನಹಟ್ಟಿ ರವಿ ಮಾತನಾಡಿ, "ನಗರದಲ್ಲಿ ದಿನದಿಂದ ದಿನಕ್ಕೆ ಟ್ರಾಫಿಕ್ ಸಮಸ್ಯೆ ಹೆಚ್ಚುತ್ತಿದೆ. ಶಾಸಕರು ಶ್ರಮವಹಿಸಿ ಈ ಯೋಜನೆಯನ್ನು ಮಂಜೂರು ಮಾಡಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಈ ಹಂತದಲ್ಲಿ ಪ್ರತಿಭಟನೆ ಮೂಲಕ ಅಡ್ಡಿಪಡಿಸಲು ಮುಂದಾದರೆ, ನಮ್ಮ ಸಂಘಟನೆಯ ವತಿಯಿಂದ ಅವರ ವಿರುದ್ಧವೇ ಬೃಹತ್ ಪ್ರತಿಭಟನೆ ನಡೆಸಲಾಗುವುದು," ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಸಂಘಟನೆಯ ಪದಾಧಿಕಾರಿಗಳಾದ ಎಸ್.ಎಂ. ರಾಜು, ಹೆಚ್. ವೈ. ನಾರಾಯಣಸ್ವಾಮಿ, ರಘು, ಶ್ಯಾಮಣ್ಣ, ರೈತ ಸಂಘದ ನರಸಿಂಹಪ್ಪ ಹಾಜರಿದ್ದರು.

# ಕುಪ್ಪನಹಳ್ಳಿ ಸರ್ಕಾರಿ ಚಾಕಿ ಕೇಂದ್ರಕ್ಕೆ ಬೀಗ: ಸಂಕಷ್ಟದಲ್ಲಿ ಬಂಗಾರಪೇಟೆ ರೇಷ್ಮೆ ಬೆಳೆಗಾರರು

●ಎಸ್.ಮಹೇಶ್

ಬಂಗಾರಪೇಟೆ

ತಾಲ್ಲೂಕಿನ ರೇಷ್ಮೆ ಕೃಷಿಯ ಪ್ರಮುಖ ಕೇಂದ್ರವಾಗಿದ್ದ ಕುಪ್ಪನಹಳ್ಳಿಯ ಸರ್ಕಾರಿ ಚಾಕಿ ಹುಳು ಸಾಕಾಣಿಕೆ ಕೇಂದ್ರವು ಇಂದು ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಸಿಬ್ಬಂದಿ ಕೊರತೆಯಿಂದಾಗಿ ಸ್ಥಗಿತಗೊಂಡಿದೆ. ದಶಕಗಳ ಕಾಲ ರೈತರ ಪಾಲಿಗೆ ಆಶಾಕಿರಣವಾಗಿದ್ದ ಈ ಕೇಂದ್ರವು ಈಗ ಪಾಳುಬಿದ್ದಿದ್ದು, ನೂರಾರು ರೇಷ್ಮೆ ಬೆಳೆಗಾರರು ಬೀದಿಪಾಲಾಗುವ ಸ್ಥಿತಿ ನಿರ್ಮಾಣವಾಗಿದೆ.



ಪಾಳುಬಿದ್ದ ಸರ್ಕಾರಿ ಕಟ್ಟಡ: ಕೋಲಾರ ಮುಖ್ಯ ರಸ್ತೆಯಲ್ಲಿರುವ ಈ ಸುಸಜ್ಜಿತ ಕೇಂದ್ರವು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡಿತ್ತು. ಆದರೆ ಇಂದು ಇಲ್ಲಿನ ಕಿಟಕಿ–ಬಾಗಿಲುಗಳು ತುಕ್ಕು ಹಿಡಿಯುತ್ತಿದ್ದು, ಬೆಲೆಬಾಳುವ ಉಪಕರಣಗಳು ಬಳಕೆಯಿಲ್ಲದೆ ಹಾಳಾಗುತ್ತಿವೆ. ರೈತರ ಏಳಿಗೆಗಾಗಿ ವ್ಯಯಿಸಿದ ಸಾರ್ವಜನಿಕ ಹಣ ಕಣ್ಣೆದುರಿಗೇ ವ್ಯರ್ಥವಾಗುತ್ತಿರುವುದು ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ರೈತರ ಜೇಬಿಗೆ ಕತ್ತರಿ: ಸರ್ಕಾರಿ ಕೇಂದ್ರದಲ್ಲಿ ರಿಯಾಯಿತಿ ದರದಲ್ಲಿ ಸಿಗುತ್ತಿದ್ದ ಚಾಕಿ ಹುಳುಗಳು ಈಗ ರೈತರಿಗೆ ಲಭ್ಯವಿಲ್ಲದಂತಾಗಿದೆ. ಇದರಿಂದಾಗಿ ರೈತರು ಅನಿವಾರ್ಯವಾಗಿ ಖಾಸಗಿ ಚಾಕಿ ಕೇಂದ್ರಗಳನ್ನು ಅವಲಂಬಿಸಿದ್ದು, ದುಬಾರಿ ಬೆಲೆ ನೀಡಿ ಹುಳುಗಳನ್ನು ಖರೀದಿಸುತ್ತಿದ್ದಾರೆ. ಇದರೊಂದಿಗೆ ದೂರದ ಊರುಗಳಿಂದ ಹುಳುಗಳನ್ನು ತರಲು ಸಾರಿಗೆ ವೆಚ್ಚ ಮತ್ತು ಸಮಯದ ವ್ಯಯವಾಗುತ್ತಿದ್ದು, ಸಣ್ಣ ರೈತರು ಸಾಲದ ಸುಳಿಗೆ ಸಿಲುಕುತ್ತಿದ್ದಾರೆ.

ಯುವ ರೈತರಿಗೆ ತಪ್ಪಿದ ಮಾರ್ಗದರ್ಶನ: ಇತ್ತೀಚಿನ ವರ್ಷಗಳಲ್ಲಿ ರೇಷ್ಮೆ ಕೃಷಿಯತ್ತ ಆಸಕ್ತಿ ತೋರಿದ್ದ ಹಳ್ಳಿಯ ವಿದ್ಯಾವಂತ ಯುವಕರಿಗೆ ಈ ಕೇಂದ್ರವು ಬೆನ್ನೆಲುಬಾಗಿತ್ತು. ರೋಗ ಹತೋಟಿ ಮತ್ತು ತಾಂತ್ರಿಕ ಸಲಹೆಗಳನ್ನು ನೀಡುತ್ತಿದ್ದ ಸಿಬ್ಬಂದಿ ಇಲ್ಲದ ಕಾರಣ, ಹೊಸದಾಗಿ ಕೃಷಿ ಆರಂಭಿಸಿದವರು ತಪ್ಪು ನಿರ್ಧಾರಗಳನ್ನು ಕೈಗೊಂಡು ನಷ್ಟ ಅನುಭವಿಸುವಂತಾಗಿದೆ.

ಮುಖಂಡರ ಅಳಲು: ಸರ್ಕಾರ ರೇಷ್ಮೆ ಕೃಷಿ ಪ್ರೋತ್ಸಾಹಿಸುತ್ತೇವೆ ಎನ್ನುತ್ತದೆ, ಆದರೆ ಇರುವ ಸುಸಜ್ಜಿತ ಕೇಂದ್ರಕ್ಕೆ ಬೀಗ ಹಾಕಿರುವುದು ವಿಷಾದನೀಯ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಣ್ಣ ರೈತರು ಸಾಲಗಾರರಾಗುತ್ತಿದ್ದಾರೆ ಎಂದು ರೇಷ್ಮೆ ಬೆಳೆಗಾರರ ಸಂಘ ನಿರ್ದೇಶಕರು ಎನ್. ಮಂಜುನಾಥ್ ಹೇಳಿದರು.

ಸರ್ಕಾರಿ ಬೆಂಬಲ ಸಿಗದಿದ್ದರೆ ರೇಷ್ಮೆ ಕೃಷಿ ಮಾಡುವುದಾದರೂ ಹೇಗೆ? ಪ್ರತಿ ಬ್ಯಾಚ್‌ಗೂ ಸಾವಿರಾರು ರೂಪಾಯಿ ಹೆಚ್ಚುವರಿ ಖರ್ಚು ತಗಲುತ್ತಿರುವುದು ರೈತರಿಗೆ ಭರಿಸಲಾಗದ ಹೊರೆಯಾಗಿದೆ ಎಂದು ರೇಷ್ಮೆ ಬೆಳೆಗಾರರಾಸ ಎಚ್.ವಿ. ವೆಂಕಟಾಚಲಪತಿ ತಿಳಿಸಿದರು.

ಕೂಡಲೇ ರೇಷ್ಮೆ ಇಲಾಖೆಯ ಉನ್ನತ ಅಧಿಕಾರಿಗಳು ಇತ್ತ ಗಮನಹರಿಸಿ, ಕುಪ್ಪನಹಳ್ಳಿ ಚಾಕಿ ಕೇಂದ್ರವನ್ನು ಪುನಶ್ಚೇತನಗೊಳಿಸಿ ಸಿಬ್ಬಂದಿಯನ್ನು ನೇಮಿಸಬೇಕು. ಆ ಮೂಲಕ ರೇಷ್ಮೆ ಬೆಳೆಗಾರರ ಹಿತರಕ್ಷಣೆ ಮಾಡಬೇಕು ಎಂಬುದು ಈ ಭಾಗದ ರೈತರ ಒಕ್ಕೊರಲಿನ ಹಾಗೂ ಸಾರ್ವಜನಿಕರ ಒತ್ತಾಯವಾಗಿದೆ.

# ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ತುಮಕೂರು

ಜಿಲ್ಲೆಯಲ್ಲಿ ಖಾಲಿ ಇದ್ದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯು ಮಂಗಳವಾರ ಅಂತಿಮಗೊಳಿಸಿದೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ 10 ತಾಲ್ಲೂಕುಗಳಿಂದ ಬಂದಿದ್ದ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಅರ್ಜಿಗಳ ವಿವರ ಮತ್ತು ಪರಿಶೀಲನೆ: ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಮಾಹಿತಿ ನೀಡಿ, "ಡಿಸೆಂಬರ್ 9, 2025 ರಂದು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 117 ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ 3,072 ಅರ್ಜಿಗಳು ಬಂದಿದ್ದವು. ಈ ಪೈಕಿ 444 ಅರ್ಜಿಗಳು ಪುರಸ್ಕೃತಗೊಂಡಿದ್ದು, 2,628 ಅರ್ಜಿಗಳು ವಿವಿಧ ತಾಂತ್ರಿಕ ಕಾರಣಗಳಿಂದ ತಿರಸ್ಕೃತವಾಗಿವೆ. ಉಳಿದ 9 ಕೇಂದ್ರಗಳಿಗೆ ಶೀಘ್ರದಲ್ಲೇ ಮರು ಪ್ರಕಟಣೆ ಹೊರಡಿಸಲಾಗುವುದು," ಎಂದು ತಿಳಿಸಿದರು.

ಅದೇ ರೀತಿ, 829 ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಒಟ್ಟು 3,026 ಅರ್ಜಿಗಳು ಸಲ್ಲಿಕೆಯಾಗಿದ್ದವು. ಇದರಲ್ಲಿ 1,316 ಅರ್ಜಿಗಳು ಅರ್ಹತೆ ಪಡೆದಿದ್ದು, 1,710 ಅರ್ಜಿಗಳು ತಿರಸ್ಕೃತಗೊಂಡಿವೆ. 225 ಕೇಂದ್ರಗಳಿಗೆ ಮರು ಪ್ರಕಟಣೆ ಹೊರಡಿಸಲು ಸಮಿತಿ ತೀರ್ಮಾನಿಸಿದೆ.

ಆಕ್ಷೇಪಣೆಗೆ ಅವಕಾಶ: ಆಯ್ಕೆಯಾಗಿರುವ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ, ಅಂಗನವಾಡಿ ಕೇಂದ್ರ, ಸ್ಥಳೀಯ ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಸೂಚನಾ ಫಲಕಗಳಲ್ಲಿ ಪ್ರಕಟಿಸಲಾಗುವುದು. ಪ್ರಕಟಗೊಂಡ ಏಳು ದಿನಗಳ ಒಳಗಾಗಿ ಅಭ್ಯರ್ಥಿಗಳು ಅಥವಾ ಸಾರ್ವಜನಿಕರು ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಆಯಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದು. ಏಳು ದಿನಗಳ ನಂತರ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಬಿ.ವಿ. ಅಶ್ವಿಜ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣಪ್ಪ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ರಘುಚಂದ್ರ ಮತ್ತು ಮಾಧವ ರೆಡ್ಡಿ, ಮಹಾನಗರ ಪಾಲಿಕೆ ಆಯುಕ್ತೆ ಶುಭ, ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಡಾ. ಸಿದ್ದರಾಮಪ್ಪ ಉಪಸ್ಥಿತರಿದ್ದರು.

# ರಾಷ್ಟ್ರಮಟ್ಟದ ಸಾಧಕರಿಗೆ ಶ್ರೀದೇವಿ ಸಂಸ್ಥೆಯಿಂದ ಅಭಿನಂದನೆ

ತುಮಕೂರು

ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಹಾಗೂ ಹಿರಿಯ ವೈದ್ಯ ಡಾ. ಎಂ.ಆರ್. ಹುಲಿನಾಯ್ಕರ್ ಅವರ ಸಾಧನೆಯ ಸ್ಮರಣಾರ್ಥ ಸ್ಥಾಪಿಸಲಾಗಿರುವ ರಾಷ್ಟ್ರಮಟ್ಟದ 'ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ಶಾಂತದುರ್ಗಾದೇವಿ ಹುಲಿನಾಯ್ಕರ್ ಜೀವಮಾನ ಸಾಧನೆ ಪ್ರಶಸ್ತಿ' ಯನ್ನು ಈ ಬಾರಿ ಖ್ಯಾತ ಲ್ಯಾಪ್ರೋಸ್ಕೋಪಿಕ್ ಮತ್ತು ರೋಬೋಟಿಕ್ ತಜ್ಞ ಡಾ. ಪಳಿನಿವೇಲು ಅವರಿಗೆ ನೀಡಿ ಗೌರವಿಸಲಾಗುವುದು ಎಂದು ಪ್ರತಿಷ್ಠಾನದ ಸಂಚಾಲಕ ಡಾ. ರಮಣ್ ಹುಲಿನಾಯ್ಕರ್ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಬಡತನದ ನಡುವೆಯೂ ವೈದ್ಯಕೀಯ ಕ್ಷೇತ್ರದಲ್ಲಿ ಅಸಾಧಾರಣ ಸಂಶೋಧನೆ ನಡೆಸಿ, ಜನಸಾಮಾನ್ಯರಿಗೂ ಲ್ಯಾಪ್ರೋಸ್ಕೋಪಿಕ್ ಚಿಕಿತ್ಸೆ ದೊರೆಯುವಂತೆ ಮಾಡಿದ ಡಾ. ಪಳಿನಿವೇಲು ಅವರು ಈ ಪ್ರಶಸ್ತಿಗೆ ಅರ್ಹರಾಗಿದ್ದಾರೆ. ಪ್ರಶಸ್ತಿಯು 1.50 ಲಕ್ಷ ರೂಪಾಯಿ ನಗದು, ಫಲಕ ಹಾಗೂ ಫಲ ತಾಂಬೂಲಗಳನ್ನು ಒಳಗೊಂಡಿದೆ," ಎಂದರು. ತಮಿಳುನಾಡಿನ ಕೂಲಿ ಕಾರ್ಮಿಕ ಕುಟುಂಬದಲ್ಲಿ ಜನಿಸಿದ ಡಾ. ಪಳಿನಿವೇಲು ಅವರು, 'ಪಳನಿವೇಲು ಹೊಲಿಗೆ ವಿಧಾನ'ದಂತಹ ಹೊಸ ವೈದ್ಯಕೀಯ ಮಾರ್ಗಗಳನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಹೊಂದಿದ್ದಾರೆ.

ಇದೇ 13ರ ಶನಿವಾರ ನಡೆಯಲಿರುವ ಈ ಭವ್ಯ ಸಮಾರಂಭವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಲಿದ್ದಾರೆ. ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ್ ಅವರು ಡಾ. ಪಳಿನಿವೇಲು ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸುವರ್ಣಮುಖಿ ಸಂಸ್ಕೃತಿ ಧಾಮದ ಅಧ್ಯಕ್ಷ ಡಾ. ಆಚಾರ್ಯ ಎಂ. ನಾಗರಾಜ್ ಅಧ್ಯಕ್ಷತೆ ವಹಿಸಲಿದ್ದು, ಹುಬ್ಬಳ್ಳಿ ಕಿಮ್ಸ್ ನಿರ್ದೇಶಕ ಡಾ. ಈಶ್ವರ್ ಆರ್. ಹೊಸಮನಿ ಅಭಿನಂದನಾ ಭಾಷಣ ಮಾಡಲಿದ್ದಾರೆ.

ಡಾ. ಎಂ.ಆರ್. ಹುಲಿನಾಯ್ಕರ್ ಅವರು ವೈದ್ಯರಾಗಿ, ಶಿಕ್ಷಣ ತಜ್ಞರಾಗಿ ಹಾಗೂ ವಿಧಾನ ಪರಿಷತ್ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಸದಾ ಹಸಿರಾಗಿರಿಸಲು ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ವೈದ್ಯಕೀಯ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ದೇಶದ ಶ್ರೇಷ್ಠ ಸಾಧಕರನ್ನು ಈ ವೇದಿಕೆ ಮೂಲಕ ಗುರುತಿಸುವುದು ಪ್ರತಿಷ್ಠಾನದ ಆಶಯವಾಗಿದೆ.

ಸುದ್ದಿಗೋಷ್ಠಿಯಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್, ಟ್ರಸ್ಟಿಗಳಾದ ಡಾ. ಲಾವಣ್ಯ ರಮಣ್ ಹುಲಿನಾಯ್ಕರ್, ಅಂಬಿಕಾ ಹುಲಿನಾಯ್ಕರ್ ಹಾಗೂ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ನರೇಂದ್ರ ವಿಶ್ವನಾಥ್ ಉಪಸ್ಥಿತರಿದ್ದರು.

# ಮುಚ್ಚಿಹಾಕಿರುವ ರಾಜಕಾಲುವೆ ತೆರವುಗೊಳಿಸುವಂತೆ ಒತ್ತಾಯ

ವಿಜಯಪುರ

ಪಟ್ಟಣದ ಶಿಡ್ಲಘಟ್ಟ ಕ್ರಾಸ್‌ನಲ್ಲಿರುವ ವಕ್ಫ್ ಆಸ್ತಿಗೆ ಹೊಂದಿಕೊಂಡಂತಿರುವ ಸರ್ಕಾರಿ ರಾಜಕಾಲುವೆಯನ್ನು ಮುಸ್ಲಿಂ ಸಮುದಾಯದ ಮುಖಂಡರು ಮುಚ್ಚಿಹಾಕುತ್ತಿದ್ದಾರೆ ಎಂದು ಬಿಜೆಪಿ ಟೌನ್ ಅಧ್ಯಕ್ಷ ವೆಂಕಟೇಶ್ ಪ್ರಭು ಗಂಭೀರವಾಗಿ ಆರೋಪಿಸಿದ್ದಾರೆ. ಈ ಅಕ್ರಮ ನಡೆಯುತ್ತಿದ್ದರೂ ಕಂದಾಯ ಇಲಾಖೆಯ ಅಧಿಕಾರಿಗಳು ಮೌನಕ್ಕೆ ಶರಣಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ವೆಂಕಟೇಶ್ ಪ್ರಭು, "ಶಿಡ್ಲಘಟ್ಟ ಕ್ರಾಸ್‌ನಲ್ಲಿ ಸುಮಾರು 6 ಗುಂಟೆ ಜಾಗವನ್ನು ವಕ್ಫ್ ಆಸ್ತಿಯೆಂದು ಮಂಜೂರು ಮಾಡಲಾಗಿದೆ. ಇಲ್ಲಿ ಹಬ್ಬಗಳ ಸಂದರ್ಭದಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುವುದಕ್ಕೆ ಯಾರದ್ದೂ ಅಡ್ಡಿಯಿಲ್ಲ. ಆದರೆ, ಅದರ ಪಕ್ಕದಲ್ಲಿರುವ ಸರ್ಕಾರಿ ರಾಜಕಾಲುವೆಯನ್ನು ಏಕಾಏಕಿ ಟಿಪ್ಪರ್‌ಗಳಲ್ಲಿ ಮಣ್ಣು ತರಿಸಿ ಮುಚ್ಚಿಹಾಕಲಾಗಿದೆ. ಈಗ ಕಾಲುವೆಯ ಮೇಲೆ ಕಾಂಕ್ರೀಟ್ ಹಾಕುವ ಕೆಲಸಕ್ಕೆ ಮುಂದಾಗಿದ್ದಾರೆ. ಇದರಿಂದ ಮಳೆಗಾಲದಲ್ಲಿ ನೀರು ಹರಿಯಲು ದಾರಿಯಿಲ್ಲದೆ ರಸ್ತೆಯಲ್ಲೇ ಹರಿಯುವಂತಾಗುತ್ತದೆ," ಎಂದು ದೂರಿದರು.

ವಿಶ್ವಹಿಂದೂ ಪರಿಷತ್ ಎಚ್ಚರಿಕೆ: ವಿಶ್ವಹಿಂದೂ ಪರಿಷತ್ ಮುಖಂಡ ಮುನೀಂದ್ರ ಮಾತನಾಡಿ, "ಪ್ರಾರ್ಥನೆ ಮಾಡಲು ಮೈದಾನ ಬಳಸುವುದಕ್ಕೆ ನಮಗೇನೂ ಅಭ್ಯಂತರವಿಲ್ಲ. ಆದರೆ ಸರ್ಕಾರಿ ಸ್ವತ್ತಾದ ರಾಜಕಾಲುವೆಯನ್ನು ಅತಿಕ್ರಮಿಸುವುದು ಸರಿಯಲ್ಲ. ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಕಾಲುವೆಯನ್ನು ತೆರವುಗೊಳಿಸಬೇಕು. ಇಲ್ಲವಾದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು," ಎಂದು ಎಚ್ಚರಿಕೆ ನೀಡಿದರು.

ಈ ಕುರಿತು ಪ್ರತಿಕ್ರಿಯಿಸಿರುವ ವಿಜಯಪುರ ಪುರಸಭೆ ಮುಖ್ಯಾಧಿಕಾರಿ ಸತ್ಯನಾರಾಯಣ, "ನಕ್ಷೆಯಲ್ಲಿ ರಾಜಕಾಲುವೆ ಇರುವುದು ತೋರಿಸುತ್ತಿದೆ. ಆದರೆ ಸ್ಥಳದಲ್ಲಿ ಕಾಲುವೆ ಮುಚ್ಚಿರುವುದು ಕಂಡುಬಂದಿದೆ. ಇಲ್ಲಿ ನಿಜವಾಗಿಯೂ ರಾಜಕಾಲುವೆ ಇದೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಸರ್ವೆ ನಡೆಸಿ ಸ್ಪಷ್ಟನೆ ನೀಡುವಂತೆ ಕಂದಾಯ ಇಲಾಖೆಗೆ ಪತ್ರ ಬರೆಯಲಾಗುವುದು," ಎಂದು ತಿಳಿಸಿದ್ದಾರೆ.

# ಮೀಸಲಾತಿ ಜಾರಿಗೆ ಆಗ್ರಹಿಸಿ ಪ್ರತಿಭಟನೆ



ತುಮಕೂರು

ಪರಿಶಿಷ್ಟ ಪಂಗಡಕ್ಕೆ ಘೋಷಿಸಲಾಗಿರುವ ಶೇ. 7ರಷ್ಟು ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಹಾಗೂ ಪ್ರಸ್ತುತ ನಡೆಯುತ್ತಿರುವ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಹೊಸ ಮೀಸಲಾತಿ ನೀತಿಯನ್ನೇ ಅನ್ವಯಿಸಬೇಕು ಎಂದು ಆಗ್ರಹಿಸಿ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸಲು ಒತ್ತಾಯ: ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಒಕ್ಕೂಟದ ಮುಖಂಡ ಕುಪ್ಪೂರು ಶ್ರೀಧರ್, "ರಾಜ್ಯ ಸರ್ಕಾರವು 2022ರಲ್ಲೇ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ. 15ರಿಂದ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ. 3ರಿಂದ 7ಕ್ಕೆ ಹೆಚ್ಚಿಸಿದೆ. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ತಿದ್ದುಪಡಿಯನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿವೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೇಮಕಾತಿ ಪ್ರಕ್ರಿಯೆಗೆ ವಿರೋಧ: ರಾಜ್ಯ ಸರ್ಕಾರವು ಪ್ರಸ್ತುತ 56,437 ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಆರಂಭಿಸಿದೆ. ಆದರೆ, ಈ ನೇಮಕಾತಿಯಲ್ಲಿ 2022ರ ಹೊಸ ಮೀಸಲಾತಿ ನೀತಿಯನ್ನು ಕೈಬಿಟ್ಟು, ಹಳೆಯ ಮಾದರಿಯನ್ನು ಅನುಸರಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. "ಹೊಸ ಮೀಸಲಾತಿ ಅನ್ವಯವಾಗುವವರೆಗೂ ಯಾವುದೇ ನೇಮಕಾತಿ ಮಾಡಬಾರದು. ಒಂದು ವೇಳೆ ನಮ್ಮ ಬೇಡಿಕೆ ಈಡೇರಿಸದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು" ಎಂದು ಅವರು ಎಚ್ಚರಿಸಿದರು.

"ಮೀಸಲಾತಿ ನಮ್ಮ ಹಕ್ಕು, ಭಿಕ್ಷೆಯಲ್ಲ" ಎಂಬ ಘೋಷಣೆಗಳೊಂದಿಗೆ ಪ್ರತಿಭಟನೆ ನಡೆಸಿದ ಮುಖಂಡರು, ನಂತರ ತಮ್ಮ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ ಅವರ ಮೂಲಕ ಸರ್ಕಾರಕ್ಕೆ ಸಲ್ಲಿಸಿದರು.

ಈ ಪ್ರತಿಭಟನೆಯಲ್ಲಿ ಒಕ್ಕೂಟದ ಮುಖಂಡರಾದ ಸಿಂಗದಹಳ್ಳಿ ರಾಜಕುಮಾರ್, ನಿವೃತ್ತ ಅಧಿಕಾರಿಗಳಾದ ನಾಗರಾಜು, ಪಿ.ಬಿ. ಬಸವರಾಜು, ಪ್ರಮುಖರಾದ ರಾಮಚಂದ್ರಪ್ಪ, ಸೋಲಾರ್ ರಾಜು, ವಿದ್ಯಾರ್ಥಿ ಘಟಕದ ನವೀನ್, ಮಂಜುನಾಥ್, ಕುಂದೂರು ಮುರುಳಿ ಸೇರಿದಂತೆ

# 'ಎನ್‌ಎಸ್‌ಎಸ್ ಶಿಬಿರ ಯಶಸ್ವಿ'

ಕನಕಪುರ

ತಾಲ್ಲೂಕಿನ ಕೋಡಿಹಳ್ಳಿ ಹೋಬಳಿಯ ಅರಳಿಮರದ ದೊಡ್ಡಿ ಗ್ರಾಮದಲ್ಲಿ ಕನಕಪುರ ರೂರಲ್ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಆಯೋಜಿಸಲಾಗಿದ್ದ ಏಳು ದಿನಗಳ ವಿಶೇಷ ಶಿಬಿರವು ಸಮಾಜಮುಖಿ ಕಾರ್ಯಗಳೊಂದಿಗೆ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಗ್ರಾಮದ ಬಸ್ ನಿಲ್ದಾಣಕ್ಕೆ ಹೊಸ ರೂಪ: ವಿದ್ಯಾರ್ಥಿಗಳ ಸೇವಾ ಮನೋಭಾವದ ಪ್ರತೀಕವಾಗಿ ಈ ಶಿಬಿರದಲ್ಲಿ ಗ್ರಾಮದ ಬಸ್ ನಿಲ್ದಾಣವನ್ನು ಪುನಶ್ಚೇತನಗೊಳಿಸಲಾಯಿತು. ಸ್ವಯಂಸೇವಕರು ನಿಲ್ದಾಣದ ಸುತ್ತಮುತ್ತಲಿನ ಕಸ ಕಡ್ಡಿಗಳನ್ನು ಸ್ವಚ್ಛಗೊಳಿಸಿದ್ದಲ್ಲದೆ, ಗೋಡೆಗಳಿಗೆ ಬಣ್ಣ ಬಳಿದು ಸುಂದರಗೊಳಿಸುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದರು. ಇದರೊಂದಿಗೆ ದೇವಾಲಯ ಹಾಗೂ ಸಾರ್ವಜನಿಕ ರಸ್ತೆಗಳ ಸ್ವಚ್ಛತಾ ಅಭಿಯಾನವನ್ನು ನಡೆಸಿ ಸಸಿಗಳನ್ನು ನೆಡುವ ಮೂಲಕ ಪರಿಸರ ಪ್ರೇಮ ಮೆರೆದರು.

ಜಾಗೃತಿ ಕಾರ್ಯಕ್ರಮಗಳ ಸುರಿಮಳೆ: ಕೇವಲ ಶ್ರಮದಾನಕ್ಕೆ ಸೀಮಿತವಾಗದೆ, ಶಿಬಿರದಲ್ಲಿ ರೈತರಿಗಾಗಿ ಆಧುನಿಕ ಮತ್ತು ಸಾವಯವ ಕೃಷಿ ಪದ್ಧತಿಗಳ ಬಗ್ಗೆ ತಜ್ಞರಿಂದ ಮಾಹಿತಿ ನೀಡಲಾಯಿತು. ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ವೈದ್ಯರು ಭಾಗವಹಿಸಿ ಪೌಷ್ಟಿಕ ಆಹಾರ ಹಾಗೂ ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಸಲಹೆ ನೀಡಿದರು. ಎನ್‌ಎಸ್‌ಎಸ್ ಸ್ವಯಂಸೇವಕರು ಮನೆ ಮನೆಗೆ ತೆರಳಿ ಶಿಕ್ಷಣ ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಸಂಸ್ಥೆಯ ಅಧ್ಯಕ್ಷರಾದ ಹೆಚ್.ಕೆ. ಶ್ರೀಕಂಠ ಅವರು ಮಾತನಾಡಿ, "ವಿದ್ಯಾರ್ಥಿಗಳು ಶೈಕ್ಷಣಿಕ ಜೀವನದ ಜೊತೆಗೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ಅವರ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ" ಎಂದು ಶ್ಲಾಘಿಸಿದರು. ಡಾ. ನಂದೀಶ್ ಹೆಚ್.ಡಿ. ಅವರು ಮಾತನಾಡಿ, ಸಮಾಜದ ಅಭಿವೃದ್ಧಿಯಲ್ಲಿ ಯುವಶಕ್ತಿಯ ಪಾತ್ರ ಮಹತ್ತರವಾದುದು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ರೂರಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ.ಎಸ್. ಕೆಂಪೇಗೌಡ, ಉಪ ಪ್ರಾಂಶುಪಾಲರಾದ ಡಾ. ಎ.ಹೆಚ್. ಅಪ್ಪಾಜಿ, ಶಿಬಿರಾಧಿಕಾರಿ ಡಾ. ಭೋಜರಾಜ್ ಉಪಸ್ಥಿತರಿದ್ದರು. ಗ್ರಾಮದ ಮುಖಂಡ ಕೃಷ್ಣಪ್ಪ, ವೆಂಕಟೇಶ್, ಮುನಿಯಪ್ಪ, ರಾಜು, ವೆಂಕಟರಾಮು ಸೇರಿದಂತೆ ಅನೇಕರು ಶಿಬಿರದ ಯಶಸ್ಸಿಗೆ ಸಹಕರಿಸಿದರು.

# ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸಿ: ಡಾ. ಶ್ರೀಧರ್



ತಿಪಟೂರು

"ಮಕ್ಕಳಿಗೆ ಕೇವಲ ಪಠ್ಯದ ಶಿಕ್ಷಣ ನೀಡಿದರೆ ಸಾಲದು, ಅದರ ಜೊತೆಗೆ ಸಂಸ್ಕಾರವನ್ನು ಕಲಿಸಿದಾಗ ಮಾತ್ರ ಅವರು ಸಮಾಜದ ಉತ್ತಮ ಆಸ್ತಿಯಾಗಲು ಸಾಧ್ಯ," ಎಂದು ಡಾ. ಶ್ರೀಧರ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕಸಬಾ ಮೇಲಾಪುರದ ಎಸ್‌ಎಸ್ ಮಿಲೇನಿಯಂ ಸ್ಕೂಲ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಉತ್ತಮ ಪರಿಸರ ಮತ್ತು ಸಂಸ್ಕಾರದಿಂದ ಬೆಳೆಯುವ ಮಕ್ಕಳು ಭವಿಷ್ಯದಲ್ಲಿ ಉಜ್ವಲ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾರೆ. ಗ್ರಾಮೀಣ ಭಾಗದ ಪೋಷಕರು ಜೀವನದ ಸಂಘರ್ಷದ ನಡುವೆ ಮಕ್ಕಳ ಮೇಲೆ ನಿಗಾವಹಿಸುವುದು ಕಷ್ಟಕರವಾಗಿದ್ದು, ಇಂತಹ ಕೊರತೆಯನ್ನು ನೀಗಿಸುವಲ್ಲಿ ಸುಸಜ್ಜಿತ ಆಟದ ಮೈದಾನ ಹಾಗೂ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಮಿಲೇನಿಯಂ ಶಾಲೆ ಶ್ಲಾಘನೀಯ ಕೆಲಸ ಮಾಡುತ್ತಿದೆ ಎಂದರು.

ಮರೆಯಾಗುತ್ತಿರುವ ಮಾನವೀಯ ಸಂಬಂಧಗಳು: ಇದೇ ಸಂದರ್ಭದಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿದ ಅವರು, "ಸಮಾಜದಲ್ಲಿ ಇಂದು ಮಾನವೀಯ ಸಂಬಂಧಗಳು ಕಳೆದುಹೋಗುತ್ತಿವೆ. ಸಂಸ್ಕಾರ ಮತ್ತು ಉತ್ತಮ ವ್ಯಕ್ತಿತ್ವದ ಮೂಲಕ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯ," ಎಂದು ಎಚ್ಚರಿಸಿದರು.

ದ್ವೇಷಮುಕ್ತ ಸಮಾಜದ ಅಗತ್ಯ: ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಸನ್ಮಾನ ಸ್ವೀಕರಿಸಿದ ಸಮಾಜ ಸೇವಕ ನವಿಲೆ ಪರಮೇಶ್ ಮಾತನಾಡಿ, "ಪ್ರಸ್ತುತ ಸಮಾಜದಲ್ಲಿನ ವಾತಾವರಣ ಹದಗೆಡುತ್ತಿದೆ. ಮುಂದಿನ ಪೀಳಿಗೆಗೆ ನೆಮ್ಮದಿಯ ಜೀವನ ನೀಡಬೇಕಾದರೆ ಜಾತಿ, ಧರ್ಮ ಮತ್ತು ದ್ವೇಷ ಅಸೂಯೆಗಳಿಲ್ಲದ ವಾತಾವರಣವನ್ನು ನಿರ್ಮಿಸಬೇಕು. ಇದು ಮನೆ ಮತ್ತು ಶಾಲೆ ಎರಡರಿಂದಲೂ ಆರಂಭವಾಗಬೇಕು," ಎಂದು ಕರೆ ನೀಡಿದರು.ದ್ವೇಷಮುಕ್ತ ಸಮಾಜದ ಅಗತ್ಯ: ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಸನ್ಮಾನ ಸ್ವೀಕರಿಸಿದ ಸಮಾಜ ಸೇವಕ ನವಿಲೆ ಪರಮೇಶ್ ಮಾತನಾಡಿ, "ಪ್ರಸ್ತುತ ಸಮಾಜದಲ್ಲಿನ ವಾತಾವರಣ ಹದಗೆಡುತ್ತಿದೆ. ಮುಂದಿನ ಪೀಳಿಗೆಗೆ ನೆಮ್ಮದಿಯ ಜೀವನ ನೀಡಬೇಕಾದರೆ ಜಾತಿ, ಧರ್ಮ ಮತ್ತು ದ್ವೇಷ ಅಸೂಯೆಗಳಿಲ್ಲದ ವಾತಾವರಣವನ್ನು ನಿರ್ಮಿಸಬೇಕು. ಇದು ಮನೆ ಮತ್ತು ಶಾಲೆ ಎರಡರಿಂದಲೂ ಆರಂಭವಾಗಬೇಕು," ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಡಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸಂತೋಷ್ ಕುಮಾರ್, ಕಲಾಕೃತಿ ಸಂಸ್ಥೆಯ ಕಾರ್ಯದರ್ಶಿ ತಿಪಟೂರು ಕೃಷ್ಣ ಹಾಗೂ ಶಾಲೆಯ ಶಿಕ್ಷಕ ವೃಂದ, ಪೋಷಕರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ತಡಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸಂತೋಷ್ ಕುಮಾರ್, ಕಲಾಕೃತಿ ಸಂಸ್ಥೆಯ ಕಾರ್ಯದರ್ಶಿ ತಿಪಟೂರು ಕೃಷ್ಣ ಹಾಗೂ ಶಾಲೆಯ ಶಿಕ್ಷಕ ವೃಂದ, ಪೋಷಕರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಎಂಟು ಜನ ಮಹಿಳೆಯರ ಕೈಗೆ 'ಇ-ಆಟೋ' ಸಾರಥ್ಯ



ವಿಜಯಪುರ

"ಮಹಿಳೆಯರು ನಾಲ್ಕು ಗೋಡೆಗಳ ಮಧ್ಯೆ ಕುಳಿತುಕೊಳ್ಳುವ ಕಾಲ ಮುಗಿದಿದೆ. ತಮಗೆ ಸಿಕ್ಕಿರುವ ಅವಕಾಶಗಳನ್ನು ಬಳಸಿಕೊಂಡು ಸಮಾಜದ ಎಲ್ಲಾ ರಂಗಗಳಲ್ಲೂ ಸಾಧಕಿಯರಾಗಬೇಕು," ಎಂದು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರತಿಷ್ಠಾನದ ಮುಖ್ಯಸ್ಥೆ ನಳಿನಿ ಜಾರ್ಜ್ ಕರೆ ನೀಡಿದರು.

ಪಟ್ಟಣದ 6ನೇ ವಾರ್ಡ್‌ನ ಚನ್ನಕೇಶವಸ್ವಾಮಿ ದೇವಾಲಯದ ಆವರಣದಲ್ಲಿ ಪುರಸಭೆ ಸದಸ್ಯೆ ಶಿಲ್ಪಾ ಅಜಿತ್ ಅವರ ನೇತೃತ್ವದಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಕೆಂಪೇಗೌಡ ವಿಮಾನ ನಿಲ್ದಾಣ ಪ್ರತಿಷ್ಠಾನ, ಸೀಟಾ ಮತ್ತು ಸಿ.ಎಸ್.ಆರ್ ತಂಡಗಳ ಸಹಯೋಗದೊಂದಿಗೆ 'ನಾರಿಡ್ರೈವ್ ಇ–ಮಹಿಳಾ' ಯೋಜನೆಯಡಿ 8 ಮಂದಿ ಮಹಿಳೆಯರಿಗೆ ಉಚಿತವಾಗಿ ಎಲೆಕ್ಟ್ರಿಕ್ ಆಟೋಗಳನ್ನು ವಿತರಣೆ ಮಾಡಲಾಯಿತು.

ಸ್ವಾವಲಂಬಿ ಬದುಕಿಗೆ ಆಸರೆ: ಪುರಸಭೆ ಸದಸ್ಯೆ ಶಿಲ್ಪಾ ಅಜಿತ್ ಮಾತನಾಡಿ, "ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಈ ಯೋಜನೆ ವರದಾನವಾಗಿದೆ. ಉಚಿತವಾಗಿ ಸಿಕ್ಕಿರುವ ಈ ಆಟೋಗಳ ಮೂಲಕ ಪ್ರಾಮಾಣಿಕವಾಗಿ ದುಡಿಮೆ ಮಾಡಿ ಕುಟುಂಬಕ್ಕೆ ಆಸರೆಯಾಗಬೇಕು," ಎಂದರು. ಸೀಟಾ ಸಂಸ್ಥೆಯ ಜೇನಿಯಾ ಅವರು ಮಾತನಾಡಿ, ಅವಕಾಶ ವಂಚಿತ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರುವುದೇ ನಮ್ಮ ಉದ್ದೇಶ ಎಂದು ತಿಳಿಸಿದರು.

ಕಟ್ಟುನಿಟ್ಟಿನ ನಿಯಮಗಳು: ಶಿಶು ಮಂದಿರದ ಮುಖ್ಯಸ್ಥ ಆನಂದ್ ಅವರು ಆಟೋ ಪಡೆದ ಮಹಿಳೆಯರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. "ಈ ಎಲೆಕ್ಟ್ರಿಕ್ ಆಟೋಗಳನ್ನು ಮಹಿಳೆಯರು ಮಾತ್ರ ಚಾಲನೆ ಮಾಡಬೇಕು. ಯಾವುದೇ ಕಾರಣಕ್ಕೂ ಪುರುಷರು ಓಡಿಸುವಂತಿಲ್ಲ, ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಅಡಮಾನ ಇಡುವಂತಿಲ್ಲ. ಆಟೋದ ಮೂಲ ದಾಖಲೆಗಳು ಸಂಸ್ಥೆಯ ಬಳಿಯೇ ಇರಲಿವೆ. ನಿಯಮ ಉಲ್ಲಂಘಿಸಿ ದುರುಪಯೋಗ ಮಾಡಿಕೊಂಡರೆ ಆಟೋವನ್ನು ವಾಪಸ್ ಪಡೆಯಲಾಗುವುದು," ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಶಿಶು ಮಂದಿರದ ವಿದ್ಯಾರ್ಥಿಗಳು ನಡೆಸಿಕೊಟ್ಟ ಕಂಸಾಳೆ ನೃತ್ಯ ನೆರೆದಿದ್ದವರ ಗಮನ ಸೆಳೆಯಿತು. ಸಮಾರಂಭದಲ್ಲಿ ಪುರಸಭೆ ಸದಸ್ಯರಾದ ಬೈರೇಗೌಡ, ಸೌಮ್ಯ ನಿಂಗಪ್ಪ, ತರಬೇತುದಾರೆ ಮಂಜುಳಾ, ಅಜಿತ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಮಹಿಳೆ ಅಡುಗೆ ಮನೆಗೆ ಮಾತ್ರವಲ್ಲ, ದೇಶದ ಆಡಳಿತಕ್ಕೂ ಸೈ: ಎಸ್. ಶಕುಂತಲಾ

ಕೋಲಾರ

"ಮಾನವೀಯತೆಯೇ ಧರ್ಮವಾಗಬೇಕು. ಮಹಿಳೆ ಕೇವಲ ಅಡುಗೆ ಮನೆಗೆ ಸೀಮಿತ ಎಂಬ ಕಾಲ ಮರೆಯಾಗಿದೆ. ಅವಳು ಇಂದು ದೇಶದ ಆಡಳಿತವನ್ನೂ ಸಮರ್ಥವಾಗಿ ನಿರ್ವಹಿಸಬಲ್ಲಳು ಎಂಬುದನ್ನು ಜಗತ್ತಿಗೆ ಸಾಬೀತುಪಡಿಸಿದ್ದಾಳೆ," ಎಂದು ಪ್ರಿನ್ಸಿಪಲ್ ಸೀನಿಯರ್ ಸಿವಿಲ್ ಜಡ್ಜ್ ಹಾಗೂ ಸಿಜೆಎಂ ಎಸ್. ಶಕುಂತಲಾ ತಿಳಿಸಿದರು.

ಮಂಗಸಂದ್ರದ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸುವರ್ಣಗಂಗೆ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ 'ವಿಶ್ವ ಮಹಿಳಾ ದಿನಾಚರಣೆ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಮಹಿಳೆಯರ ಏಳಿಗೆಯೇ ಭಾರತದ ಏಳಿಗೆ. ಅಂಬೇಡ್ಕರ್ ಅವರು ಹೇಳಿದಂತೆ, ಒಂದು ಸಮುದಾಯದ ಪ್ರಗತಿಯನ್ನು ಅಲ್ಲಿನ ಮಹಿಳೆಯರ ಸಾಧನೆಯ ಆಧಾರದ ಮೇಲೆ ಅಳೆಯಬೇಕು. ಸಂವಿಧಾನ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿದ್ದರೂ, ಅದನ್ನು ಜಾರಿಗೊಳಿಸುವಲ್ಲಿ ಸಮಾಜದ ಪಾತ್ರ ಇನ್ನೂ ದೊಡ್ಡದಿದೆ ಎಂದರು.

ಗೌರವಕ್ಕಿಂತ ಪೂಜೆ ಮುಖ್ಯವಲ್ಲ: ಲೇಖಕಿಯರ ಸಂಘದ ಅಧ್ಯಕ್ಷೆ ಸುನಂದಮ್ಮ ಮಾತನಾಡಿ, "ಹೆಣ್ಣನ್ನು ಪೂಜಿಸುವುದಕ್ಕಿಂತ ಪರಸ್ಪರ ಗೌರವಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಅಧೀನತೆ ಎನ್ನುವುದು ಗೌರವ ತರುವುದಿಲ್ಲ. ಪಿತೃಪ್ರಧಾನ ವ್ಯವಸ್ಥೆಯ ಮನಸ್ಥಿತಿಯಿಂದ ಮುಕ್ತರಾದಾಗ ಮಾತ್ರ ಮಹಿಳೆ ನಿಜವಾದ ಸ್ವಾತಂತ್ರ್ಯ ಅನುಭವಿಸಲು ಸಾಧ್ಯ," ಎಂದು ಮಾರ್ಮಿಕವಾಗಿ ನುಡಿದರು.

ಪರಿವರ್ತನೆಯ ಹಾದಿಯಲ್ಲಿ ವಿಶ್ವವಿದ್ಯಾಲಯ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಬಿ.ಕೆ. ರವಿ ಮಾತನಾಡಿ, "ಪುರುಷಪ್ರಧಾನ ಸಮಾಜದ ಮನೋಭಾವ ಬದಲಾದಾಗ ಮಹಿಳಾ ದಿನಾಚರಣೆಗೆ ಅರ್ಥ ಸಿಗುತ್ತದೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಶೀಘ್ರದಲ್ಲೇ 'ಮಹಿಳಾ ಅಧ್ಯಯನ ಕೇಂದ್ರ' ಆರಂಭಿಸಲಾಗುವುದು. ಅದರಲ್ಲೂ ಮಹಿಳೆ ಮತ್ತು ಮಾಧ್ಯಮದ ಕುರಿತಾದ ಅಧ್ಯಯನಗಳಿಗೆ ಆದ್ಯತೆ ನೀಡಲಾಗುವುದು," ಎಂದು ಘೋಷಿಸಿದರು. ವಿಶೇಷ ಆಕರ್ಷಣೆ: ಈ ಬಾರಿಯ ಕಾರ್ಯಕ್ರಮದ ವಿಶೇಷವೆಂದರೆ, ಮಹಿಳಾ ದಿನಾಚರಣೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ವಿವಿಧ ವಿಭಾಗಗಳ ಪುರುಷ ಅಧ್ಯಾಪಕರು ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಿದ್ದರು. ಸಮಾರಂಭದಲ್ಲಿ ಕುಲಸಚಿವ ಸಿ.ಎನ್. ಶ್ರೀಧರ್, ನಿರ್ದೇಶಕ ಪ್ರೊ. ಕುಮುದಾ, ನೋಡಲ್ ಅಧಿಕಾರಿ ಡಾ. ರಮೇಶ್ ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಡಾ. ವಿವೇಚನ್ ಸಾರಥ್ಯದಲ್ಲಿ ಲಯನ್ಸ್ ಕ್ಲಬ್ ಪುನರಾರಂಭ..

ತಿಪಟೂರು

ನಾಲ್ಕು ದಶಕಗಳ ನಂತರ ಅಂತರಾಷ್ಟ್ರೀಯ ಮಟ್ಟದ ಲಯನ್ಸ್ ಕ್ಲಬ್ ತಿಪಟೂರಿನಲ್ಲಿ ಪುನರಾರಂಭಗೊಳ್ಳುತ್ತಿದ್ದು ಅದರ ಸಾರಥ್ಯ ಖ್ಯಾತ ವೈದ್ಯ ಜಿ ಬಿ ವಿವೇಚನ ಅವರ ಹೆಗಲ ಮೇಲಿದೆ. ಜಿಲ್ಲಾ ಕೇಂದ್ರವಾಗುವ ಸರದಿಯಲ್ಲಿರುವ ತಿಪಟೂರಿನಲ್ಲಿ ಲಯನ್ಸ್ ಕ್ಲಬ್‌ನ ಸೇವಾಕ್ಷೇತ್ರದ ಅವಶ್ಯಕತೆ ಮತ್ತು ವಿಸ್ತರಣೆ ಅನಿವಾರ್ಯವಾಗಿದೆ ಎನ್ನುವ ಸದುದ್ದೇಶದಿಂದ ಲಯನ್ಸ್ ಕ್ಲಬ್ ಆರಂಭಗೊಳ್ಳುತ್ತಿದ್ದು ಇದರ ಪೂರ್ವಭಾವಿ ಸಭೆ ಶನಿವಾರ ನಗರದ ಶಿವಂ ಕೆಫೆಯಲ್ಲಿ ನಡೆಯಿತು.

ಬಿಡುವಿಲ್ಲದ ಒತ್ತಡದಲ್ಲೂ ಸಮಾಜ ಸೇವೆಯ ದೃಷ್ಟಿಯಿಂದ ಸಂಸ್ಥೆಯ ಸದಸ್ಯರ ಒತ್ತಾಯ ಮತ್ತು ಸಹಕಾರಕ್ಕೆ ಮನ್ನಣೆ ನೀಡಿ, ಸಾರಥ್ಯವಹಿಸಿಕೊಳ್ಳುವುದಾಗಿ ಡಾ. ವಿವೇಚನ್ ಹೇಳಿದರು.

ಹೆಚ್ ಆರ್ ರಂಗನಾಥ್ ದಂಟಿಚಿಟ ಚೇರ್ ಪರ್ಸನ್ ತುರುವೇಕೆರೆ ಅವರು ಮಾತನಾಡಿ, ಹಿಂದೆ ಕಲ್ಪತರು ತಾಂತ್ರಿಕ ಕಾಲೇಜಿನಲ್ಲಿ ಲಿಯೋ ಕ್ಲಬ್ ಪ್ರಾರಂಭಿಸಿದ್ದೇವೆ, ಲಯನ್ಸ್ ಕ್ಲಬ್ ನಿಂದ ಸುತ್ತಮುತ್ತಲಿನ ಜನಗಳಿಗೆ ನೇರವಾಗಿ ಸೇವೆಯನ್ನು ತಲುಪಿಸಬಹುದು. ಲಯನ್ಸ್ ಕ್ಲಬ್ ಒಂದು ಸಾಮಾಜಿಕ ನೆಟ್ವರ್ಕ್. ಒಬ್ಬರಿಂದ ಒಬ್ಬರಿಗೆ ಸಹಾಯ ಮಾಡಬಹುದಾದಂತಹ ಒಂದು ಫ್ಲಾಟ್ ಫಾರಂ ಇದಾಗಿದ್ದು, ವೈಯಕ್ತಿಕವಾಗಿ ನಾವು ಸಹ ಸಮಾಜದಲ್ಲಿ ಗುರುತಿಸಿಕೊಳ್ಳುವುದಕ್ಕೆ ಒಂದು ಉತ್ತಮವಾದ ವೇದಿಕೆ ಎನಿಸಿದೆ ಎಂದರು.

ಸಭೆಯಲ್ಲಿದ್ದ ತುರುವೇಕೆರೆಯ ಡಾಕ್ಟರ್ ನಾಗರಾಜ್ ಪ್ರಿವಿಯಸ್ ಕಾರ್ಯದರ್ಶಿಗಳು ಇವರು ಸಭೆಯನ್ನು ಉದ್ದೇಶಿಸಿ ಸಾಮಾಜಿಕ ಸೇವೆಯನ್ನು ನೀಡುತ್ತಿರುವ ವ್ಯವಸ್ಥಿತವಾದ ಒಂದು ಸಂಸ್ಥೆ ಸುಮಾರು 210 ದೇಶಗಳಲ್ಲಿ ಸಾಮಾನ್ಯ ಜನರಿಗೆ ಆರೋಗ್ಯ ತಪಾಸಣೆ, ನೇತ್ರ ಪರೀಕ್ಷೆ, ಚಿಕಿತ್ಸೆ ಮತ್ತು ನೇತ್ರದಾನ ಇತ್ಯಾದಿ ಸಾಮಾಜಿಕ ಸೇವೆಗಳನ್ನು ನಿರಂತರವಾಗಿ ನೀಡುತ್ತಿದ್ದು ಪ್ರತಿಫಲಾಪೇಕ್ಷೆ ಇಲ್ಲದೇ ಸಮಾಜ ಸೇವೆ ಮಾಡುವ ಆಸಕ್ತರಿಗೆ ಸಂಸ್ಥೆಗೆ ಸ್ವಾಗತವಿದೆ ಎಂದರು.

# ಮಹಿಳಾ ಗುಂಪಿನಿಂದ ವಿನೂತನ ಸೇವಾ ಕಾರ್ಯ



ಚಿಕ್ಕಬಳ್ಳಾಪುರ

ಬಯಲುಸೀಮೆ ಭಾಗದಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ಬೇಗೆ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಹಾಗೂ ಸರ್ಕಾರಿ ಕಚೇರಿಗಳ ಸಿಬ್ಬಂದಿ ಕೆಲಸ ನಿರ್ವಹಿಸಲು ಹೈರಾಣಾಗುತ್ತಿದ್ದಾರೆ. ಈ ಬಿಸಿಲಿನ ತಾಪವನ್ನು ಅರಿತ ಎ.ವಿ.ಎಲ್.ಜಿ.ಐ ಚಿಕ್ಕಬಳ್ಳಾಪುರ ವಿಭಾಗದ ಮಹಿಳೆಯರು, ಕಚೇರಿಗಳಿಗೆ ಖುದ್ದು ಭೇಟಿ ನೀಡಿ ಉಚಿತವಾಗಿ ತಣ್ಣನೆಯ ಮಜ್ಜಿಗೆ ಹಾಗೂ ಕೋಸಂಬರಿ ವಿತರಿಸುವ ಮೂಲಕ ಜನರ ದಾಹ ತಣಿಸುತ್ತಿದ್ದಾರೆ.

ಅಂಚೆ ಕಚೇರಿಯಲ್ಲಿ ಸೇವಾ ಕಾರ್ಯ: ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ಮಹಿಳಾ ವಿಭಾಗದ ಅಧ್ಯಕ್ಷೆ ಆಶಾರಾಣಿ ಅವರ ನೇತೃತ್ವದಲ್ಲಿ ಈ ಸೇವಾ ಕಾರ್ಯ ಜರುಗಿತು. ಬೇಸಿಗೆಯ ಧಗೆಯಿಂದಾಗಿ ಎಷ್ಟು ನೀರು ಕುಡಿದರೂ ದಾಹ ತೀರದ ಪರಿಸ್ಥಿತಿಯಲ್ಲಿ, ಸಂಘದ ಮಹಿಳೆಯರು ಅಂಚೆ ಕಚೇರಿಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಅಲ್ಲಿಗೆ ಬಂದಿದ್ದ ಸಾರ್ವಜನಿಕರಿಗೆ ಮಜ್ಜಿಗೆ ವಿತರಿಸಿದರು.

ಸಮಾಜಮುಖಿ ಚಿಂತನೆ: ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಘಟಕದ ಅಧ್ಯಕ್ಷೆ ಕೆ.ಕೆ. ಆಶಾರಾಣಿ, "ಬಿಸಿಲಿನ ತೀವ್ರತೆ ಹೆಚ್ಚಾಗಿರುವುದರಿಂದ ಜನರ ಆರೋಗ್ಯ ಮತ್ತು ದಾಹದ ಕಡೆಗೆ ಗಮನ ಹರಿಸುವುದು ಅಗತ್ಯವಾಗಿದೆ. ನಮಗೆ ಸಿಕ್ಕ ಈ ಅವಕಾಶದ ಮೂಲಕ ಅನೇಕ ಜನರ ದಾಹ ನೀಗಿಸಿರುವುದು ಸಂತಸ ತಂದಿದೆ. ಪ್ರತಿ ವಾರವೂ ಒಂದೊಂದು ಕಚೇರಿಗೆ ತೆರಳಿ ಈ ಕಾರ್ಯ ಮುಂದುವರಿಸಲಾಗುವುದು," ಎಂದು ತಿಳಿಸಿದರು.

ಅಂಚೆ ಕಚೇರಿಯ ಸಿಬ್ಬಂದಿ ವರ್ಗದವರು ಮಹಿಳಾ ಮಂಡಳಿಯ ಈ ಕಾಳಜಿಗೆ ಅಭಿನಂದನೆ ಸಲ್ಲಿಸಿದರು. ವಿತರಣಾ ಕಾರ್ಯದಲ್ಲಿ ಸಂಘದ ಕಾರ್ಯದರ್ಶಿ ಸೌಮ್ಯ, ಸದಸ್ಯರಾದ ನಿರ್ಮಲಾ, ಪದ್ಮಶ್ರೀ, ದೀಪಾ ಸಂತೋಷ್, ಕುಸುಮಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಹಿರಿಯ ಪತ್ರಕರ್ತ ಕೆ.ಜೆ. ಕುಮಾರ್ ನಿಧನ

ಮೈಸೂರು



ಸಾಂಸ್ಕೃತಿಕ ನಗರಿ ಮೈಸೂರಿನ ಹಿರಿಯ ಪತ್ರಕರ್ತ ಹಾಗೂ ಪ್ರಮುಖ ಪತ್ರಿಕಾ ವಿತರಕ ಕೆ. ಜೆ. ಕುಮಾರ್ (74) ಬುಧವಾರ ಸಂಜೆ ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಕಳೆದ 56 ವರ್ಷಗಳಿಂದ ಪತ್ರಿಕಾ ರಂಗದಲ್ಲಿ ಸಕ್ರಿಯರಾಗಿದ್ದ ಅವರು ಸಿನಿಮಾ ಪತ್ರಿಕೋದ್ಯಮದಲ್ಲಿ ಅಳಿಸಲಾಗದ ಛಾಪು ಮೂಡಿಸಿದ್ದರು. ಪತ್ರಿಕೋದ್ಯಮದ ಜೊತೆಗೆ ಹೋಟೆಲ್ ಉದ್ಯಮದಲ್ಲೂ ತೊಡಗಿಸಿಕೊಂಡಿದ್ದ ಇವರು ಸರಸ್ವತಿಪುರಂನಲ್ಲಿ 'ಕುಠಿರ ಮನೆ' ಹೋಟೆಲ್ ಸ್ಥಾಪಿಸಿದ್ದರು.ಮೃತರು ಪತ್ನಿ ಉಷಾ, ಪುತ್ರಿ ಸುನಯ ಶೆಟ್ಟಿ, ಸೋದರಿ ಹಾಗೂ ಮಾಜಿ ನಗರ ಪಾಲಿಕೆ ಸದಸ್ಯೆ ಪ್ರಮೀಳಾ ಪ್ರಕಾಶ್ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಗುರುವಾರ (ಮಾ. 12) ಮಧ್ಯಾಹ್ನದ ನಂತರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಕರಾಟೆ, ಝುಂಬಾ ಡ್ಯಾನ್ಸ್ ಮೂಲಕ ಮಹಿಳಾ ದಿನಾಚರಣೆಗೆ ವಿಶೇಷ ಮೆರುಗು

ಕೋಲಾರ




ಭಾರತೀಯ ಕ್ರೀಡಾ ಪ್ರಾಧಿಕಾರದ ಜಿಲ್ಲಾ ಖೇಲೋ ಇಂಡಿಯಾ ಸಣ್ಣ ಕೇಂದ್ರ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತಾಶ್ರಯದಲ್ಲಿ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'ಯ ಅಂಗವಾಗಿ 'ಫಿಟ್ ಇಂಡಿಯಾ ಮಹಿಳಾ ದಿನ–2026' ಅನ್ನು ನಗರದ ಕನಕ ಬ್ಯಾಸ್ಕೆಟ್ಬಾಲ್ ಕ್ರೀಡಾಂಗಣದಲ್ಲಿ ಅತ್ಯಂತ ಸಡಗರದಿಂದ ಆಚರಿಸಲಾಯಿತು.

ಸ್ವರಕ್ಷಣೆ ಮತ್ತು ಫಿಟ್‌ನೆಸ್ ಪಾಠ: ನಗರದ ವಿವಿಧ ಶಾಲೆಗಳಿಂದ ಆಗಮಿಸಿದ್ದ ಸುಮಾರು 200 ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಕರಾಟೆ ಬ್ಲಾಕ್ ಬೆಲ್ಟ್ ಪ್ರವೀಣರಾದ ಸೌಮ್ಯ ಮತ್ತು ರಾಜು ಅವರು ಜಪಾನೀಸ್ 'ಶಿಟೋ ರೇಯೋ' ಶೈಲಿಯ ಕರಾಟೆ ಸ್ವರಕ್ಷಣಾ ತಂತ್ರಗಳನ್ನು ಬೋಧಿಸಿದರು. ಇದರ ಜೊತೆಗೆ ವಿದ್ಯಾರ್ಥಿನಿಯರ ದೈಹಿಕ ಸದೃಢತೆಗಾಗಿ ನಡೆದ 'ಝುಂಬಾ ಡ್ಯಾನ್ಸ್ ಫಿಟ್‌ನೆಸ್' ಕಾರ್ಯಕ್ರಮವು ಎಲ್ಲರ ಗಮನ ಸೆಳೆಯಿತು.

ಹೆಣ್ಣಿಗೆ ಗೌರವ ಸಿಗುವೆಡೆ ನೆಮ್ಮದಿ: ಕಾರ್ಯಕ್ರಮವನ್ನು ಉದ್ಘಾಟಿಸಿದ ಮಹಿಳಾ ಸಮಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ನವೀನ ಎಂ. ಮಾತನಾಡಿ, "ಎಲ್ಲಿ ಹೆಣ್ಣಿಗೆ ಗೌರವ ಸಿಗುತ್ತದೆಯೋ ಆ ದೇಶ ಸುಭೀಕ್ಷವಾಗಿರುತ್ತದೆ. ಇಂದು ಮಹಿಳೆಯರು ನಾಲ್ಕು ಗೋಡೆಗಳಿಗೆ ಸೀಮಿತವಾಗದೆ ಪುರುಷರ ಸರಿಸಮಾನವಾಗಿ ಎಲ್ಲಾ ರಂಗಗಳಲ್ಲೂ ತಮ್ಮ ಛಾಪನ್ನು ಮೂಡಿಸುತ್ತಿದ್ದಾರೆ," ಎಂದು ಹರ್ಷ ವ್ಯಕ್ತಪಡಿಸಿದರು.


ಸಾಧಕಿಯರ ಸ್ಮರಣೆ: ಮುಖ್ಯ ಅತಿಥಿಯಾಗಿದ್ದ ಕ್ಷೇತ್ರ ಸಮನ್ವಯಾಧಿಕಾರಿ ರಾಧಮ್ಮ ಮಾತನಾಡಿ, "ಓಬವ್ವ, ಕಿತ್ತೂರು ಚೆನ್ನಮ್ಮ, ಅಕ್ಕಮಹಾದೇವಿಯಂತಹ ವೀರ ವನಿತೆಯರ ಸಾಧನೆ ನಮಗೆ ಮಾದರಿ. ವಿದ್ಯಾರ್ಥಿನಿಯರು ಯಾವುದೇ ಅಂಜಿಕೆ ಇಲ್ಲದೆ ತಮ್ಮ ಪ್ರತಿಭೆಯನ್ನು ಹೊರಹಾಕಿ ದೇಶದ ಸತ್ಪ್ರಜೆಗಳಾಗಬೇಕು," ಎಂದು ಕರೆ ನೀಡಿದರು.

ಪ್ರಮಾಣ ಪತ್ರ ವಿತರಣೆ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಜಯಲಕ್ಷ್ಮೀ ಅವರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು.

ಸಮಾರಂಭದಲ್ಲಿ ನಗರಸಭೆ ಸದಸ್ಯ ರಾಕೇಶ್, ಕನಕ ಬ್ಯಾಸ್ಕೆಟ್ ಬಾಲ್ ಸಂಸ್ಥೆಯ ಅಂಚೆ ಅಶ್ವಥ್, ಖೇಲೋ ಇಂಡಿಯಾ ತರಬೇತುದಾರ ರಘುವೀರ್ ಉಪಸ್ಥಿತರಿದ್ದರು. ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಕೆ.ಟಿ. ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

# ಮಹಿಳೆಯರು ಅಬಲೆಯರಲ್ಲ, ಸಾಧಕರು: ಈಶ್ವರ ಖಂಡ್ರೆ

ಬೆಂಗಳೂರು



ತೊಟ್ಟಿಲು ತೂಗುವ ಕೈ ದೇಶವನ್ನೂ ಆಳಬಲ್ಲದು ಎಂಬುದನ್ನು ಇಂದಿರಾಗಾಂಧೀ ಅವರು ನಿರೂಪಿಸಿದ್ದು, ಇಂದು ಎಲ್ಲ ಕ್ಷೇತ್ರದಲ್ಲೂ ಪುರುಷನಿಗೆ ಸಮನಾಗಿ ಸಾಧಿಸುತ್ತಿರುವ ಮಹಿಳೆಯರು ಅಬಲೆಯರಲ್ಲ, ಬದಲಾಗಿ ಸಾಧಕರು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದರು.

ಅರಣ್ಯ ಇಲಾಖೆಯ ವತಿಯಿಂದ ಇಂದು ಆಯೋಜಿಸಲಾಗಿದ್ದ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಪದ್ಮಶ್ರೀ ಪುರಸ್ಕೃತೆ ಡಾ. ಎಸ್.ಜಿ. ಸುಶೀಲಮ್ಮ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಇಂದು ಅರಣ್ಯ ಇಲಾಖೆಯಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಅಧಿಕಾರಿಗಳು, ಸಿಬ್ಬಂದಿ ಇದ್ದು, ರಾಜ್ಯ ಅರಣ್ಯ ಇಲಾಖೆಯ ಅತ್ಯುನ್ನತ "ಅರಣ್ಯ ಪಡೆ ಮುಖ್ಯಸ್ಥ"ರ ಹುದ್ದೆಯನ್ನೇ ಮಹಿಳೆ ನಿರ್ವಹಿಸುತ್ತಿದ್ದಾರೆ ಎಂದರು.

ತಾಯಿಯ ಪಾತ್ರ ಹಿರಿದು: ಮನೆಯಲ್ಲಿ ಮಕ್ಕಳಿಗೆ ತಾಯಿಯಾಗಿ, ಸೋದರಿಯಾಗಿ, ಪತಿಗೆ ಮಡದಿಯಾಗಿ ಶ್ರಮಿಸುವ ಮಹಿಳೆ ಕಚೇರಿಯಲ್ಲೂ ಕಾರ್ಯ ನಿರ್ವಹಿಸುವ ಮೂಲಕ, ಸಂಸಾರದ ರಥ ಎಳೆಯುತ್ತಾರೆ, ಮಹಿಳೆಯರಿಗೆ ತಾಳ್ಮೆ ಹೆಚ್ಚು. ಅದಕ್ಕೇ ಕ್ಷಮಯಾ ಧರಿತ್ರೀ ಎನ್ನುವುದು. ತಾಯಿಯಾಗಿ ನೀವೆಲ್ಲರೂ ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಮಾಡಿ, ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕತೆಯಿಂದ ರಾಜ್ಯದ ಮತ್ತು ಆ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸಿ ಎಂದರು. ಮಹಿಳಾ ದಿನದ ಕಾರ್ಯಕ್ರಮದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಮೀನಾಕ್ಷಿ ನೇಗಿ, ರಾಧಾದೇವಿ ಮತ್ತಿತರರು ಉಪಸ್ಥಿತರಿದ್ದರು.

# ಅಡುಗೆ ಮನೆಯಿಂದ ಅಂತರಿಕ್ಷದವರೆಗೆ ಮಹಿಳೆಯರ ಸಾಧನೆ ಅನನ್ಯ: ಶಿವಶಂಕರ

ಚಿಕ್ಕಬಳ್ಳಾಪುರ



"ಹೆಣ್ಣು ಸಂಸಾರದ ಕಣ್ಣು ಮಾತ್ರವಲ್ಲ, ಪುರುಷರ ಬದುಕಿಗೆ ಪರಿಪೂರ್ಣತೆ ನೀಡುವ ಪ್ರಕೃತಿಯ ಅನನ್ಯ ಸೃಷ್ಟಿ. ತಾಯಿ, ತಂಗಿ, ಹೆಂಡತಿಯಾಗಿ ಬದುಕಿನ ಬಂಡಿಯ ನೊಗ ಹೊತ್ತಿರುವ ಮಹಿಳೆಯರ ತ್ಯಾಗ ಮತ್ತು ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ," ಎಂದು ನ್ಯೂ ಬ್ರೈಟ್ ಎಜುಕೇಶನಲ್ ಸೊಸೈಟಿ ಅಧ್ಯಕ್ಷ ಶಿವಶಂಕರ ರೆಡ್ಡಿ ಅಭಿಪ್ರಾಯಪಟ್ಟರು.

ಮಂಚೇನಹಳ್ಳಿಯ ಪಿಳೇಕಮ್ಮ ಸಮುದಾಯ ಭವನದಲ್ಲಿ ನ್ಯೂ ಬ್ರೈಟ್ ಎಜುಕೇಶನಲ್ ಸೊಸೈಟಿ, ರಿಯಾನ್ ಪ್ಯಾರಾಮೆಡಿಕಲ್ ಇನ್ಸ್ಟಿಟ್ಯೂಟ್ ಹಾಗೂ ವಿಶ್ವ ಯುವ ಕೇಂದ್ರ (ನವದೆಹಲಿ) ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ "ವಿಶ್ವ ಮಹಿಳಾ ದಿನಾಚರಣೆ" ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಹಿಳೆಯರು ಕೇವಲ ಮನೆಗೆ ಸೀಮಿತವಾಗದೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲೂ ನಾಯಕಿಯರಾಗಿ ಬೆಳೆಯಬೇಕು ಎಂದರು.

ಅಬಲೆಯಲ್ಲ, ಸಬಲೆ: ಕಾರ್ಯಕ್ರಮ ಉದ್ಘಾಟಿಸಿದ ಮಂಚೇನಹಳ್ಳಿ ತಹಸಿಲ್ದಾರ್ ವಿ. ಪೂರ್ಣಿಮಾ ಮಾತನಾಡಿ, "ಇಂದಿನ ಕಾಲಘಟ್ಟದಲ್ಲಿ ಮಹಿಳೆಯರು ಅಬಲೆ ಎಂಬ ಹಣೆಪಟ್ಟಿಯನ್ನು ಅಳಿಸಿ ಸಬಲೆಯಾಗಿ ಹೊರಹೊಮ್ಮಿದ್ದಾರೆ. ಸರ್ಕಾರದ ಸೌಲತ್ತುಗಳನ್ನು ಬಳಸಿಕೊಂಡು ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು," ಎಂದು ಕರೆ ನೀಡಿದರು.

ಜಾಗೃತಿಯೇ ಮದ್ದು: ಸೊಸೈಟಿ ಕಾರ್ಯದರ್ಶಿ ರಾಜು ಸಾಲೋಮಾನ್ ಮಾತನಾಡಿ, "ಮಹಿಳೆಯರು ಇಂದು ಅಂತರಿಕ್ಷದವರೆಗೆ ಸಾಧನೆ ಮಾಡಿದ್ದರೂ, ಸಮಾಜದಲ್ಲಿ ಇಂದಿಗೂ ಲಿಂಗ ಅಸಮಾನತೆ ಹಾಗೂ ಶೋಷಣೆ ನಡೆಯುತ್ತಿರುವುದು ದುರದೃಷ್ಟಕರ. ಇದನ್ನು ಮೆಟ್ಟಿನಿಲ್ಲಲು ಮಹಿಳೆಯರು ಕಾನೂನುಬದ್ಧವಾಗಿ ಜಾಗೃತರಾಗಬೇಕು. ಮಹಿಳಾ ದಿನಾಚರಣೆ ಕೇವಲ ಒಂದು ದಿನದ ಆಚರಣೆಯಾಗದೆ, ವರ್ಷಪೂರ್ತಿ ಅವರ ಸ್ವಾಭಿಮಾನಕ್ಕೆ ಬೆಂಬಲ ನೀಡುವ ಸಂಕಲ್ಪವಾಗಲಿ," ಎಂದರು.

ಆರೋಗ್ಯದ ಕಡೆ ಇರಲಿ ಕಾಳಜಿ: ತಾಲೂಕು ಆರೋಗ್ಯ ಅಧಿಕಾರಿ ಡಾ. ಎಚ್. ಹೇಮಾ ಮಾತನಾಡಿ, ಕುಟುಂಬದ ಜವಾಬ್ದಾರಿಗಳ ಮಧ್ಯೆ ಮಹಿಳೆಯರು ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಬಾರದು. ಪೌಷ್ಟಿಕ ಆಹಾರ ಹಾಗೂ ವೈಯಕ್ತಿಕ ಆರೋಗ್ಯದ ಕಡೆಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಸಾಧಕರಿಗೆ ಸನ್ಮಾನ: ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣ್ಯ ಸಾಧನೆ ಮಾಡಿದ ಸಾಧಕಿಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ವೇದಿಕೆಯಲ್ಲಿ ಡಾ. ನವೀನ್, ಕಸಾಪ ಮಹಿಳಾ ಪ್ರತಿನಿಧಿ ಡಾ. ಪ್ರಭಾ ನಾರಾಯಣಗೌಡ, ಉಮಾ ಶಂಕರ್, ಪದ್ಮಾ, ಆಶಾ ಕಾರ್ಯಕರ್ತೆ ಹಸೀನಾ, ಮುಖ್ಯ ಶಿಕ್ಷಕಿ ಸರ್ವಮಂಗಳ ಹಾಗೂ ರಿಯಾನ್ ಕಾಲೇಜಿನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ರೈಲ್ವೆ ನಿಲ್ದಾಣದಲ್ಲಿ 'ಪೇ- ಪಾರ್ಕಿಂಗ್' ಆರಂಭ: ಅಡ್ಡಾದಿಡಿ ವಾಹನ ನಿಲುಗಡೆಗೆ ಬಿತ್ತು ಬ್ರೇಕ್!

ಎಂ. ಕೃಷ್ಣಪ್ಪ
ಚಿಕ್ಕಬಳ್ಳಾಪುರ




ನಗರದ ರೈಲ್ವೆ ನಿಲ್ದಾಣದ ಆವರಣದಲ್ಲಿ ದೀರ್ಘಕಾಲದ ತಲೆನೋವಾಗಿದ್ದ ಅಕ್ರಮ ವಾಹನ ನಿಲುಗಡೆ ಸಮಸ್ಯೆಗೆ ರೈಲ್ವೆ ಇಲಾಖೆ ಕೊನೆಗೂ ಇತಿಶ್ರೀ ಹಾಡಿದೆ. ಪ್ರಯಾಣಿಕರ ಹಿತದೃಷ್ಟಿಯಿಂದ ನಿಲ್ದಾಣದ ಆವರಣದಲ್ಲಿ ಅಧಿಕೃತ 'ಪೇ– ಪಾರ್ಕಿಂಗ್' (ಶುಲ್ಕ ಸಹಿತ ನಿಲುಗಡೆ) ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಟ್ರಾಫಿಕ್ ಕಿರಿಕಿರಿ ಮತ್ತು ಕಳವು ಭೀತಿ: ಇದುವರೆಗೆ ರೈಲ್ವೆ ನಿಲ್ದಾಣದಲ್ಲಿ ಸಮರ್ಪಕ ಪಾರ್ಕಿಂಗ್ ವ್ಯವಸ್ಥೆ ಇಲ್ಲದ ಕಾರಣ, ಪ್ರಯಾಣಿಕರು ಮಾತ್ರವಲ್ಲದೆ ಸಾರ್ವಜನಿಕರೂ ಸಹ ಎಲ್ಲೆಂದರಲ್ಲಿ ವಾಹನಗಳನ್ನು ಅಡ್ಡಾದಿಡಿಯಾಗಿ ನಿಲ್ಲಿಸುತ್ತಿದ್ದರು. ಕೆಲವು ವಾಹನಗಳು ವಾರಗಟ್ಟಲೆ, ತಿಂಗಳುಗಟ್ಟಲೆ ನಿಲ್ದಾಣದಲ್ಲೇ ಇರುತ್ತಿದ್ದವು. ಇದರಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಹಲವಾರು ದ್ವಿಚಕ್ರ ವಾಹನಗಳು ಕಳವಾಗಿದ್ದವು. ರೈಲ್ವೆ ಪೊಲೀಸರು ಎಷ್ಟೇ ಎಚ್ಚರಿಕೆ ನೀಡಿದರೂ ಸಾರ್ವಜನಿಕರು ಕ್ಯಾರೆ ಎನ್ನುತ್ತಿರಲಿಲ್ಲ. ಈ ಎಲ್ಲಾ ಸಮಸ್ಯೆಗಳಿಗೆ ಬ್ರೇಕ್ ಹಾಕಲು ಈಗ ಪಾರ್ಕಿಂಗ್ ಶುಲ್ಕ ವಿಧಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಪಾರ್ಕಿಂಗ್ ಶುಲ್ಕದ ವಿವರ: ಹೊಸ ನಿಯಮದಂತೆ ನಿಗದಿಪಡಿಸಿದ ಸ್ಥಳದಲ್ಲಿ ಮಾತ್ರ ವಾಹನ ನಿಲ್ಲಿಸಬೇಕು. ಮೊದಲ 2 ಗಂಟೆಗಳವರೆಗೆ.

ಸೈಕಲ್: ರೂ. 5

ದ್ವಿಚಕ್ರ ವಾಹನ: ರೂ. 20

ನಾಲ್ಕು ಚಕ್ರದ ವಾಹನ: ರೂ. 40

ನಂತರ ಪ್ರತಿ ಹೆಚ್ಚುವರಿ ಗಂಟೆಗೆ ಕ್ರಮವಾಗಿ ರೂ. 10 ಮತ್ತು ರೂ. 20 ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಪ್ರಯಾಣಿಕರನ್ನು ಬಿಡಲು ಬರುವವರಿಗೆ 5 ನಿಮಿಷಗಳವರೆಗೆ ಉಚಿತ ಕಾಲಾವಕಾಶ ನೀಡಲಾಗಿದೆ.

ಸಿಸಿಟಿವಿ ಮತ್ತು ಭದ್ರತೆ: ಬೆಂಗಳೂರಿನ ಯಶವಂತಪುರ, ದಂಡು ರೈಲ್ವೆ ನಿಲ್ದಾಣಗಳ ಮಾದರಿಯಲ್ಲಿ ಚಿಕ್ಕಬಳ್ಳಾಪುರ ನಿಲ್ದಾಣವನ್ನೂ ಅಭಿವೃದ್ಧಿಪಡಿಸಲು ಇಲಾಖೆ ಮುಂದಾಗಿದೆ. ಈಗಾಗಲೇ ಸಿಸಿಟಿವಿ ಅಳವಡಿಕೆಗೆ ಸಮೀಕ್ಷೆ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕ್ಯಾಮೆರಾಗಳು ಬರಲಿವೆ. ಸದ್ಯಕ್ಕೆ ವಾಹನಗಳ ಸುರಕ್ಷತೆಗಾಗಿ ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗಿದೆ.

ಅಧಿಕಾರಿಗಳ ಮನವಿ: ಅನಧಿಕೃತವಾಗಿ ವಾಹನ ನಿಲ್ಲಿಸಿದರೆ ಟೋಯಿಂಗ್ ಶುಲ್ಕ ಮತ್ತು ದಂಡ ವಿಧಿಸುವುದು ಕಡ್ಡಾಯವಾಗಿದೆ. "ನಿಮ್ಮ ವಾಹನಗಳ ಸುರಕ್ಷತೆಗಾಗಿ ನಿಗದಿಪಡಿಸಿದ ಜಾಗದಲ್ಲಿಯೇ ವಾಹನ ನಿಲ್ಲಿಸಿ ಅಧಿಕೃತ ಚೀಟಿ ಪಡೆದುಕೊಳ್ಳಿ," ಎಂದು ರೈಲ್ವೆ ಅಧಿಕಾರಿಗಳು ಮತ್ತು ಪೊಲೀಸರು ಕಳೆದ ಎರಡು ದಿನಗಳಿಂದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

# ದ್ವಿಭಾಷಾ ನೀತಿ ಜಾರಿಗೆ ಕನ್ನಡಪರ ಸಂಘಟನೆಗಳ ಪಟ್ಟು

ದೊಡ್ಡಬಳ್ಳಾಪುರ



ರಾಜ್ಯ ಶಿಕ್ಷಣ ಪದ್ಧತಿಯಲ್ಲಿ ಹಿಂದಿ ಭಾಷಾ ಕಲಿಕೆಯನ್ನು ಬಲವಂತವಾಗಿ ಹೇರುತ್ತಿರುವ ರಾಜ್ಯ ಸರ್ಕಾರದ ನೀತಿಯನ್ನು ವಿರೋಧಿಸಿ ದೊಡ್ಡಬಳ್ಳಾಪುರ ತಾಲೂಕಿನ ಕನ್ನಡಪರ, ದಲಿತಪರ ಹಾಗೂ ರೈತಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಹಿಂದಿ ಹೇರಿಕೆ ವಿರುದ್ಧ ಎಚ್ಚರಿಕೆ: ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು, "ಕರ್ನಾಟಕದ ಲಕ್ಷಾಂತರ ವಿದ್ಯಾರ್ಥಿಗಳ ಶೈಕ್ಷಣಿಕ ಮುನ್ನಡೆಗೆ ಹಿಂದಿ ಭಾಷೆ ತೊಡಕಾಗಿದೆ. 2025ರ ಸಾಲಿನಲ್ಲಿ 1.42 ಲಕ್ಷ ವಿದ್ಯಾರ್ಥಿಗಳನ್ನು ಹಿಂದಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳಿಸುವ ಮೂಲಕ ರಾಜ್ಯ ಸರ್ಕಾರ ಕನ್ನಡಿಗರ ಮೇಲೆ ಕೇಂದ್ರದ ಭಾಷಾ ದೌರ್ಜನ್ಯಕ್ಕೆ ಕೈಜೋಡಿಸಿದೆ," ಎಂದು ಕಿಡಿಕಾರಿದರು. ರಾಜ್ಯ ಸರ್ಕಾರ ತಕ್ಷಣವೇ 'ಪಾಸ್ ವಿತೌಟ್ ಹಿಂದಿ' (ಹಿಂದಿ ಇಲ್ಲದೆಯೂ ಉತ್ತೀರ್ಣ) ನಿಯಮವನ್ನು ಜಾರಿಗೆ ತರಬೇಕು. ಇಲ್ಲದಿದ್ದರೆ ಮಾ. 30ರಂದು ನಡೆಯಲಿರುವ ಹಿಂದಿ ಪರೀಕ್ಷಾ ಕೇಂದ್ರಗಳಿಗೆ ನುಗ್ಗಿ ಪರೀಕ್ಷೆಗೆ ಅಡ್ಡಿಪಡಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮಾಜಿ ನಗರಸಭಾ ಸದಸ್ಯ ಜಿ.ಸತ್ಯನಾರಾಯಣ, ಕನ್ನಡ ಪಕ್ಷದ ಸಂಜೀವ ನಾಯಕ, ಮುನಿಪಾಪಯ್ಯ, ವೆಂಕಟೇಶ್, ಕನ್ನಡ ಜಾಗೃತ ಪರಿಷತ್ತಿನ ಡಿ.ಪಿ. ಅಂಜನೇಯ, ಕರವೇ ರಾಜ್ಯ ಕಾರ್ಯದರ್ಶಿ ರಾಜಘಟ್ಟ ರವಿ, ರೈತ ಸಂಘದ ಪ್ರಸನ್ನ, ಮುತ್ತೇಗೌಡ ಸೇರಿದಂತೆ ವಿವಿಧ ಸಂಘಟನೆಗಳ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

## ಪ್ರಮುಖ ಬೇಡಿಕೆಗಳು:

ದ್ವಿಭಾಷಾ ನೀತಿ: ರಾಜ್ಯದಲ್ಲಿ ಕೇವಲ ಎರಡು ಭಾಷೆಗಳ ಕಲಿಕಾ ಪದ್ಧತಿಯನ್ನು ಜಾರಿಗೊಳಿಸಬೇಕು. ಥೋರಟ್ ಆಯೋಗದ ವರದಿಯನ್ನು ಸಾರ್ವಜನಿಕ ಚರ್ಚೆಗೆ ಒದಗಿಸಬೇಕು.

ಹಿಂದಿ ಅನಿವಾರ್ಯತೆ ಬೇಡ: ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಕಡ್ಡಾಯಗೊಳಿಸಬಾರದು ಮತ್ತು ಈ ಹಿಂದೆ ಹಿಂದಿಯಲ್ಲಿ ಅನುತ್ತೀರ್ಣರಾದ ಎಲ್ಲರನ್ನೂ ಉತ್ತೀರ್ಣರೆಂದು ಘೋಷಿಸಬೇಕು.

ತಪ್ಪು ಮಾಹಿತಿ ಹರಡದಿರಿ: ಪಠ್ಯಕ್ರಮದಲ್ಲಿ ಹಿಂದಿ 'ರಾಷ್ಟ್ರ ಭಾಷೆ' ಎನ್ನುವ ಕಲ್ಪಿತ ಮತ್ತು ಸುಳ್ಳು ವಿಷಯವನ್ನು ತಕ್ಷಣವೇ ತೆಗೆದುಹಾಕಬೇಕು.

ಮಂಡಳಿ ಮುತ್ತಿಗೆ: ಸರ್ಕಾರದ ನಿರ್ಧಾರ ಪ್ರಕಟವಾಗದಿದ್ದರೆ ಮಾ. 30ರಂದು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಎಸ್ಎಸ್ಎಲ್‌ಸಿ ಪರೀಕ್ಷಾ ಮಂಡಳಿಗೆ ಮುತ್ತಿಗೆ ಹಾಕಲಾಗುವುದು.

13/03/2026

# ಭಾರತ ಸಾರಥಿ


BHARATHA SARATHI KANNADA DAILY NEWS PAPER

ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ

ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

## ಮಾಲೂರಿನ ಭೂಕಬಳಿಕೆ ಬಗ್ಗೆ ಪರಿಶೀಲನೆ: ಸಚಿವ ಕೆ.ಬಿ. ಭರವಸೆ

ಬೆಂಗಳೂರು



ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಅಗಲಕೋಟೆ ಗ್ರಾಮದ ಜಮೀನು ಅತಿಕ್ರಮಣ ಹಾಗೂ ಭೂ ಪರಿವರ್ತನೆ ಪ್ರಕ್ರಿಯೆ ಕುರಿತು ಎದ್ದಿರುವ ವಿವಾದಕ್ಕೆ ಸಂಬಂಧಿಸಿದಂತೆ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ವಿಧಾನ ಪರಿಷತ್ತಿನಲ್ಲಿ ಬುಧವಾರ ಸ್ಪಷ್ಟನೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ್ ಎಸ್. ಅವರು ಮಂಡಿಸಿದ್ದ ನಿಯಮ 330ರ ಸೂಚನೆಗೆ ಉತ್ತರಿಸಿದ ಸಚಿವರು, ಶಿಕ್ಷಣ ಇಲಾಖೆಗೆ ದಾನವಾಗಿ ನೀಡಲಾದ ಸುಮಾರು 50 ಎಕರೆ 26 ಗುಂಟೆ ಜಮೀನು ಅತಿಕ್ರಮಣವಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಸರ್ಕಾರದ ವತಿಯಿಂದ ನಡೆಸಲಾದ ತನಿಖೆಯ ವಿವರಗಳನ್ನು ಸದನದ ಮುಂದಿರಿಸಿದರು.

ಜಮೀನಿನ ಹಿನ್ನೆಲೆ: ಅಗಲಕೋಟೆ ಗ್ರಾಮವು ಮೂಲತಃ 'ಜೋಡಿ ಇನಾಂ' ಗ್ರಾಮವಾಗಿದ್ದು, 1962ರ ವಿಶೇಷ ಜಿಲ್ಲಾಧಿಕಾರಿಗಳ ಆದೇಶದಂತೆ ಟಿ.ಜೆ. ಶ್ರೀನಿವಾಸಲು ಎಂಬುವವರಿಗೆ 251 ಎಕರೆ ಜಮೀನು ಮಂಜೂರಾಗಿತ್ತು. ನಂತರ ಈ ಆಸ್ತಿಯು ಹಲವು ವಾರಸುದಾರರ ನಡುವೆ ವಿಭಾಗವಾಗಿ, ಕಾಲಕ್ರಮೇಣ ಹಲವು ಕೈ ಬದಲಾಗಿದೆ. ಪ್ರಸ್ತುತ ಈ ಜಮೀನು ಕ್ರಯದ ಮೂಲಕ 'ಯುನೈಟೆಡ್ ಗ್ರೀನ್ ವುಡ್ಸ್' ಸಂಸ್ಥೆಯ ವ್ಯವಸ್ಥಾಪಕ ಪಾಲುದಾರರ ಹೆಸರಿಗೆ ವರ್ಗಾವಣೆಯಾಗಿದೆ ಎಂದು ಸಚಿವರು ವಿವರಿಸಿದರು.

ಭೂ ಪರಿವರ್ತನೆ ಪ್ರಕ್ರಿಯೆ: ಪ್ರಸಕ್ತ ಜಮೀನಿನ ಮಾಲೀಕರು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿದ್ದರು. ಈ ಪ್ರಸ್ತಾವನೆಯನ್ನು ಅಫಿಡವಿಟ್ ಆಧಾರದ ಮೇಲೆ ಪರಿಶೀಲಿಸಿ, ತಹಶೀಲ್ದಾರ್, ಸಹಾಯಕ ಕಮಿಷನರ್ ಹಾಗೂ ನಗರ ಯೋಜನಾ ಇಲಾಖೆಯ ತಾಂತ್ರಿಕ ಅಭಿಪ್ರಾಯಗಳನ್ನು ಪಡೆಯಲಾಗಿದೆ. ಈ ಎಲ್ಲಾ ವರದಿಗಳ ಆಧಾರದ ಮೇಲೆ ಜಿಲ್ಲಾಧಿಕಾರಿಗಳು ಕೆಲವು ಷರತ್ತುಗಳನ್ನು ವಿಧಿಸಿ 2025ರ ಜುಲೈ 8ರಂದು ಭೂ ಪರಿವರ್ತನೆಗೆ ಆದೇಶ ಹೊರಡಿಸಿದ್ದಾರೆ ಎಂದು ಮಾಹಿತಿ ನೀಡಿದರು. ಶಿಕ್ಷಣ ಇಲಾಖೆಯ ಜಮೀನಿನ ಮೂಲ ದಾನದ ಉದ್ದೇಶ ಉಲ್ಲಂಘನೆಯಾಗಿರುವ ಬಗ್ಗೆ ಎದ್ದಿರುವ ಗಂಭೀರ ಆರೋಪಗಳನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸುತ್ತಿದೆ. "ಸಾರ್ವಜನಿಕ ಆಸ್ತಿಗೆ ಯಾವುದೇ ರೀತಿಯ ಧಕ್ಕೆಯಾಗಲು ಬಿಡುವುದಿಲ್ಲ. ಅತಿಕ್ರಮಣ ಸಾಬೀತಾದಲ್ಲಿ ಕಾನೂನುಬದ್ಧವಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು," ಎಂದು ಸಚಿವರು ಸದನಕ್ಕೆ ಭರವಸೆ ನೀಡಿದರು.

## ಗುಜರಿ ವ್ಯಾಪಾರಿ ಕೊಲೆ. ಪತ್ನಿ ಸೇರಿ ನಾಲ್ವರ ಬಂಧನ.

ತಿಪಟೂರು

ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಚಿಕ್ಕಕೊಟ್ಟಿಗಹಳ್ಳಿ ಗ್ರಾಮದ ಬಳಿ ನಡೆದಿದ್ದ ಗುಜರಿ ವ್ಯಾಪಾರಿಯ ಕೊಲೆ ಆರೋಪಿಗಳನ್ನ ಬಂಧಿಸುವಲ್ಲಿ ಗ್ರಾಮಾಂತರ ಪೊಲೀಸರು ಯಶಸ್ವಿಯಾಗಿದ್ದಾರೆ.

ದಿನಾಂಕ : 04.03.2026 ರಂದು ತಿಪಟೂರು ತಾಲ್ಲೂಕು ರಂಗಾಪುರ ಸಮೀಪದ ಚಿಕ್ಕಕೊಟ್ಟಿಗೆಹಳ್ಳಿ ಬಳಿ ತಿಪಟೂರು ಗಾಂಧೀನಗರದ ವಾಸಿ ಗುಜರಿ ವ್ಯಾಪಾರ ಮಾಡಿಕೊಂಡಿದ್ದ ಮನ್ಸೂರ್ ಪಾಷ ಬಿನ್ ಲೇಟ್ ಸಜ್ಜಾದ್ , 31 ವರ್ಷ , ರವರನ್ನು ಯಾರೂ ದುಷ್ಕರ್ಮಿಗಳು ಯಾವುದೋ ಕಾರಣಕ್ಕಾಗಿ ಕೊಲೆಮಾಡಿದ ಬಗ್ಗೆ ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊ.ನಂ. 23/2026 ಕಲಂ 103 :ಓಖ ರೀತ್ಯಾ ಪ್ರಕರಣ ದಾಖಲಾಗಿತ್ತು .

## 'ಗ್ಯಾಸ್ ಅಭಾವಕ್ಕೆ ಯುದ್ಧವೇ ಕಾರಣ'

ಬೆಂಗಳೂರು



"ಜಾಗತಿಕ ಮಟ್ಟದಲ್ಲಿ ದಿಢೀರ್ ಎದುರಾಗಿರುವ ಯುದ್ಧದ ಸನ್ನಿವೇಶದಿಂದಾಗಿ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆಯೇ ಹೊರತು, ಇದು ಕೇಂದ್ರ ಸರ್ಕಾರದ ವೈಫಲ್ಯವಲ್ಲ. ವಾಸ್ತವ ಗೊತ್ತಿದ್ದರೂ ಕಾಂಗ್ರೆಸ್ ಬೀದಿಗಿಳಿದು ಪ್ರತಿಭಟಿಸುತ್ತಿರುವುದು ಅವರ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ," ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಬುಧವಾರ ವಿಧಾನಸೌಧದ ಬಳಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸಿಲಿಂಡರ್ ಪೂರೈಕೆ ಸಹಜ ಸ್ಥಿತಿಗೆ ತರಲು ಕೇಂದ್ರ ಸರ್ಕಾರ ಈಗಾಗಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಭರವಸೆ ನೀಡಿದರು.

ರಾಜ್ಯ ಸರ್ಕಾರ ದಿವಾಳಿಯತ್ತ: ಇದೇ ವೇಳೆ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ವಿಜಯೇಂದ್ರ, "ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ ಬಜೆಟ್ ಮಂಡಿಸಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವದಲ್ಲಿ ರಾಜ್ಯದ ಬೊಕ್ಕಸ ಖಾಲಿಯಾಗಿದೆ. ಪೊಲೀಸ್ ಇಲಾಖೆಯ ಸಿಬ್ಬಂದಿಗೆ ಫೆಬ್ರವರಿ ತಿಂಗಳ ವೇತನವನ್ನೂ ನೀಡಲು ಸರ್ಕಾರದ ಬಳಿ ಹಣವಿಲ್ಲ ಎಂದರೆ, ರಾಜ್ಯದ ಆರ್ಥಿಕ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಿಲ್ಲ," ಎಂದು ಪ್ರಶ್ನಿಸಿದರು.

ಮೋದಿ ಸರ್ಕಾರಕ್ಕೆ ಶಕ್ತಿಯಿದೆ: ಯುದ್ಧದ ಮುನ್ಸೂಚನೆ ಯಾರಿಗೂ ಇರುವುದಿಲ್ಲ. ಅನಿರೀಕ್ಷಿತವಾಗಿ ಜಾಗತಿಕ ಸಮಸ್ಯೆಗಳು ಎದುರಾದಾಗ ಪೂರೈಕೆಯಲ್ಲಿ ವ್ಯತ್ಯಾಸವಾಗುವುದು ಸಹಜ. ಇಂತಹ ಕನಿಷ್ಠ ತಿಳಿವಳಿಕೆಯೂ ಇಲ್ಲದೆ ಕಾಂಗ್ರೆಸ್ ರಾಜಕಾರಣ ಮಾಡುತ್ತಿದೆ. ಯುದ್ಧದ ಸಾಧಕ-ಬಾಧಕಗಳನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದ್ದು, ಯಾವುದೇ ದೊಡ್ಡ ಬಿಕ್ಕಟ್ಟನ್ನು ಎದುರಿಸಿ ಸರಿಪಡಿಸುವ ಶಕ್ತಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರಕ್ಕಿದೆ ಎಂದು ಅವರು ಪುನರುಚ್ಚರಿಸಿದರು.

"ಸಿದ್ದರಾಮಯ್ಯ ಅವರಿಗೆ ರಾಜ್ಯವನ್ನು ಅಭಿವೃದ್ಧಿಪಡಿಸಲು ಸುವರ್ಣ ಅವಕಾಶವಿತ್ತು. ಆದರೆ ಎಲ್ಲವನ್ನೂ ಕೈಚೆಲ್ಲಿ ಕೂತಿರುವ ಸರ್ಕಾರ ಈಗ ದಿವಾಳಿಯತ್ತ ಸಾಗುತ್ತಿದೆ," ಎಂದು ಅವರು ಲೇವಡಿ ಮಾಡಿದರು.

## ಕುಲ ಕಸುಬುಗಳಿಗೆ ಸರ್ಕಾರದ ಆರ್ಥಿಕ ಆಸರೆ

ಬೆಂಗಳೂರು



"ಆಧುನಿಕ ಮಾರುಕಟ್ಟೆಯ ಸವಾಲುಗಳ ನಡುವೆಯೂ ಸಾಂಪ್ರದಾಯಿಕ ಕುಲ ಕಸುಬುಗಳನ್ನು ನಂಬಿ ಬದುಕುತ್ತಿರುವ ಕುಟುಂಬಗಳ ರಕ್ಷಣೆ ಮತ್ತು ಏಳಿಗೆಗೆ ರಾಜ್ಯ ಸರ್ಕಾರ ಬದ್ಧವಾಗಿದೆ," ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ತಿಳಿಸಿದರು.

ಬುಧವಾರ ವಿಧಾನ ಪರಿಷತ್ತಿನ ಕಲಾಪದಲ್ಲಿ ಸದಸ್ಯರಾದ ಡಾ. ತಳವಾರ್ ಸಾಬಣ್ಣ ಅವರ ಗಮನಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, ವಿವಿಧ ನಿಗಮಗಳ ಮೂಲಕ ಜಾರಿಯಲ್ಲಿರುವ ಆರ್ಥಿಕ ಸಬಲೀಕರಣ ಯೋಜನೆಗಳ ವಿವರ ನೀಡಿದರು.

ಕುಲ ಕಸುಬುಗಳಿಗಿದೆ ವಿಶೇಷ ಪ್ಯಾಕೇಜ್: ತಾಂತ್ರಿಕ ಬೆಳವಣಿಗೆಯಿಂದಾಗಿ ಸಾಂಪ್ರದಾಯಿಕ ಉತ್ಪನ್ನಗಳಿಗೆ ಬೇಡಿಕೆ ಕುಸಿದಿದ್ದು, ಕುಲ ಕಸುಬುದಾರರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಇದನ್ನು ನೀಗಿಸಲು ಇಲಾಖೆಯು ವಿವಿಧ ಸಮುದಾಯಗಳಿಗೆ ವೃತ್ತಿ ಆಧಾರಿತ ನೆರವು ನೀಡುತ್ತಿದೆ ಎಂದು ಸಚಿವರು ವಿವರಿಸಿದರು.

ಯಾವ ಸಮುದಾಯಕ್ಕೆ ಯಾವ ಯೋಜನೆ?

ಸರ್ಕಾರವು ವಿವಿಧ ಅಭಿವೃದ್ಧಿ ನಿಗಮಗಳ ಮೂಲಕ ಹಮ್ಮಿಕೊಂಡಿರುವ ಪ್ರಮುಖ ಕಾರ್ಯಕ್ರಮಗಳು ಇಲ್ಲಿವೆ.

ಮರಾಠ ಜನಾಂಗ: ಮಿಲಿಟರಿ ಹೋಟೆಲ್ ಸ್ಥಾಪನೆಗೆ ವಿಶೇಷ ನೆರವು.

ಲಿಂಗಾಯತ ಜನಾಂಗ: ವಿಭೂತಿ ಘಟಕಗಳ ನಿರ್ಮಾಣಕ್ಕೆ ಪ್ರತ್ಯೇಕ ಯೋಜನೆ.

ವಿಶ್ವಕರ್ಮ ಜನಾಂಗ: ಪಂಚವೃತ್ತಿ ಯೋಜನೆಗಳ ಮೂಲಕ ಕೌಶಲ್ಯ ವೃದ್ಧಿ.

ಮಡಿವಾಳ & ಸವಿತಾ ಸಮಾಜ: ಧೋಬಿ ವೃತ್ತಿ, ಕ್ಷೌರಿಕ ಮತ್ತು ನಾದಸ್ವರ ವೃತ್ತಿಗಳಿಗೆ ಆಧುನಿಕ ಉಪಕರಣಗಳ ಬೆಂಬಲ. ಕುರುಬ & ದೇವಾಂಗ ಜನಾಂಗ: ಕುರಿ ಸಾಕಾಣಿಕೆ, ಕಂಬಳಿ ನೇಯ್ಗೆ ಹಾಗೂ ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ.

ಗಂಗಾ ಕಲ್ಯಾಣ ಯೋಜನೆಗೆ ಆದ್ಯತೆ: ಹಿಂದುಳಿದ ವರ್ಗಗಳ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವ 'ಗಂಗಾ ಕಲ್ಯಾಣ' ಯೋಜನೆಯನ್ನು ಎಲ್ಲಾ ನಿಗಮಗಳ ವತಿಯಿಂದ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಇದು ರೈತರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಹೊಸ ಶಕ್ತಿ ನೀಡಿದೆ ಎಂದು ಸಚಿವರು ಸದನಕ್ಕೆ ಮಾಹಿತಿ ನೀಡಿದರು.

"ನಮ್ಮ ಜನರ ಸಾಂಪ್ರದಾಯಿಕ ವೃತ್ತಿಗಳು ಕೇವಲ ಕಸುಬಲ್ಲ, ಅವು ನಮ್ಮ ಸಂಸ್ಕೃತಿಯ ಭಾಗ. ಅವುಗಳನ್ನು ಗೌರವಯುತವಾಗಿ ಮುಂದುವರಿಸಲು ಮತ್ತು ಜನರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡಲಿದೆ," ಎಂದು ತಂಗಡಗಿ ಅವರು ಭರವಸೆ ನೀಡಿದರು.

## ನೆನೆಗುದಿಗೆ ಬಿದ್ದಿದ್ದ ಯೋಜನೆಗೆ ಮರುಜೀವ; ವರದಿ ನೀಡುವಂತೆ ಗಡುವು



ಬೆಂಗಳೂರು

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ 184 ಗ್ರಾಮಗಳ ಜನರ ಬಹುಕಾಲದ ಕನಸಾದ ಮಾರ್ಕಂಡೇಯ ಜಲಾಶಯದಿಂದ ಕುಡಿಯುವ ನೀರು ಪೂರೈಸುವ ಯೋಜನೆಯನ್ನು ಶೀಘ್ರದಲ್ಲೇ ಅನುಷ್ಠಾನಗೊಳಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಬುಧವಾರ ವಿಧಾನಸೌಧದಲ್ಲಿ ಮಾಲೂರು ಶಾಸಕ ಕೆ.ವೈ. ನಂಜೇಗೌಡ ಹಾಗೂ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿ ಅವರು ಈ ಮಾಹಿತಿ ನೀಡಿದರು.

ನೆನೆಗುದಿಗೆ ಬಿದ್ದಿದ್ದ ಯೋಜನೆಗೆ ವೇಗ: ಸಭೆಯಲ್ಲಿ ಮಾತನಾಡಿದ ಸಚಿವರು, "2008ರಲ್ಲಿ ಆರಂಭವಾಗಿದ್ದ ಈ ಯೋಜನೆಯು ವಿವಿಧ ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ದಶಕಗಳಿಂದ ನೆನೆಗುದಿಗೆ ಬಿದ್ದಿತ್ತು. ರಾಜ್ಯದ ಪ್ರತಿ ಗ್ರಾಮಕ್ಕೆ ಸುಸ್ಥಿರ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು ನಮ್ಮ ಸರ್ಕಾರದ ಆದ್ಯತೆಯಾಗಿದೆ. ಮಾರ್ಕಂಡೇಯ ಯೋಜನೆಯ ಅನುಷ್ಠಾನಕ್ಕೆ ಎದುರಾಗಿರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು," ಎಂದರು.

ವರದಿಗೆ ನಿರ್ದೇಶನ: ಯೋಜನೆಯ ಪ್ರಸ್ತುತ ಸ್ಥಿತಿಗತಿ ಹಾಗೂ ಅನುಷ್ಠಾನದಲ್ಲಿರುವ ಸಮಸ್ಯೆಗಳ ಕುರಿತು ಚರ್ಚಿಸಿದ ಸಚಿವರು, ಮುಂದಿನ ಸಭೆಯೊಳಗೆ ಸಮಸ್ಯೆಗಳು ಮತ್ತು ಅವುಗಳಿಗೆ ಇರುವ ಪರಿಹಾರಗಳ ಕುರಿತು ಸಮಗ್ರ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ವರದಿಗೆ ನಿರ್ದೇಶನ: ಯೋಜನೆಯ ಪ್ರಸ್ತುತ ಸ್ಥಿತಿಗತಿ ಹಾಗೂ ಅನುಷ್ಠಾನದಲ್ಲಿರುವ ಸಮಸ್ಯೆಗಳ ಕುರಿತು ಚರ್ಚಿಸಿದ ಸಚಿವರು, ಮುಂದಿನ ಸಭೆಯೊಳಗೆ ಸಮಸ್ಯೆಗಳು ಮತ್ತು ಅವುಗಳಿಗೆ ಇರುವ ಪರಿಹಾರಗಳ ಕುರಿತು ಸಮಗ್ರ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಾದ ಸಮೀರ್ ಶುಕ್ಲ, ರಣದೀಪ್ ಡಿ, ಡಾ. ಅರುಂಧತಿದೇವಿ ಸೇರಿದಂತೆ ಪ್ರಮುಖ ಅಧಿಕಾರಿಗಳು ಭಾಗವಹಿಸಿದ್ದರು.

## 137 ಸಿಬ್ಬಂದಿಯಿಂದ ರಕ್ತದಾನ

ಬೆಂಗಳೂರು

ಕೇಂದ್ರ ಮೀಸಲು ಪೊಲೀಸ್ ಪಡೆಯ 87ನೇ ಸಂಸ್ಥಾಪನಾ ದಿನದ ಅಂಗವಾಗಿ ಕರ್ನಾಟಕ ಮತ್ತು ಕೇರಳ ಸೆಕ್ಟರ್‌ನ ಆಶ್ರಯದಲ್ಲಿ ಬೆಂಗಳೂರಿನ ಸಿ.ಆರ್.ಪಿ.ಎಫ್ ಗ್ರೂಪ್ ಸೆಂಟರ್ ಮತ್ತು ಕಂಪೋಸಿಟ್ ಆಸ್ಪತ್ರೆಯ ವತಿಯಿಂದ ಬೃಹತ್ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

ಭದ್ರತೆಯ ಜೊತೆಗೆ ಮಾನವೀಯ ಸೇವೆ: ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಸಹಯೋಗದೊಂದಿಗೆ ನಡೆದ ಈ ಶಿಬಿರವನ್ನು ನಿವೃತ್ತ ಐಪಿಎಸ್ ಅಧಿಕಾರಿ ಹಾಗೂ ರೆಡ್ ಕ್ರಾಸ್ ಸೊಸೈಟಿಯ ಕರ್ನಾಟಕ ಶಾಖೆಯ ಉಪಾಧ್ಯಕ್ಷರಾದ ಬಿ. ಭಾಸ್ಕರ್ ರಾವ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಸಿ.ಆರ್.ಪಿ.ಎಫ್ ಕೇವಲ ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವ ಪ್ರಬಲ ಪಡೆಯಷ್ಟೇ ಅಲ್ಲ, ಸಾಮಾಜಿಕ ಜವಾಬ್ದಾರಿಯುತ ಸಂಸ್ಥೆಯಾಗಿಯೂ ಗುರುತಿಸಿಕೊಂಡಿದೆ. ಸಮಾಜದ ಕಲ್ಯಾಣಕ್ಕಾಗಿ ರಕ್ತದಾನದಂತಹ ಉದಾತ್ತ ಸೇವಾ ಚಟುವಟಿಕೆಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ," ಎಂದರು. ಭದ್ರತೆಯ ಜೊತೆಗೆ ಮಾನವೀಯ ಸೇವೆ: ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಸಹಯೋಗದೊಂದಿಗೆ ನಡೆದ ಈ ಶಿಬಿರವನ್ನು ನಿವೃತ್ತ ಐಪಿಎಸ್ ಅಧಿಕಾರಿ ಹಾಗೂ ರೆಡ್ ಕ್ರಾಸ್ ಸೊಸೈಟಿಯ ಕರ್ನಾಟಕ ಶಾಖೆಯ ಉಪಾಧ್ಯಕ್ಷರಾದ ಬಿ. ಭಾಸ್ಕರ್ ರಾವ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಸಿ.ಆರ್.ಪಿ.ಎಫ್ ಕೇವಲ ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವ ಪ್ರಬಲ ಪಡೆಯಷ್ಟೇ ಅಲ್ಲ, ಸಾಮಾಜಿಕ ಜವಾಬ್ದಾರಿಯುತ ಸಂಸ್ಥೆಯಾಗಿಯೂ ಗುರುತಿಸಿಕೊಂಡಿದೆ. ಸಮಾಜದ ಕಲ್ಯಾಣಕ್ಕಾಗಿ ರಕ್ತದಾನದಂತಹ ಉದಾತ್ತ ಸೇವಾ ಚಟುವಟಿಕೆಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ," ಎಂದರು.

ಯೋಧರ ಉದಾತ್ತ ಕೊಡುಗೆ: ತಮ್ಮ ಕರ್ತವ್ಯದ ಆಚೆಗೂ ಸಾರ್ವಜನಿಕ ಸೇವೆಗೆ ಬದ್ಧತೆ ಪ್ರದರ್ಶಿಸಿದ ಒಟ್ಟು 137 ಸಿ.ಆರ್.ಪಿ.ಎಫ್ ಸಿಬ್ಬಂದಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ರೆಡ್ ಕ್ರಾಸ್‌ನ ವೈದ್ಯಕೀಯ ತಂಡಗಳ ಮಾರ್ಗದರ್ಶನದಲ್ಲಿ ಈ ಅಭಿಯಾನ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದಲ್ಲಿ ಐಜಿ ಕೆ.ಕೆ. ಸೆಕ್ಟರ್‌ನ ಡಾ. ವಿಪುಲ್ ಕುಮಾರ್ (ಐಪಿಎಸ್) ಸೇರಿದಂತೆ ಸಿ.ಆರ್.ಪಿ.ಎಫ್‌ನ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಡಾ. ವಿಪುಲ್ ಕುಮಾರ್ ಅವರು ಸಮುದಾಯದ ಸೇವೆಗಾಗಿ ರಕ್ತ ನೀಡಿದ ಎಲ್ಲಾ ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಪಡೆಯ "ಸೇವೆ ಮತ್ತು ನಿಷ್ಠೆ" ಎಂಬ ಧ್ಯೇಯವಾಕ್ಯವನ್ನು ಅನ್ವರ್ಥಗೊಳಿಸುವಂತೆ ನಡೆದ ಈ ರಕ್ತದಾನ ಅಭಿಯಾನವು ಸಿ.ಆರ್.ಪಿ.ಎಫ್‌ನ 87ನೇ ಸಂಸ್ಥಾಪನಾ ದಿನದ ಸಂಭ್ರಮಕ್ಕೆ ವಿಶೇಷ ಮೆರುಗು ನೀಡಿತು.

## ಅಕ್ರಮ ದಾಸ್ತಾನು, ದರ ಏರಿಕೆ ಮಾಡಿದರೆ ಜೈಲು ಶಿಕ್ಷೆ ಫಿಕ್ಸ್: ಡಿಸಿ

ಕೋಲಾರ



ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿನ ಯುದ್ಧದ ವಿದ್ಯಮಾನಗಳನ್ನು ಬಂಡವಾಳ ಮಾಡಿಕೊಂಡು ಜಿಲ್ಲೆಯಲ್ಲಿ ಆಹಾರ ಪದಾರ್ಥಗಳು ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವುದು ಅಥವಾ ಅಕ್ರಮ ದಾಸ್ತಾನು ಮಾಡುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಇಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಎಂ.ಆರ್. ರವಿ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಾರ್ವಜನಿಕರಿಗೆ ಅನಗತ್ಯ ತೊಂದರೆ ನೀಡುವ ಹಾಗೂ ಕೃತಕ ಅಭಾವ ಸೃಷ್ಟಿಸುವ ವರ್ತಕರ ವಿರುದ್ಧ 'ಅಗತ್ಯ ವಸ್ತುಗಳ ಕಾಯ್ದೆ' ಅಡಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕೃತಕ ಅಭಾವ ಸೃಷ್ಟಿಸಿದರೆ ಕಠಿಣ ಶಿಕ್ಷೆ: ಯುದ್ಧದ ನೆಪವೊಡ್ಡಿ ಅಡುಗೆ ಅನಿಲ, ಖಾದ್ಯ ತೈಲ ಹಾಗೂ ಧಾನ್ಯಗಳನ್ನು ಅಕ್ರಮವಾಗಿ ದಾಸ್ತಾನು ಮಾಡುವುದು ಅಥವಾ ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆ 1955ರ ಅಡಿಯಲ್ಲಿ ಮೊಕದ್ದಮೆ ದಾಖಲಿಸಲಾಗುವುದು.

ಜಿಲ್ಲೆಯಾದ್ಯಂತ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ಗೋದಾಮುಗಳ ಮೇಲೆ ನಿರಂತರ ನಿಗಾ ವಹಿಸಲಿದ್ದಾರೆ ಎಂದು ಡಿಸಿ ತಿಳಿಸಿದರು.

ರೈತರಿಗೆ ವಂಚಿಸಿದರೆ ಲೈಸೆನ್ಸ್ ರದ್ದು: ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳು ಚುರುಕುಗೊಂಡಿರುವ ಈ ಸಮಯದಲ್ಲಿ, ರೈತರಿಗೆ ಬೇಕಾದ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕೀಟನಾಶಕಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಜಿಲ್ಲಾಡಳಿತದ ಗಮನಕ್ಕೆ ಬಂದಿದೆ. ನಿಗದಿತ ಬೆಲೆಗಿಂತ ಹೆಚ್ಚಿನ ದರಕ್ಕೆ ಕೃಷಿ ಪರಿಕರ ಮಾರಾಟ ಮಾಡುವ ವರ್ತಕರ ಮಾರಾಟ ಪರವಾನಗಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗುವುದು. ಇಂತಹ ಪ್ರಕರಣಗಳಲ್ಲಿ ತೊಡಗುವವರ ವಿರುದ್ಧ ರಸಗೊಬ್ಬರ ನಿಯಂತ್ರಣ ಆದೇಶ ಹಾಗೂ ಸಂಬಂಧಿತ ಕೃಷಿ ಕಾಯ್ದೆಗಳಡಿ ಕ್ರಿಮಿನಲ್ ಪ್ರಕರಣ ದಾಖಲಿಸಲು ತಹಶೀಲ್ದಾರ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಯಾವುದೇ ವರ್ತಕರು ಅಥವಾ ವಿತರಕರು ನಿಗದಿಗಿಂತ ಹೆಚ್ಚಿನ ದರ ವಸೂಲಿ ಮಾಡಿದರೆ ಅಥವಾ ಸರಕು ನೀಡಲು ನಿರಾಕರಿಸಿದರೆ ತಕ್ಷಣವೇ ಹತ್ತಿರದ ತಹಶೀಲ್ದಾರ್ ಕಚೇರಿ ಅಥವಾ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರ ಗಮನಕ್ಕೆ ತರಬೇಕು. ಜಿಲ್ಲೆಯಲ್ಲಿ ಯಾವುದೇ ವಸ್ತುವಿನ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದ್ದು, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಅವರು ಭರವಸೆ ನೀಡಿದ್ದಾರೆ.

## ಮಳಿಗೆಗಳಿಗೆ ಬಿಬಿಎಂಪಿ 'ನೋಟಿಸ್' ಶಾಕ್!

ಬೆಂಗಳೂರು

ನೋಟಿಸ್ ನೀಡಿದರೂ ಯಾವುದೇ ಕ್ರಮ ಕೈಗೊಳ್ಳದ ಮತ್ತು ನೀಡಿದ್ದ ಕಾಲಾವಕಾಶ ಮುಗಿದ ಕಾರಣ, ದಕ್ಷಿಣ ಪಾಲಿಕೆಯ ಅಧಿಕಾರಿ ಕೆ.ಎನ್. ರಮೇಶ್ ಅವರ ನೇತೃತ್ವದಲ್ಲಿ ಬುಧವಾರ ಕಾರ್ಯಾಚರಣೆ ನಡೆಸಲಾಯಿತು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪರವಾನಗಿ ಪಡೆಯದೆ ಅನಧಿಕೃತವಾಗಿ ಕಾರ್ಯಾಚರಿಸುತ್ತಿದ್ದ ಏಳು ಉದ್ದಿಮೆಗಳಿಗೆ ಅಧಿಕಾರಿಗಳು ಬುಧವಾರ ಬೀಗ ಮುದ್ರೆ ಹಾಕಿದ್ದಾರೆ. ಪಾಲಿಕೆಯ ನಿಯಮಗಳನ್ನು ಉಲ್ಲಂಘಿಸಿ ಉದ್ದಿಮೆ ನಡೆಸುತ್ತಿದ್ದ ಮಾಲೀಕರಿಗೆ ನೀಡಿದ್ದ ಗಡುವು ಮುಗಿದ ಹಿನ್ನೆಲೆಯಲ್ಲಿ ಈ ಕಠಿಣ ಕ್ರಮ ಕೈಗೊಳ್ಳಲಾಗಿದೆ.



145 ಉದ್ದಿಮೆಗಳಿಗೆ ನೋಟಿಸ್:

ಗೊಟ್ಟಿಗೆರೆ ವಾರ್ಡ್‌ನ ಪಿಲ್ಲಗಾನಹಳ್ಳಿ ಮುಖ್ಯರಸ್ತೆಯಲ್ಲಿ ಹಲವು ಉದ್ದಿಮೆಗಳು ಪಾಲಿಕೆಯಿಂದ ಯಾವುದೇ ಅಧಿಕೃತ ಪರವಾನಗಿ ಪಡೆಯದೆ ನಡೆಯುತ್ತಿರುವುದು ಸಮೀಕ್ಷೆಯ ವೇಳೆ ಪತ್ತೆಯಾಗಿತ್ತು. ಈ ಸಂಬಂಧ ಪಾಲಿಕೆ ವತಿಯಿಂದ ಸುಮಾರು 145 ಉದ್ದಿಮೆಗಳಿಗೆ ಈಗಾಗಲೇ ಸೂಚನಾ ಪತ್ರ (ನೋಟಿಸ್) ಜಾರಿ ಮಾಡಲಾಗಿತ್ತು. ನೋಟಿಸ್‌ನಲ್ಲಿ ಸ್ವಯಂಪ್ರೇರಿತವಾಗಿ ಉದ್ದಿಮೆಗಳನ್ನು ಮುಚ್ಚಲು ಅಥವಾ ಪರವಾನಗಿ ಪಡೆಯಲು ತಿಳಿಸಲಾಗಿತ್ತು.

ಗ್ರಾನೈಟ್ ಫ್ಯಾಕ್ಟರಿ, ಗೋಡೌನ್, ಎಫ್.ಎಸ್. ಕೇಟರಿಂಗ್, ಎಸ್.ಕೆ. ಮೆಟಲ್ ಫ್ಯಾಬ್ರಿಕೇಟರ್ಸ್, ಬೈಕ್ ಝೋನ್ ಗ್ಯಾರೇಜ್, ಝೆಡ್.ಎಸ್. ಆಟೋಗ್ಲಾಸ್ ಮತ್ತು ಪ್ಲೈವುಡ್, ಆರ್.ಕೆ. ಸ್ಟೀಲ್ ಟ್ರೇಡರ್ಸ್ ಫ್ಯಾಬ್ರಿಕೇಟರ್ಸ್ ಪ್ರಿಯದರ್ಶಿನಿ ಎಂಟರ್‌ಪ್ರೈಸಸ್ ಈ ವೇಳೆ ಕೆಳಗಿನ 7 ಉದ್ದಿಮೆಗಳಿಗೆ ಬೀಗ ಮುದ್ರೆ ಹಾಕಲಾಗಿದೆ.

"ಅನಧಿಕೃತ ಉದ್ದಿಮೆಗಳ ವಿರುದ್ಧ ಪಾಲಿಕೆಯ ಈ ಕಾರ್ಯಾಚರಣೆ ಮುಂದಿನ ದಿನಗಳಲ್ಲೂ ಮುಂದುವರಿಯಲಿದೆ. ಪ್ರತಿಯೊಂದು ಉದ್ದಿಮೆಯೂ ನಿಯಮಾನುಸಾರ ಪರವಾನಗಿ ಪಡೆಯುವುದು ಕಡ್ಡಾಯ," ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಸೆಮಿಕಂಡಕ್ಟರ್ ಹಬ್ ಆಗಲಿರುವ ಭಾರತ: ಉದ್ಯೋಗಗಳ ಸೃಷ್ಟಿಗೆ ಮುನ್ನುಡಿ

ಬೆಂಗಳೂರು / ನವದೆಹಲಿ

ಭಾರತವನ್ನು ಜಾಗತಿಕ ಸೆಮಿಕಂಡಕ್ಟರ್ ಭೂಪಟದಲ್ಲಿ ಮುಂಚೂಣಿಗೆ ತರುವ 'ಇಂಡಿಯಾ ಸೆಮಿಕಂಡಕ್ಟರ್ ಮಿಷನ್' ವೇಗ ಪಡೆದುಕೊಂಡಿದ್ದು, ಮುಂದಿನ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಸುಮಾರು 20 ಲಕ್ಷ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಈ ಬೃಹತ್ ಮಿಷನ್‌ನಲ್ಲಿ ಕರ್ನಾಟಕದ ಪ್ರಮುಖ ಕೇಂದ್ರ, ರಾಜ್ಯ ಹಾಗೂ ಖಾಸಗಿ ತಾಂತ್ರಿಕ ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು, ರಾಜ್ಯದ ಯುವಜನತೆಗೆ ಜಾಗತಿಕ ಮಟ್ಟದ ವೇದಿಕೆ ಸಿದ್ಧವಾಗುತ್ತಿದೆ.

ಕೇವಲ 4 ವರ್ಷದಲ್ಲಿ ಅಸಾಧಾರಣ ಸಾಧನೆ: 10 ವರ್ಷಗಳಲ್ಲಿ 85,000 ಸೆಮಿಕಂಡಕ್ಟರ್ ವಿನ್ಯಾಸ ಎಂಜಿನಿಯರ್‌ಗಳಿಗೆ ತರಬೇತಿ ನೀಡುವ ಗುರಿಯನ್ನು ಭಾರತ ಹೊಂದಿತ್ತು. ಆದರೆ, 'ಚಿಪ್ಸ್-ಟು-ಸ್ಟಾರ್ಟ್ ಅಪ್ಸ್' ಕಾರ್ಯಕ್ರಮದ ಮೂಲಕ ಕೇವಲ 4 ವರ್ಷಗಳಲ್ಲೇ ಈ ದಿಶೆಯಲ್ಲಿ ಭಾರತ ಗಮನಾರ್ಹ ಪ್ರಗತಿ ಸಾಧಿಸಿದೆ. ಸದ್ಯ ದೇಶದ



315 ಪ್ರಮುಖ ಶೈಕ್ಷಣಿಕ ಸಂಸ್ಥೆಗಳಲ್ಲಿ ಅತ್ಯಾಧುನಿಕ ಎಲೆಕ್ಟ್ರಾನಿಕ್ ಡಿಸೈನ್ ಆಟೋಮೇಷನ್ ಪರಿಕರಗಳನ್ನು ಅಳವಡಿಸಲಾಗಿದೆ.

ವಿಶ್ವದ ಅತಿದೊಡ್ಡ ತರಬೇತಿ ಯೋಜನೆ: ಜಾಗತಿಕ ಉದ್ಯಮ ದಿಗ್ಗಜರಾದ ಕ್ಯಾಡೆನ್ಸ್, ಸಿನೋಪ್ಸಿಸ್, ಸೀಮೆನ್ಸ್ ಮತ್ತು ಎಎಮ್‌ಡಿ ಸಹಯೋಗದೊಂದಿಗೆ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಇದು ವಿಶ್ವದ ಅತಿದೊಡ್ಡ ಮುಕ್ತ-ಪ್ರವೇಶ ಇಡಿಎ ಕಾರ್ಯಕ್ರಮವಾಗಿದ್ದು, ಇಲ್ಲಿಯವರೆಗೆ 1.85 ಕೋಟಿ ಗಂಟೆಗಳ ಕಾಲ ಚಿಪ್ ವಿನ್ಯಾಸ ತರಬೇತಿಗಾಗಿ ಈ ತಾಂತ್ರಿಕ ಪರಿಕರಗಳನ್ನು ಬಳಸಲಾಗಿದೆ.

ಕರ್ನಾಟಕದ ಪ್ರಮುಖ ಪಾತ್ರ: ಸೆಮಿಕಂಡಕ್ಟರ್ ಮಿಷನ್‌ನಲ್ಲಿ ಕರ್ನಾಟಕವು 'ಪ್ರತಿಭೆಗಳ ಕಣಜ'ವಾಗಿ ಹೊರಹೊಮ್ಮುತ್ತಿದೆ. ರಾಜ್ಯದ ಶೈಕ್ಷಣಿಕ ಸಂಸ್ಥೆಗಳು ಸೆಮಿಕಂಡಕ್ಟರ್ ವಿನ್ಯಾಸ, ಫ್ಯಾಬ್ರಿಕೇಶನ್, ಪರೀಕ್ಷೆ ಮತ್ತು ಮೌಲ್ಯೀಕರಣದಲ್ಲಿ ವಿಶೇಷ ತರಬೇತಿ ನೀಡುತ್ತಿವೆ. 'ಸೆಮಿಕಾನ್ 2.0' ಅಡಿಯಲ್ಲಿ ಈ ಯೋಜನೆಯನ್ನು ಒಟ್ಟು 500 ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸಲಾಗುತ್ತಿದ್ದು, ಇದು ರಾಜ್ಯದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ.

2 ಟ್ರಿಲಿಯನ್ ಡಾಲರ್ ಮಾರುಕಟ್ಟೆ: ಜಾಗತಿಕ ಸೆಮಿಕಂಡಕ್ಟರ್ ಉದ್ಯಮವು ಶೀಘ್ರದಲ್ಲೇ 2 ಟ್ರಿಲಿಯನ್ ಯುಎಸ್ ಡಾಲರ್ ಮೌಲ್ಯವನ್ನು ತಲುಪುವ ನಿರೀಕ್ಷೆಯಿದೆ. ಈ ಬೃಹತ್ ಮಾರುಕಟ್ಟೆಗೆ ಬೇಕಾದ ನುರಿತ ವೃತ್ತಿಪರರನ್ನು ಭಾರತವೇ ಪೂರೈಸಲಿದೆ. ಇದರಿಂದಾಗಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಹಾಗೂ ಅಸ್ಸಾಂನಿಂದ ಗುಜರಾತ್‌ವರೆಗಿನ ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ತಂತ್ರಜ್ಞಾನದ ಉದ್ಯೋಗಗಳು ದೊರೆಯಲಿವೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

## ಮಾಲೂರು ಉಳಿಸಿ, ಫ್ಲೈ ಓವರ್ ಬೇಡ: ಬೃಹತ್ ಜನಜಾಗೃತಿ ಜಾಥಾ

ಮಾಲೂರು

ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅವೈಜ್ಞಾನಿಕ ಫ್ಲೈ ಓವರ್ ರಸ್ತೆಯಿಂದ ಸಂಚಾರ ದಟ್ಟಣೆ ಹೆಚ್ಚುವುದಲ್ಲದೆ, ಸ್ಥಳೀಯ ವ್ಯಾಪಾರ-ವಹಿವಾಟಿನ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಹೀಗಾಗಿ ಕೂಡಲೇ ಫ್ಲೈ ಓವರ್ ಯೋಜನೆ ರದ್ದುಪಡಿಸಿ, ಹೊರವರ್ತುಲ (ರಿಂಗ್) ರಸ್ತೆ ಅಭಿವೃದ್ಧಿಪಡಿಸಬೇಕು ಎಂದು ಜೆಡಿಎಸ್ ಮುಖಂಡ ಜಿ.ಇ. ರಾಮೇಗೌಡ ಒತ್ತಾಯಿಸಿದರು.

ನಗರದ ಅಂಬೇಡ್ಕರ್ ಉದ್ಯಾನವನದಲ್ಲಿ ಜಮಾಯಿಸಿದ ಬಿಜೆಪಿ, ಜೆಡಿಎಸ್ ಮುಖಂಡರು, ಮುಖ್ಯರಸ್ತೆಯ ಕಟ್ಟಡಗಳ ಮಾಲೀಕರು ಹಾಗೂ ನೂರಾರು ಸಾರ್ವಜನಿಕರು ಹಮ್ಮಿಕೊಂಡಿದ್ದ ಬೃಹತ್ ಜನಜಾಗೃತಿ ಪ್ರತಿಭಟನಾ ಜಾಥಾವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಖಾಸಗಿ ಲಾಭಕ್ಕಾಗಿ ಅಭಿವೃದ್ಧಿಯ ನಾಟಕ?

"2,500 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಮಾಡುತ್ತಿರುವುದಾಗಿ ಶಾಸಕರು ಹೇಳುತ್ತಿದ್ದಾರೆ. ಆದರೆ ಇದು ಸರ್ಕಾರದ ಹಣವಲ್ಲ, ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣವಾಗುತ್ತಿರುವ ರಸ್ತೆ. ಮೇಲ್ಸಾಲಂ ನಿರ್ಮಾಣವಾದರೆ ಸ್ಥಳೀಯರು ಸಂಚರಿಸಲು ಟೋಲ್ ಪಾವತಿಸಬೇಕಾಗುತ್ತದೆ. ಇದು ಜನರ ಅಭಿವೃದ್ಧಿಯೋ ಅಥವಾ ಖಾಸಗಿಯವರ ಅಭಿವೃದ್ಧಿಯೋ?" ಎಂದು ರಾಮೇಗೌಡ ಪ್ರಶ್ನಿಸಿದರು. "ಫ್ಲೈ ಓವರ್ ಬದಲಿಗೆ ರಿಂಗ್ ರಸ್ತೆ ಮಾಡಿ ಅದಕ್ಕೆ ನಿಮ್ಮ ಹೆಸರನ್ನೇ ಇಡಿ, ನಾವು ಬೆಂಬಲಿಸುತ್ತೇವೆ. ಆದರೆ ಕಮಿಷನ್ ಆಸೆಗಾಗಿ ನಗರವನ್ನು ಹಾಳು



ಮಾಡಬೇಡಿ" ಎಂದು ಕಿಡಿಕಾರಿದರು.

ರೈಲ್ವೆ ಬ್ರಿಡ್ಜ್ ಅಗಲೀಕರಣವಾಗಲಿ: ಜೆಡಿಎಸ್ ಮುಖಂಡ ಹೂಡಿ ವಿಜಯ್ ಕುಮಾರ್ ಮಾತನಾಡಿ, "ಪ್ರತಿನಿತ್ಯ ಟ್ರಾಫಿಕ್ ಜಾಮ್ ಆಗುತ್ತಿರುವುದು ರೈಲ್ವೆ ಸೇತುವೆಯ ಬಳಿ. ಆ ಬ್ರಿಡ್ಜ್ ಅಗಲೀಕರಣ ಮಾಡದೆ ಫ್ಲೈ ಓವರ್ ನಿರ್ಮಿಸಿದರೆ ಸಮಸ್ಯೆ ಮತ್ತಷ್ಟು ಜಟಿಲವಾಗುತ್ತದೆ. ಮೊದಲು ನಗರದ ರಸ್ತೆ ಅಗಲೀಕರಣ ಮಾಡಿ, ಆರು ತಿಂಗಳ ಬಳಿಕ ಸಮಸ್ಯೆ ಬಗೆಹರಿಯದಿದ್ದರೆ ಫ್ಲೈ ಓವರ್ ಬಗ್ಗೆ ಯೋಚಿಸಿ" ಎಂದು ಸಲಹೆ ನೀಡಿದರು.

ರಿಂಗ್ ರಸ್ತೆಯೇ ಪರಿಹಾರ: ತಾಲ್ಲೂಕು ಬಿಜೆಪಿ ಅಧ್ಯಕ್ಷ ಟಿ.ಬಿ. ಕೃಷ್ಣಪ್ಪ ಮಾತನಾಡಿ, ನಗರದ ಸೌಂದರ್ಯ ಮತ್ತು ಸುಗಮ ಸಂಚಾರಕ್ಕೆ ಹೊರವರ್ತುಲ ರಸ್ತೆಯೇ ಏಕೈಕ ಪರಿಹಾರ. ನಾಲ್ಕು ಪಥದ ರಸ್ತೆ ನಿರ್ಮಾಣವಾದರೆ ಸಾಕಾಗಿದೆ, ಅವೈಜ್ಞಾನಿಕ ಮೇಲ್ಸಾಲಂನಿಂದ ನಗರದ ಆರ್ಥಿಕತೆಗೆ ಪೆಟ್ಟು ಬೀಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy